ಅಧ್ಯಕ್ಷರು.—ಸನ್ಮಾನ್ಯ ಸ್ನೇಹಿತರೆ, ಸಂತ್ ಹರಚಂದಸಿಂಗ್ ಲೋಂಗೋವಾಲರ ಕೊಲೆ ಏನಾಗಿದೆ ಅದು ಬಹಳ ಕರಾಳವಾದಂಥ ಕೃತ್ಯ. ಇಂತಹ ಕೊಲೆಗಳು ನಮ್ಮ ದೇಶದಲ್ಲಿ ನಿನ್ನೆ ನಡೆದಿದ್ದು ಅಲ್ಲದೆ ಈ ಹಿಂದೆ ಪಾರ್ಲಿಮೆಂಟ್ ಸದಸ್ಯರಾದ ಮೆಕ್ಕನ್‌ರವರ ಕೊಲೆಯಾಗಿದೆ, ಶ್ರೀಮತಿ ಇಂದಿರಾ ಗಾಂಧಿಯವರ ಕೊಲೆಯಾಗಿದೆ. ಇಂತಹ ಕರಾಳ ಕೃತ್ಯಗಳು ನಡೆದಂಥ ಸಂದರ್ಭದಲ್ಲಿ ಕೇಂದ್ರ ಸರ್ಕಾರವಾಗಲಿ, ರಾಜ್ಯ ಸರ್ಕಾರವಾಗಲಿ ಮುಂಜಾಗರೂಕತೆ ವಹಿಸತಕ್ಕಂಥಾದ್ದು ಆದ್ಯ ಕರ್ತವ್ಯವಾಗಿದೆ. ಈ ಒಂದು ಕರಾಳ ಕೃತ್ಯದಲ್ಲಿ ನಿಮ್ಮೆಲ್ಲರ ಪರವಾಗಿ ನಾನು ಲೋಂಗೋವಾಲರ ಪರಿವಾರದವರ ದುಃಖದಲ್ಲಿ ಪಾಲುಗಾರನಾಗಿ, ಅವರ ನಿಧನದ ಬಗ್ಗೆ ಶೋಕವನ್ನು ವ್ಯಕ್ತಪಡಿಸಿ, ಈ ಒಂದು ಕರಾಳ ಕೃತ್ಯವನ್ನು ಖಂಡಿಸಿ, ಅವರಿಗೆ ಚಿರಶಾಂತಿ ದೊರಕಲೆಂದು ತಮ್ಮೆಲ್ಲರ ಪರವಾಗಿ ಪ್ರಾರ್ಥಿಸುತ್ತೇನೆ.

ಈಗ ಮೃತರ ಗೌರವಾರ್ಥ ಒಂದು ನಿಮಿಷ ಮೌನ ಆಚರಣೆ ಮಾಡೋಣ.

(ಸಭೆಯು ದಿವಂಗತ ಸಂತ್ ಹರಚಂದ್‌ಸಿಂಗ್ ಲೋಂಗೋವಾಲರ ಗೌರವಾರ್ಥ ಒಂದು ನಿಮಿಷ ಮೌನವನ್ನು ಆಚರಿಸಿತು)

ವಿತ್ತೀಯ ಕಾರ್ಯಕಲಾಪಗಳು

೧೯೮೫–೮೬ನೇ ಸಾಲಿಗೆ ಸಂಬಂಧಿಸಿದ ಬೇಡಿಕೆಗಳ ಮೇಲಿನ ಚರ್ಚೆ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ನಗರಾಭಿವೃದ್ಧಿ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೆ, ನನ್ನ ಬೇಡಿಕೆಗಳಿಗೆ ಸಂಬಂಧಪಟ್ಟ ಚರ್ಚೆಯಲ್ಲಿ ೧೨ಜನ ಮಾನ್ಯ ಸದಸ್ಯರು ಭಾಗವಹಿಸಿದ್ದಾರೆ, ಹಲವಾರು ಸಲಹಾ ಸೂಚನೆಗಳನ್ನು ಕೊಟ್ಟಿದ್ದಾರೆ, ಅವರಿಗೆ ನನ್ನ ಧನ್ಯವಾದಗಳು. ಹಲವು ಟೀಕೆ ಟಿಪ್ಪಣಿಗಳು ಬಂದಿವೆ. ಅವರು ಮಾಡಿದ ಟೀಕೆಟಿಪ್ಪಣಿಗಳನ್ನು ಗಮನದಲ್ಲಿಟ್ಟುಕೊಂಡು ನಾನು ಕಾರ್ಯಕ್ರಮಗಳನ್ನು ನಡೆಸಿಕೊಂಡು ಹೋಗಲಿಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ ನಮ್ಮ ರಾಜ್ಯದಲ್ಲಿ ೬ ಸಿಟಿ ಮುನಿಸಿಪಲ್ ಕಾರ್ಪೊರೇಷನ್ಸ್ ಇವೆ, ೧೬ ಸಿಟಿ ಮುನಿಸಿಪಾಲಿಟಿ ಕೌನ್ಸಿಲ್ಸ್ ಇವೆ, ೨೧೧ ಟೌನ್ ಮುನಿಸಿಪಲ್ ಕೌನ್ಸಿಲ್ಸ್ ಇವೆ, ೧೩ನೋಟಿಫೈಡ್ ಏರಿಯ ಕಮಿಟಿಗಳಿವೆ, ಎರಡು ಸ್ಯಾನಿಟರಿ ಬೋರ್ಡ್ ಇವೆ. ಒಟ್ಟು ೨೪೮ ಸ್ಥಳೀಯ ಸಂಸ್ಥೆಗಳಿವೆ. ನನಗೆ ಈ ನಗರಾಭಿವೃದ್ಧಿ ಇಲಾಖೆಯನ್ನು ವಹಿಸಿಕೊಟ್ಟಾಗ ಈ ಸ್ಥಳೀಯ ಸಂಸ್ಥೆಗಳಲ್ಲಿರತಕ್ಕ ಸಮಸ್ಯೆಗಳನ್ನು ತಿಳಿದುಕೊಳ್ಳುವುದಕ್ಕೆ, ಅರ್ಥಮಾಡಿಕೊಳ್ಳುವುದಕ್ಕೆ ನಾನು ಮೊದಲು ಪ್ರಯತ್ನ ಮಾಡಿದ್ದೇನೆ. ಈ ಒಂದು ದಿಶೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಆಯಾ ಪ್ರದೇಶದ ಮುನಿಸಿಪಲ್ ಪ್ರೆಸಿಡೆಂಟರುಗಳನ್ನು, ಚೀಫ್ ಆಫೀಸರುಗಳನ್ನು ಕರೆದು ಮಾತನಾಡಿ ಸಮಸ್ಯೆಗಳನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಈ ಕೆಲಸ ಪೂರ್ಣ ಮಾಡುವುದಕ್ಕೆ ಸುಮಾರು ಎರಡು ತಿಂಗಳ ಕಾಲ ಹಿಡಿಯಿತು. ಇದರಿಂದ ಸ್ಥಳೀಯ ಸಂಸ್ಥೆಗಳಿರತಕ್ಕಂಥ ನೂರಾರು ಸಮಸ್ಯೆಗಳ ಬಗ್ಗೆ ನನಗೆ ತಿಳಿದುಕೊಳ್ಳುವುದಕ್ಕೆ ಸಹಾಯಕವಾಯಿತು. ಸಮಸ್ಯೆಯನ್ನು ತಿಳಿದುಕೊಳ್ಳದೆ ಪರಿಹಾರ ಹುಡುಕುವುದು ಅಷ್ಟು ಒಳ್ಳೆಯ ಕೆಲಸವಲ್ಲ ಎನ್ನುವುದು ನನ್ನ ತಿಳುವಳಿಕೆ. ಆದ್ದರಿಂದ ನಾನು ಈ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಈ ೨೪೮ ಸ್ಥಳೀಯ ಸಂಸ್ಥೆಗಳ ಕಕ್ಷೆಯಲ್ಲಿ ನಮ್ಮ ರಾಜ್ಯದ ಸುಮಾರು ಶೇಕಡ ೩೦ರಷ್ಟು ಜನ ವಾಸ ಮಾಡುತ್ತಾರೆ. ಈ ೩೦ರಲ್ಲಿ ಶೇಕಡ ೩೦ರಷ್ಟು ಜನ ಬೆಂಗಳೂರು ನಗರದಲ್ಲಿ ವಾಸ ಮಾಡುತ್ತಾರೆ, ಕಳೆದ ಒಂದು ದಶಕದಲ್ಲಿ ನಗರಪ್ರದೇಶಗಳ ಜನಸಂಖ್ಯೆ ಬೆಳೆಯುತ್ತಿದೆ. ಗ್ರಾಮಾಂತರ ಪ್ರದೇಶಗಳಿಂದ ಕೆಲಸವನ್ನು ಹುಡುಕಿಕೊಂಡು, ಜೀವನೋಪಾಯವನ್ನು ಹುಡುಕಿಕೊಂಡು, ವ್ಯಾಪಾರವನ್ನು ಹುಡುಕಿಕೊಂಡು ಜೀವನದ ಆರ್ಥಿಕ ಮಟ್ಟವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಜನ ಬರುತ್ತಾ ಇದ್ದಾರೆ. ಈ ಜನ ಪಟ್ಟಣಗಳಿಗೆ ಧಾವಿಸಿ ಬರತಕ್ಕಂಥ ಹಿನ್ನೆಲೆಯಲ್ಲಿ ಹಲವಾರು ಹೊಸ ಸಮಸ್ಯೆಗಳು ಹುಟ್ಟಿಕೊಂಡಿವೆ. ಈ ಹೊಸ ಸಮಸ್ಯೆಗಳನ್ನು ಹಾಲಿ ಇರತಕ್ಕಂಥ, ನಗರಸಭೆಗಳಿಗಾಗಲಿ, ಪುರಸಭೆಗಳಿಗಾಗಲಿ ನಿವಾರಿಸತಕ್ಕ ಆರ್ಥಿಕಶಕ್ತಿ ಇದ್ದ ಹಾಗೆ ನನಗೆ ಕಾಣುವುದಿಲ್ಲ. ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸತಕ್ಕ ಪ್ರಯತ್ನಮಾಡಿದ ಹಾಗೆ ನನಗೆ ಕಡತದಿಂದ ಗೊತ್ತಾಗುವುದಿಲ್ಲ ಮತ್ತು ಅವರ ಜೊತೆಯಲ್ಲಿ ಮಾತನಾಡಿದ ಹಿನ್ನೆಲೆಯಿಂದ ಗೊತ್ತಾಗುವುದಿಲ್ಲ. ಇದು ಈಗಿರತಕ್ಕ ವಸ್ತುಸ್ಥಿತಿ. ನಗರಾಭಿವೃದ್ಧಿ ಕೆಲಸ ಚೆನ್ನಾಗಿ ನಡೆಯಬೇಕು,

ಪರಿಣಾಮಕಾರಿಯಾಗಿ ನಡೆಯಬೇಕು, ಜನರಿಗೆ ಕನಿಷ್ಠಮಟ್ಟದ ಪೌರಸೌಲಭ್ಯಗಳನ್ನು ಒದಗಿಸಿಕೊಡತಕ್ಕ ಕೆಲಸ ನಡೆಯಬೇಕು ಎನ್ನುವ ಮಾತನ್ನು ಸನ್ಮಾನ್ಯ ಧರ್ಮಸಿಂಗ್‌ರವರು ವಿಶೇಷವಾಗಿ ಹೇಳಿದ್ದಾರೆ. ಅದೇ ರೀತಿ ಸನ್ಮಾನ್ಯ ಬ್ಲೇಸಿಯಸ್ ಡಿ'ಸೌಜರವರೂ ಕೂಡ ಪ್ರಸ್ತಾಪ ಮಾಡಿದ್ದಾರೆ. ಇದನ್ನೆಲ್ಲಾ ನಾನು ಗಮನದಲ್ಲಿಟ್ಟುಕೊಂಡಿದ್ದೇನೆ. ಈ ಸಮಸ್ಯೆಗಳಿಗೆ ತಕ್ಷಣ ಯಾವ ಪರಿಹಾರವೂ ಸಿಕ್ಕುವುದಿಲ್ಲ ಎನ್ನುವುದನ್ನು ಸನ್ಮಾನ್ಯ ಸದಸ್ಯರು ಮನಗಾಣುತ್ತಾರೆ ಎಂದು ನಾನು ಭಾವಿಸಿದ್ದೇನೆ. ಹಂತಹಂತವಾಗಿ ನಿಯೋಜಿತ ರೀತಿಯಲ್ಲಿ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು ಎನ್ನುವ ತತ್ವವನ್ನು ನಾನು ಹಾಕಿಕೊಂಡು ಈ ದಿಸೆಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೇನೆ. ಮನುಷ್ಯನ ಸಮಸ್ಯೆಗಳು, ಮನೆಯ ಸಮಸ್ಯೆಗಳು, ಊರಿನ ಸಮಸ್ಯೆಗಳು ಒಂದೇ ದಿನ ಬಗೆಹರಿಯುವುದಿಲ್ಲ.

ಜೀವನದುದ್ದಕ್ಕೂ ಮನುಷ್ಯನಿಗೆ ಅಂಟಿಕೊಂಡಿರತಕ್ಕಂತಹ ಸಮಸ್ಯೆಗಳು ಹಲವಾರು. ಅನೇಕ ಸಮಸ್ಯೆಗಳನ್ನು ತೆಗೆದುಹಾಕಿದರೆ, ಇನ್ನು ಹತ್ತಾರು ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಅದು ಜೀವನಕ್ಕೆ ಅಂಟಿಕೊಂಡಿರತಕ್ಕಂತಹ ಸಮಸ್ಯೆಯ ಸರಣಿ. ನಾನು ಎಲ್ಲಾ ಕೆಲಸಗಳನ್ನು ಮಾಡಿದ್ದೇನೆ. ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಿದ್ದೇನೆ, ಇನ್ನೇನು ಮಾಡುವುದಿಲ್ಲವೆಂದು ಯೋಚನೆ ಮಾಡಿ ಹೇಳತಕ್ಕಂತಹ ಮಾತಲ್ಲ. ಈ ಒಂದು ವಸ್ತು ಸ್ಥಿತಿಯ ಹಿನ್ನೆಲೆಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅದು ಆಮೆಯ ಗತಿ ಆದರೂ ಆಗಬಹುದು. ಸರಿಯಾದಂತಹ ನಿಯೋಜಿತವಾದ ರೀತಿಯಲ್ಲಿ ಕಾರ್ಯಕ್ರಮಗಳನ್ನು ಹೊಂದಿಸಿಕೊಂಡು, ರೂಪಿಸಿಕೊಂಡು, ಅವುಗಳನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನುವ ಮಾತನ್ನು ಮಾನ್ಯ ಸದಸ್ಯರಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಜೆಟ್ ಯುಗದಲ್ಲಿ ಆಮೆಯ ಗತಿಯಲ್ಲಿ ಹೋದರೆ ಹೇಗೆ ?

ಶ್ರೀ ಎ. ಲಕ್ಷ್ಮೀಸಾಗರ್.—ಜೆಟ್ ಯುಗದಲ್ಲಿ ಯಂತ್ರವನ್ನು ಮೇಲೆ ಹಾರಿಸಬಹುದೇ ಹೊರತು, ಮನುಷ್ಯನು ಆ ರೀತಿ ಹೋಗುವುದಕ್ಕೆ ಆಗುವುದಿಲ್ಲವೆಂದು ಮಾನ್ಯ ಕೃಷ್ಣನ್‌ರವರೂ ಒಪ್ಪಿಕೊಳ್ಳುತ್ತಾರೆ. ಇದು ಮನುಷ್ಯ ಜೀವನದ ಆರ್ಗನಿಸಮ್. It is a living organism. It has certain limitations, both environmental and individual. You cannot easily overcome them. You cannot compare the progress of man with the progress of science and machines. These limitations are well understood. I need not dwell upon them. ಈ ಹಿನ್ನೆಲೆಯಲ್ಲಿ ಸಾಮಾನ್ಯವಾಗಿ ಸನ್ಮಾನ್ಯ ಸದಸ್ಯರು ಹೇಳಿರತಕ್ಕಂತಹ ವಿಚಾರ.

ಶ್ರೀ ಆರ್. ವೆಂಕಟರಾಮಯ್ಯ.—ಜೆಟ್ ಸೃಷ್ಟಿ ಮಾಡಿದವನು ಮನುಷ್ಯನೇ.

ಶ್ರೀ ಎ. ಲಕ್ಷ್ಮೀಸಾಗರ್.—ನಿಮಗೆ ಎಷ್ಟು ಗೊತ್ತಿದೆಯೋ ನನಗೂ ಅಷ್ಟೇ ಗೊತ್ತಿದೆ. ಸಾಮಾನ್ಯವಾಗಿ ಸ್ಥಳೀಯ ಸಂಸ್ಥೆಗಳಿಗೆ ಹಣದ ಕೊರತೆಯಿದೆಯೆಂದು ಮೂಲಭೂತವಾದಂತಹ ವಿಷಯಗಳ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅವರಿಗೆ ಹೆಚ್ಚಿನ ಹಣವನ್ನು ಒದಗಿಸಿಕೊಡತಕ್ಕಂತಹ ಪ್ರಯತ್ನ ಮಾಡುವುದು, ಒಂದು. ಇದರ ಜೊತೆಗೆ ಸರ್ಕಾರದಿಂದ ಸ್ಥಳೀಯ ಸಂಸ್ಥೆಗಳಿಗೆ ನ್ಯಾಯವಾಗಿ ಸಿಗಬೇಕಾದಂತಹ ತೆರಿಗೆಗಳ ಪಾಲು ಸಿಗುತ್ತಿಲ್ಲವೆಂದು ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಮಾನ್ಯ ಧರ್ಮಸಿಂಗ್‌ರವರು ಗುಲ್ಬಾಟಿ ಕಮಿಷನ್ ಏರ್ಪಾಡು ಮಾಡಿದ್ದಾರೆ. ಅವರು ತಮ್ಮ ಶಿಫಾರಸ್ಸುಗಳನ್ನು ಕೊಟ್ಟಿದ್ದಾರೆ. ಅವುಗಳನ್ನು ಯಾಕೆ ಮಾಡಲಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಅದನ್ನು ಬಿಟ್ಟು ನೀವು ಒಂದು ಸಮಿತಿಯನ್ನು ಏರ್ಪಾಡು ಮಾಡಿದ್ದೀರಿ. ಆ ಸಮಿತಿ ರಿಪೋರ್ಟ್ ಕೊಟ್ಟಿದೆಯೋ ಇಲ್ಲವೋ ಗೊತ್ತಿಲ್ಲವೆಂದು ಹೇಳಿದರು. ಆಗ ನಾನು ತಕ್ಷಣ ಹೇಳಿದೆ, ಸದರಿ ಸಮಿತಿಯವರು ವರದಿಯನ್ನು ಕೊಟ್ಟಿದ್ದಾರೆ. ಅವರು ಮಾಡಿರತಕ್ಕಂತಹ ಶಿಫಾರಸ್ಸುಗಳನ್ನು ಸರ್ಕಾರದವರು ಪರಿಶೀಲನೆ ಮಾಡಿ ಸೂಕ್ತವಾದ ನಿರ್ಧಾರಗಳನ್ನು ತೆಗೆದುಕೊಳ್ಳುತ್ತೇವೆ ಅನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಎಲ್ಲ ಸಮಸ್ಯೆಗಳಿಗೆ ಕಾರಣ ಹಣದ ಕೊರತೆ. ಹಣ ಸಹಾಯದ ವಿಷಯಗಳು ಕೂಡ ಇದರಲ್ಲಿ ಪ್ರಸ್ತಾಪವಾಗಿವೆ. ಅವುಗಳನ್ನು ಜಾರಿಗೆ ತಂದು ಮಾಡಲಿಕ್ಕೆ ಏನು ಕಾರಣವೆಂದು ಬಹಳ ಮಟ್ಟಿಗೆ ಸನ್ಮಾನ್ಯ ಸದಸ್ಯರುಗಳು ಪ್ರಶ್ನೆ ಮಾಡಿರತಕ್ಕಂತಹ ಹಿನ್ನೆಲೆ ಉಂಟು. ಈ ಹಣಕಾಸಿನ

ಪರಿಸ್ಥಿತಿ ಬಗ್ಗೆ ಸೂಕ್ತವಾದಂತಹ ಒಂದು ಪರಿಹಾರ ಸಿಕ್ಕಿದೆಯೆಂದು ನಾನು ನಂಬಿದ್ದೇನೆ. ಇದರ ಜೊತೆಗೆ ನಾನು ಎಲ್ಲಾ ಜಿಲ್ಲೆಗಳಿಗೂ ಹೋದ ಸಮಯದಲ್ಲೂ ಮತ್ತೆ, ಮೊನ್ನೆ ಕೆಲವು ದಿನಗಳ ಹಿಂದೆ ಹುಬ್ಬಳ್ಳಿಯಲ್ಲಿ ನಡೆದ, ನಗರಸಭೆ, ಪುರಸಭೆಗಳ ಅಧ್ಯಕ್ಷರುಗಳ ಸಭೆಯಲ್ಲಿ ಕೂಡ ಒತ್ತಾಯ ಮಾಡಿ ನಮಗೆ ಹಣಕಾಸಿನ ಅಧಿಕಾರವನ್ನು ಜಾಸ್ತಿ ಮಾಡಿ ಎಂದು ಹೇಳಿದ್ದಾರೆ. ನಾನು ಅವರ ಬೇಡಿಕೆಯನ್ನು ಮನ್ನಿಸಿ ಎಕ್ಸಿಕ್ಯೂಟಿವ್ ಆರ್ಡರ್ ಮುಖಾಂತರವಾಗಿ ಹೆಚ್ಚು ಮಾಡುತ್ತೇವೆ. Their financial powers are being enhanced byan executive order. The orders will be issued very shortly. ಬಹು ದಿನಗಳ ಬೇಡಿಕೆಯನ್ನು ಮಾನ್ಯ ಮಾಡಿ ನಾನು ಸರ್ಕಾರದ ಆಜ್ಞೆಯನ್ನು ಕೆಲವೇ ದಿನಗಳಲ್ಲಿ ಹೊರಡಿಸುತ್ತಿದ್ದೇನೆ. ಇನ್ನೊಂದು, ಸಾಮಾನ್ಯವಾಗಿ ಹೇಳಿರತಕ್ಕಂಥಾದ್ದು, ಡೈರೆಕ್ಟರ್ ಆಫ್ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಸ್ಥಾಪನೆ ಮಾಡಿದ್ದೀರಿ, ಇದು ಒಳ್ಳೆಯದು, ಆದರೆ, ಡೈರೆಕ್ಟರ್‌ಗೆ ಸಾಕಷ್ಟು ಅಧಿಕಾರ ಕೊಟ್ಟ ಹಾಗೆ ಕಾಣಲಿಲ್ಲವೆಂದು ಮಾನ್ಯ ಸದಸ್ಯರು ಹೇಳಿದ್ದಾರೆ ಅವರಿಗೆ ಉಸ್ತುವಾರಿ ನೋಡಿಕೊಳ್ಳತಕ್ಕಂತಹ ಕೆಲಸ ಕೊಟ್ಟಿದೆ ಬೆಂಗಳೂರು ಸಿಟಿ ಕಾರ್ಪೊರೇಷನ್ ಒಂದನ್ನು ಬಿಟ್ಟು, ಬಾಕಿ ಸ್ಥಳೀಯ ಸಂಸ್ಥೆಗಳಿಗೆ ಸೂಪರ್‌ವೈಸರ್ ಪವರ್ ಏನಿದೆ, ಅದನ್ನು ಅವರಿಗೆ ಕೊಡತಕ್ಕಂತಹ ವ್ಯವಸ್ಥೆ ಮಾಡಿದ್ದೇವೆ. ಇದರ ಜೊತೆಗೆ ಕಾನೂನು ಬಹಳ ಹಿಂದೆ ಮಾಡಿದ್ದೆಂದು ಹೇಳಿದ್ದಾರೆ. ೧೯೬೪ರಲ್ಲಿ ಮುನಿಸಿಪಲ್ ಆಕ್ಟ್ ಆಗಿದೆ. ಸಮಾಜದಲ್ಲಿ ೨೦ ವರ್ಷಗಳ ಅನಂತರದಲ್ಲಿ ಬದಲಾವಣೆಗಳು ಆಗಿವೆ ಮತ್ತು ಸ್ಥಳೀಯ ಸಂಸ್ಥೆಗಳೂ ಕೂಡ ಆಗಿವೆ. ಇದರಿಂದಾಗಿ ಕಾನೂನನ್ನು ಬದಲಾವಣೆ ಮಾಡಬೇಕೆಂದು ಹೇಳಿದ್ದಾರೆ. ಇದನ್ನು ಎಲ್ಲಾ ಜಿಲ್ಲೆಗಳ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷರುಗಳು ಕೂಡ ಹೇಳಿದ್ದಾರೆ. ಮೊನ್ನೆ ಹುಬ್ಬಳ್ಳಿಯಲ್ಲಿ ನಡೆದಂತಹ ಸಮಾವೇಶದಲ್ಲಿ ಈ ಮಾತನ್ನು ಹೇಳಿದ್ದಾರೆ. ನಾನು ಇದರ ಬಗ್ಗೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇನೆ. ಅವರು ಕೊಟ್ಟಂತಹ ಸಲಹಾ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ತಿದ್ದುಪಡಿಗಳನ್ನು ಮಾಡುವುದಕ್ಕೋಸ್ಕರವಾಗಿ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇನೆ. ತಿದ್ದುಪಡಿಗಳೆಲ್ಲಾ ಸಿದ್ಧವಾಗಿವೆ. ಅದು ಈ ಅಧಿವೇಶನದಲ್ಲೇ ಆಗಬೇಕೆಂದು ಇಚ್ಛಿಪಟ್ಟರೆ, ನಾನು ಈ ಅಧಿವೇಶನದಲ್ಲೇ, ಆ ತಿದ್ದುಪಡಿ ಕಾನೂನನ್ನು ಸಭೆಯ ಅನುಮತಿಗಾಗಿ ತೆಗೆದುಕೊಂಡು ಬರುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಸದಸ್ಯರಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಪರ್ಯಟನೆ ಮಾಡುವ ಕಾಲದಲ್ಲಿ ಅನೇಕ ಚೀಫ್ ಆಫೀಸ್‌ಗಳಿಗೆ ಭೇಟಿ ಮಾಡಿ ಅಲ್ಲಿನ ಅಧಿಕಾರಿಗಳನ್ನು ಪ್ರಶ್ನೆ ಮಾಡಿ, ಅವರು ಅಧಿಕಾರ ನಡೆಸತಕ್ಕಂತಹ ತಿಳುವಳಿಕೆಯ ಬಗ್ಗೆ, ಚಾಕಚಕ್ಯತೆಯ ಬಗ್ಗೆ ಪ್ರಶ್ನೆ ಮಾಡಿ ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಕೆಲವು ಕಡೆ ಕಾನೂನು ತಿಳುವಳಿಕೆ ಇಲ್ಲದಿರತಕ್ಕಂತಹ ಚೀಫ್ ಆಫೀಸರ್‌ಗಳಿದ್ದಾರೆ. ನಾಲ್ಕು ದರ್ಜೆ ಟೌನ್ ಮುನಿಸಿಪಲ್ ಕೌನ್ಸಿಲ್‌ಗಳೂ ಇವೆ. ಇವುಗಳಲ್ಲಿ ಒಂದು, ಎರಡು, ಮೂರು, ನಾಲ್ಕು ಎಂದು ಇವೆ ಟೌನ್ ಮುನಿಸಿಪಲ್‌ಗಳಲ್ಲಿ ಬೇರೆ ಬೇರೆ ಇಲಾಖೆಗಳಿಂದ ಬಂದಿರತಕ್ಕಂತಹ ಅಧಿಕಾರಿಗಳಿದ್ದಾರೆ. ಮತ್ತು ಅದೇ ಇಲಾಖೆಯಲ್ಲಿ ಕರ್ನಾಟಕ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಸರ್ವೀಸ್ ಎಂದು, ಒಂದು ಗುಂಪಿನ ಅಧಿಕಾರಿ ವರ್ಗದವರು ಇದ್ದಾರೆ. ಹೊರಗಡೆಯಿಂದ ಬಂದಿರತಕ್ಕಂತಹ ಜನರನ್ನು ಇಲ್ಲಿ ಇರಿಸಬಾರದು, ಅವರನ್ನು ಆಯಾ ಇಲಾಖೆಗೆ ಕಳಿಸಬೇಕೆಂಬ ವಾದವನ್ನು ನನ್ನ ಮುಂದೆ ಇಟ್ಟಿದ್ದಾರೆ. ಕಾನೂನಿನ ಬಗ್ಗೆ ಯಾವ ವಿಧವಾದಂತಹ ತಿಳುವಳಿಕೆ ಇಲ್ಲದೇ ಇರತಕ್ಕಂತಹ ಜನರೂ ಕೂಡ ಚೀಫ್ ಆಫೀಸರ್ ಆಗಿ ಕೆಲಸ ಮಾಡುತ್ತಿದ್ದಾರೆ. ಚೀಫ್ ಆಫೀಸರ್‌ಗಳು ೨-೩ನೇ ದರ್ಜೆಯಲ್ಲಿ ಇದ್ದಾರೆ. ಒಂದು ಕಡೆ ಚೀಫ್ ಆಫೀಸರ್ ಆಗಿ ಫಿಟ್ಟರ್ ಇದ್ದಾರೆ, ಅವರನ್ನು ಟ್ರಾನ್ಸ್‌ಫರ್ ಮಾಡುವುದಕ್ಕೆ ಪ್ರಯತ್ನ ಮಾಡಿದರೆ, ಹೈಕೋರ್ಟಿಗೆ ಹೋಗಿ ರಿಟ್ ಫೈಲ್ ಮಾಡಿ, ಸ್ಟೇ ಆರ್ಡರ್ ತೆಗೆದುಕೊಂಡು ಬಂದಿದ್ದಾರೆ. ಇನ್ನೊಂದು ಕಡೆ ಮೀಟರ್ ರೀಡರ್ಸ್ ಚೀಫ್ ಆಫೀಸರ್ ಆಗಿದ್ದಾರೆ. ಮತ್ತೊಂದು ಕಡೆ ಬಿಲ್ ಕಲೆಕ್ಟರ್ ಚೀಫ್ ಆಫೀಸರ್ ಆಗಿದ್ದಾರೆ. ಇದು ಈಗಿರತಕ್ಕಂತ ಮುನಿಸಿಪಾಲಿಟಿಗಳ ಪರಿಸ್ಥಿತಿ. ಇದಕ್ಕೆ ಕಾರಣ ೧೦-೧೨ ವರ್ಷಗಳಿಂದ ಚುನಾವಣೆ ನಡೆಯದೇ ಇದ್ದದ್ದು ಬಹಳ ಬಲವಾದ ಕಾರಣವೆಂದು ನಾನು ಭಾವಿಸಿದ್ದೇನೆ. ಆದ್ದರಿಂದ ಇವರಿಗೆ ಕಾನೂನು ತಿಳುವಳಿಕೆ ಕೊಡುವುದಕ್ಕೋಸ್ಕರವೆಂದು ೪೦ ಜನರ ಬ್ಯಾಚನ್ನು ಮೈಸೂರಿನಲ್ಲಿ ರಿಫ್ರೆಷರ್ ಕೋರ್ಸ್ ಪ್ರಾರಂಭ ಮಾಡಿದ್ದೇವೆ. ಆ ಬ್ಯಾಚಿನ ಕೋರ್ಸ್ ಮೈಸೂರಿನ ಎಟಿಐನಲ್ಲಿ ನಡೆಯುತ್ತಿದೆ. ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಸರಿಯಾಗಬೇಕು

ಮತ್ತು ಅಲ್ಲಿ ಇರತಕ್ಕಂತಹ ಅಧಿಕಾರಿಗಳ ಸೇವೆಯನ್ನು ಸರಿಯಾಗಿ ಉಪಯೋಗಿಸಿ ಕೊಳ್ಳಬೇಕೆಂದು, ಕಾನೂನು ದೃಷ್ಟಿಯಿಂದ, ಆಡಳಿತ ದೃಷ್ಟಿಯಿಂದ ಪರಿಪೂರ್ಣವಾದಂತಹ ತಿಳುವಳಿಕೆಯ ಹಿನ್ನೆಲೆಯಲ್ಲಿ ಕೆಲಸ ಮಾಡತಕ್ಕಂತಹ ಜನ ಆಗಬೇಕು ಎಂದು ರಿಫ್ರೆಷರ್ ಕೋರ್ಸನ್ನು ಪ್ರಾರಂಭ ಮಾಡಿದ್ದೇವೆ. ಮುಂದಿನ ತಿಂಗಳ ಕೊನೆ ಹೊತ್ತಿಗೆ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ರಿಫ್ರೆಷರ್ ಕೋರ್ಸ್ ಎಲ್ಲ ಅಧಿಕಾರಿಗಳಿಗೂ ಸಿಗತಕ್ಕಂತಹ ವ್ಯವಸ್ಥೆಯನ್ನು ಈಗಾಗಲೇ ಮಾಡಿದ್ದೇನೆ. ಇದರ ಜೊತೆಗೆ ಹಣಕಾಸಿನ ಪರಿಸ್ಥಿತಿಯ ಬಗ್ಗೆ ಎಲ್ಲ ಮಾನ್ಯ ಸದಸ್ಯರೂ ಪ್ರಸ್ತಾಪ ಮಾಡಿದ್ದಾರೆ. ದಿನಾಂಕ ೩೧-೩-೧೯೮೫ರಲ್ಲಿ ಸುಮಾರು ೧೪೦ ಕೋಟಿ ರೂ. ತೆರಿಗೆ ಬಾಕಿ ಇದೆ. ಇದನ್ನು ಮುನಿಪಾಲಿಟಿಯವರು ವಸೂಲು ಮಾಡಿಲ್ಲವೆಂದು ಈ ರೀತಿಯಲ್ಲಿ ರತಕ್ಕಂತಹ ಎಲ್ಲಾ ಮುನಿಸಿಪಾಲಿಟಿಗಳು ಮತ್ತು ಸಿಟಿ ಮುನಿಸಿಪಲ್ ಕೌನ್ಸಿಲ್ ಕಾರ್ಪೊರೇಷನ್‌ಗಳು. ಡಿ.ಸಿ.ಬಿ.ಯವರು ವ್ಯಕ್ತಪಡಿಸಿರತಕ್ಕಂತಹ ವಿಚಾರವಿದು. ಮಾನ್ಯ ಧರ್ಮಸಿಂಗ್‌ರವರು ತಪ್ಪು ತಿಳಿದುಕೊಳ್ಳುವುದಿಲ್ಲವೆಂದು ಭಾವಿಸಿದ್ದೇನೆ. ಅತ್ಯಂತ ಕಡಿಮೆ ತೆರಿಗೆಯನ್ನು ವಸೂಲು ಮಾಡಿರುವುದು ಗುಲ್ಬರ್ಗ ಜಿಲ್ಲೆ. ಅಲ್ಲಿ ಶೇಕಡ ೮ರಷ್ಟು ಮಾತ್ರ ತೆರಿಗೆ ವಸೂಲಾತಿ ನಡೆದಿದೆ.

ಆದ್ದರಿಂದ ಸನ್ಮಾನ್ಯ ಸದಸ್ಯರಲ್ಲಿ ಸನ್ಮಾನ್ಯ ನಗರದ ನಾಯಕರಲ್ಲಿ, ಅಧ್ಯಕ್ಷರುಗಳಲ್ಲಿ, ಚೀಫ್ ಆಫೀಸರ್‌ಗಳಲ್ಲಿ ಈ ಸಭೆಯ ಮೂಲಕ ಮನವಿ ಮಾಡಿಕೊಳ್ಳುವುದು ಇಷ್ಟೆ, ಈಗಿರತಕ್ಕ ತೆರಿಗೆ ಮಟ್ಟದಲ್ಲಿ ಎಲ್ಲಾ ತೆರಿಗೆಗಳನ್ನು ಬಾಕಿಯಾಗಿ ವಸೂಲಿ ಮಾಡತಕ್ಕ ಕ್ರಮವನ್ನು ಮೊದಲು ಮಾಡಬೇಕೆಂದು ಅವರೆಲ್ಲರಿಗೂ ಹೇಳಿದ್ದೇನೆ. ತಮ್ಮ ಮುಖಾಂತರ ಸದರಿ ಜನಗಳಿಗೆ ಈ ಮಾತನ್ನು ಹೇಳಲಿಕ್ಕೆ ಇಷ್ಟ ಪಡುತ್ತೇನೆ. ಇದು ಅತ್ಯಂತ ಮುಖ್ಯವಾದುದು. ಅನೇಕ ಕಡೆಗಳಲ್ಲಿ ತೆರಿಗೆಗಳನ್ನು ಹತ್ತಾರು ವರ್ಷ ಗಳಿಂದ ಪರಿಷ್ಕೃತ ಮಾಡಿಲ್ಲ. ಈ ಕೆಲಸವನ್ನು ಕೂಡ ಕಾಲಗತಿಗನುಸಾರವಾಗಿ ಮಾಡಬೇಕಾಗುತ್ತದೆ. ಎಲ್ಲಾ ಬೆಲೆಗಳು ಜಾಸ್ತಿಯಾಗಿದೆ, ಸಿಬ್ಬಂದಿ ವರ್ಗಕ್ಕೆ ಕೊಡಬೇಕಾದ ಸಂಬಳ, ಭತ್ಯ ಜಾಸ್ತಿಯಾಗಿದೆ. ಆಡಳಿತ ವೆಚ್ಚ ಜಾಸ್ತಿಯಾಗಿದೆ, ಪುರಸಭೆಗಳಿಗೆ ಕೊಡತಕ್ಕ ಖರ್ಚಿನ ವೆಚ್ಚ ಜಾಸ್ತಿಯಾಗಿದೆ, ಈ ಹಿನ್ನೆಲೆ ಯಲ್ಲಿ ತೆರಿಗೆಯನ್ನು ರಿವೈಸ್ಡ್ ಮಾಡತಕ್ಕದ್ದು ಅವಶ್ಯ ಇದೆ, ಅದನ್ನು ಮಾಡಬೇಕೆಂದು ನಾನು ಅವರಲ್ಲಿ ಮನವಿ ಮಾಡಿದ್ದೇನೆ. ಎಷ್ಟೇ ಪ್ರಯತ್ನ ಮಾಡಿ ತೆರಿಗೆ ಮಟ್ಟವನ್ನು ಏರಿಸಿ ಹಣ ವಸೂಲು ಮಾಡಿದರೂ ಕೆಲವು ಸ್ಥಳೀಯ ಸಂಸ್ಥೆಗಳು ಎಕನಾಮಿಕಲಿ ನಾಟ್ ವಯಬಲ್. ನಮ್ಮ ಮುನಿಸಿಪಾಲಿಟಿಗಳಲ್ಲಿ ಎಷ್ಟು ಜನರು ಇದ್ದಾರೆ ಎನ್ನುವ ಬಗ್ಗೆ ತಮಗೆ ಹೇಳಬೇಕೆಂದರೆ ಶುಂಠಿಕೊಪ್ಪದಲ್ಲಿ ಎರಡು ಸಾವಿರ ಜನ, ಮೊಳಕಾಲ್ಮೂರಿನಲ್ಲಿ ಐದು ಸಾವಿರ ಜನ ಇದ್ದಾರೆ. ಕೆಲವು ಕಡೆಗಳಲ್ಲಿ ೨ ಸಾವಿರ, ೩ ಸಾವಿರ, ೮ ಸಾವಿರ ಜನ ಈ ರೀತಿಯಲ್ಲಿ ಇವೆ. ಕೆಲವು ಕಡೆಗಳಲ್ಲಿ ದೊಡ್ಡ ಊರಿನಲ್ಲಿ ಸುತ್ತಾ ಇರತಕ್ಕ ಹಳ್ಳಿಗಳನ್ನು ಸೇರಿಸಿ ಮೂರು ನಾಲ್ಕು ಕಿಲೋಮೀಟರ್ ದೂರದಲ್ಲಿರತಕ್ಕ ಹಳ್ಳಿಗಳನ್ನು ಸೇರಿಸಿಕೊಂಡು ಮುನಿಸಿಪಾಲಿಟಿ ಎಂದು ಕರೆಸಿಕೊಳ್ಳಬೇಕೆಂದು ವ್ಯವಸ್ಥೆ ನಡೆದಿದೆ. ಇವೆಲ್ಲವೂ ಕೂಡ ಎಕನಾಮಿಕಲಿ ನಾಟ್ ವಯಬಲ್ ಯೂನಿಟ್ಸ್. ಅವರಲ್ಲಿ ಈ ವಿಚಾರ ಪ್ರಸ್ತಾಪ ಮಾಡಿದ್ದೇನೆ. ಅವರು ಕೂಡ ನನ್ನ ವಾದವನ್ನು ಒಪ್ಪಿಕೊಳ್ಳುವ ಸ್ಥಿತಿಯಲ್ಲಿದ್ದಾರೆ, ಒಪ್ಪಿಕೊಂಡಿದ್ದಾರೆ. ೨೦ ಸಾವಿರ ಜನಕ್ಕಿಂತಲೂ ಕಡಿಮೆ ಇರತಕ್ಕಂಥ ಎಲ್ಲಾ ಟೌನ್ ಮುನಿಸಿಪಾಲಟಿಗಳನ್ನು ಟೌನ್ ಪಂಚಾಯಿತ್, ಮಂಡಲ್ ಪಂಚಾಯಿತ್ ಎಂದು ಮಾಡಿ ಕೊಳ್ಳಲಿಕ್ಕೆ ಕಾನೂನು ಬದಲಾವಣೆ ಆಗಬೇಕಾಗಿದೆ ಅದನ್ನು ಮಾಡಲಿಕ್ಕೆ ಯೋಚನೆ ಮಾಡುತ್ತಿದ್ದೇವೆ ಎಂದು ಹೇಳಿದ್ದೇನೆ. ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲ, ಸರ್ಕಾರ ತೀರ್ಮಾನ ತೆಗೆದುಕೊಳ್ಳಲಿಕ್ಕೆ ಯೋಚನೆ ಮಾಡುತ್ತಿದೆ ಎಂದು ಹೇಳಿದ್ದೇನೆ. ಏತಕ್ಕೋಸ್ಕರ ಎನ್ನುವ ಬಗ್ಗೆ ನಾನು ಈಗಾಗಲೇ ಒಂದು ಉದಾಹರಣೆಯನ್ನು ಕೊಟ್ಟಿದ್ದೇನೆ. ಇನ್ನು ಎರಡನೆಯ ಕಾರಣ ಅಂದರೆ, ಕೇಂದ್ರ ಸರ್ಕಾರ, ರಾಜ್ಯ ಸರ್ಕಾರದಿಂದ ಐಆರ್‌ಡಿಸಿ, ಡಿಪಿಎಪಿ, ಈ ತರಹ ಯೋಜನೆಗಳಿಂದ ಗ್ರಾಮಾಂತರ ಪ್ರದೇಶಗಳಿಗೆ ಸಿಕ್ಕತಕ್ಕ ಅನೇಕ ಸೌಲಭ್ಯಗಳು ಏನಿವೆ ಅವುಗಳು ನಗರ ಪ್ರದೇಶ ಆದ ಒಂದೇ ಕಾರಣಕ್ಕೋಸ್ಕರ, ಮುನಿಸಿಪಾಲಿಟಿಗಳು ಎಂದು ಕರೆಸಿಕೊಳ್ಳುವ ಒಂದೇ ಒಂದು ಕಾರಣದಿಂದ ಗ್ರಾಮಾಂತರ ಪ್ರದೇಶಗಳಿಗೆ ಸಿಕ್ಕತಕ್ಕ ಸೌಲಭ್ಯಗಳು ಇವರಿಗೆ ಸಿಕ್ಕುವುದಿಲ್ಲ. ಆದ್ದರಿಂದ, ಈ ನಿಲುವನ್ನು ಬದಲಾಯಿಸಬೇಕೆಂದು ಚಿಂತನೆ ಮಾಡುತ್ತಿದ್ದೇವೆ. ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳತಕ್ಕ ಪ್ರಯತ್ನ ಮಾಡುತ್ತಿದ್ದೇನೆ. ಇನ್ನು ಕೋರ್ಟ್‌ಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಒಟ್ಟು ೧೭೫ ತಾಲ್ಲೂಕುಗಳ ಪೈಕಿ ೩೭ ತಾಲ್ಲೂಕುಗಳನ್ನು ಬಿಟ್ಟು ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿ ಮುನ್ಸಿಫ್ ಮ್ಯಾಜಿಸ್ಟ್ರೇಟ್ ಕೋರ್ಟ್‌ಗಳು ಬಂದಿವೆ. ಮಿಕ್ಕ ೩೭ ತಾಲ್ಲೂಕುಗಳಲ್ಲಿ ೪ ಕೋರ್ಟುಗಳಿಗೆ ಸರ್ಕಾರದವರು

ಮಂಜೂರಾತಿ ಕೊಟ್ಟಿದ್ದಾರೆ. ಕೋರ್ಟ್‌ಗಳನ್ನು ತೆಗೆಯಲಾಗಿದೆ. ಅವು ಯಾವುವೆಂದರೆ ಹೊಸಕೋಟೆ, ಗುಂಡ್ಲುಪೇಟೆ ಸೊರಬ, ಚನ್ನಗಿರಿ, ಇಲ್ಲಿ ತೆಗೆಯಲಿಕ್ಕೆ ಹೈಕೋರ್ಟ್ ಒಪ್ಪಿಕೊಂಡಿದೆ. ಸರ್ಕಾರದಿಂದ ಮಂಜೂರಾತಿ ಕೊಟ್ಟಿದ್ದೇವೆ. ಈಗ ಒಟ್ಟು ೧೪೩ ತಾಲ್ಲೂಕುಗಳಲ್ಲಿ ಮುನ್ಸೀಫ್ ಮ್ಯಾಜಿಸ್ಟ್ರೇಟ್ ಕೋರ್ಟ್‌ಗಳು ಅಸ್ತಿತ್ವಕ್ಕೆ ಬಂದಹಾಗೆ ಆಯಿತು. ಇನ್ನು ಕನ್ನಡದ ಬಳಕೆಯ ಬಗ್ಗೆ ಸರ್ವೇಸಾಮಾನ್ಯವಾಗಿ ಪ್ರತಿದಿವಸ ಪ್ರಸ್ತಾಪ ಮಾಡತಕ್ಕದ್ದು ಇರುತ್ತದೆ. ಈ ಕಾನೂನನ್ನು ಕನ್ನಡದಲ್ಲಿ ಅಚ್ಚು ಹಾಕಿಸಿದರೆ ಕೋರ್ಟ್‌ನಲ್ಲಿ ಅದರ ಮೇಲೆ ವ್ಯಾಖ್ಯಾನ ಆಗಲಿ, ಬೇರೆ ರೀತಿಯ ವಾದ ವಿವಾದಗಳು ಕನ್ನಡದಲ್ಲಿ ಆಗಲಿಕ್ಕೆ ಸಹಾಯವಾಗುತ್ತದೆ. ಕಳೆದ ಎರಡು ವರ್ಷಗಳಲ್ಲಿ ಐದು ವಿಧೇಯಕಗಳನ್ನು ಕನ್ನಡದಲ್ಲಿ ಮಸೂದೆ ರೂಪದಲ್ಲಿ ಮಂಡಿಸಿ ಕಾನೂನು ಮಾಡಿದ್ದೇವೆ, ಎನ್ನುವ ಮಾತನ್ನು ಸನ್ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಇಷ್ಟಪಡುತ್ತೇನೆ, ಒಟ್ಟು ಕನ್ನಡದಲ್ಲಿ ೬ ಆಗಿವೆ. ದೇವದಾಸಿಗೆ ಸಂಬಂಧಪಟ್ಟ ಮಸೂದೆ ೧೯೮೨ ರಲ್ಲಿ ಆಯಿತು, ಅನಂತರ ಮಿಕ್ಕೆಲ್ಲ ೫,೧೯೮೪ ರಿಂದ ಈಚೆಗೆ ಆಗಿದೆ. ಅಧ್ಯಕ್ಷರೆ, ನಮ್ಮ ರಾಜ್ಯದ ಕಾನೂನು ಪುಸ್ತಕಗಳು, ನಾವು ಮಾಡಿರತಕ್ಕ ವಿಧೇಯಕಗಳು ಸಿಕ್ಕುತ್ತಿಲ್ಲ. ಅದರಲ್ಲಿ ಅನೇಕ ತಿದ್ದುಪಡಿಗಳು ಆಗಿವೆ. ವಕೀಲರಿಗೆ, ಕಕ್ಷಿದಾರರಿಗೆ ಈ ಪುಸ್ತಕಗಳು ಸಿಕ್ಕುತ್ತಿಲ್ಲ. ಸರ್ಕಾರದ ಗೌವರ್ನ್‌ಮೆಂಟ್ ಪ್ರೆಸ್‌ನಲ್ಲಿ ಮಾಡಿಸಿದರೆ ವಿಳಂಬವಾಗುತ್ತದೆಂದು, ಖಾಸಗಿಯವರಿಗೆ ಮುದ್ರಣ ಮಾಡತಕ್ಕ ಕೆಲಸವನ್ನು ಕೊಟ್ಟು ಪುಸ್ತಕ ಅಚ್ಚು ಮಾಡತಕ್ಕ ಕೆಲಸದ ಬಗ್ಗೆ ಪ್ರಯತ್ನ ಮಾಡಿದ್ದೇನೆ. ೧೯೮೨ ರಲ್ಲಿ ಮೂರು ಕಾನೂನು ಪುಸ್ತಕಗಳು ಅಚ್ಚು ಆಗಿದೆ, ೧೯೮೩ ರಲ್ಲಿ ೧೦ ಪುಸ್ತಕಗಳು ಆಗಿದೆ, ೧೯೮೪ ರಲ್ಲಿ ೩೭ ಪುಸ್ತಕಗಳು ಆಗಿದೆ. ನಮ್ಮ ರಾಜ್ಯದ ಕಾನೂನು ಪುಸ್ತಕಗಳು ಖಾಸಗಿಯವರಿಂದ ಅಚ್ಚು ಹಾಕಿಸಿ ಈಗ ಸಾರ್ವಜನಿಕರಿಗೆ ಸಿಕ್ಕತಕ್ಕ ಕೆಲಸ ನಡೆದಿದೆ. ೧೯೮೫ ರಲ್ಲಿ ಕರ್ನಾಟಕ ಮುನಿಸಿಪಾಲಿಟೀಸ್ ಆ್ಯಕ್ಟ್ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರಾದ ಚಂದ್ರಕಾಂತ ಬೆಲ್ಲದ ಅವರು ಕಾರ್ಪೊರೇಷನ್ ಆ್ಯಕ್ಟ್ ಕನ್ನಡದಲ್ಲಿ ಇಲ್ಲ, ಇಂಗ್ಲೀಷ್ ಬರದೇ ಇರತಕ್ಕ ಸದಸ್ಯರು ಇದ್ದಾರೆ, ಎಂದು ಹೇಳಿದರು. ಕನ್ನಡದಲ್ಲಿ ಮಾಡತಕ್ಕ ಕೆಲಸ ಪೂರ್ಣವಾಗಿದೆ, ಕಾರ್ಪೊರೇಷನ್ ಆ್ಯಕ್ಟ್ ಕನ್ನಡದಲ್ಲಿ ಮಾಡಿ ಅವರಿಗೆ ಒದಗಿಸತಕ್ಕ ಕೆಲಸ ಮಾಡುತ್ತೇವೆಂದು ಹೇಳುತ್ತೇನೆ. ಇದರ ಜೊತೆಗೆ ಇನ್ನು ೪೮ ನಮ್ಮ ರಾಜ್ಯದ ಕಾನೂನುಗಳು ಮುದ್ರಣದಲ್ಲಿ ಇವೆ. ಇಷ್ಟು ಕೆಲಸ ಕನ್ನಡದ ಬಗ್ಗೆ ನಡೆದಿದೆ ಎಂದು ಹೇಳುತ್ತೇನೆ. ಸನ್ಮಾನ್ಯ ಸದಸ್ಯರು ಹೇಳಿದಂಥ ವಿಷಯಗಳ ಬಗ್ಗೆ ಬಹಳ ಸಂಕ್ಷಿಪ್ತವಾಗಿ ಉತ್ತರವನ್ನು ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಮಾನ್ಯ ಧರ್ಮಸಿಂಗ್ ಅವರು ಸುಧೀರ್ಘವಾಗಿ ತಮ್ಮ ಭಾಷಣದಲ್ಲಿ ಹಲವಾರು ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮೊದಲನೆಯದಾಗಿ ಅವರು ನಗರ ಸಮಸ್ಯೆಗಳ ಪರಿಹಾರದ ಬಗ್ಗೆ ಚಿಂತನೆ ನಡೆದಿಲ್ಲ, ಕೆಲಸ ಮಾಡಿಲ್ಲ ಎಂದು ಹೇಳಿದ್ದಾರೆ, ನಾನು ಪ್ರಾರಂಭದಲ್ಲಿ ಹೇಳಿದ್ದೇನೆ. ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಏಕಾಏಕಿ ಸಮಸ್ಯೆಗಳು ಪರಿಹಾರವಾಗುವುದಿಲ್ಲ ಎಂದು ಹೇಳಿದ್ದೇನೆ. ನಗರ ಪ್ರದೇಶಗಳಿಂದ ಸುಮಾರು ೯೮೪ ಕೋಟಿ ರೂಪಾಯಿ ವರಮಾನ ಬರುತ್ತದೆ, ಅದನ್ನು ಖರ್ಚು ಮಾಡತಕ್ಕದ್ದು ತಲಾ ೧೦೦ ರೂಪಾಯಿ ಮಾತ್ರ ಎಂದು ಹೇಳಿದ್ದಾರೆ. ಬಹುಶಃ ಅದು ನಿಜ. ಬಹುಶಃ ಅವರು ನಾನು ಹೇಳುವ ವಾದವನ್ನು ಒಪ್ಪುತ್ತಾರೆಂದು ಭಾವಿಸಿದ್ದೇನೆ. ಅಧ್ಯಕ್ಷರೆ, ಆಡಳಿತ ನಡೆಸತಕ್ಕ ಸಮಯದಲ್ಲಿ ಎಲ್ಲೆಲ್ಲಿ ಎಷ್ಟೆಷ್ಟು ಹೆಚ್ಚಿಗೆ ಹಣದ ವರಮಾನ ಇರುತ್ತದೆ, ಆ ವರಮಾನವನ್ನು, ವರಮಾನ ಇಲ್ಲದೇ ಇರತಕ್ಕ ಜನರಿಗೆ ಒದಗಿಸತಕ್ಕದ್ದು ಆಡಳಿತದಲ್ಲಿ ಬಹು ಮುಖ್ಯವಾದಂಥ ತತ್ವ ಎಂದು ಭಾವಿಸಿದ್ದೇನೆ. ಈಗ ಕೋಲಾರದಲ್ಲಿ ಚಿನ್ನದ ಗಣಿ ಇದೆ. ಅಲ್ಲಿಯ ವರಮಾನವನ್ನೆಲ್ಲಾ ಕೋಲಾರಕ್ಕೆ ಕೊಡುವುದಾದರೆ ನನಗೂ ಸಂತೋಷ. ಹಾಗೆ ಮಾಡಲಿಕ್ಕೆ ಬರುವುದಿಲ್ಲ. ಚಿಕ್ಕಮಗಳೂರಿನಲ್ಲಿ ಕಾಫಿ ಬೆಳೆಯುತ್ತಾರೆ. ವಿದೇಶಿ ವಿನಿಮಯ ಸಿಕ್ಕುತ್ತದೆ. ಅಲ್ಲಿ ಬರುವ ಹಣ ಚಿಕ್ಕಮಗಳೂರು, ಹಾಸನ, ದಕ್ಷಿಣ ಕನ್ನಡದ ಕೆಲವು ಭಾಗಗಳಿಗೆ ಕೊಡಿ ಅಂದರೆ ಆಗುವುದಿಲ್ಲ. ಈ ವಾದವನ್ನು ಧರ್ಮಸಿಂಗ್ ಅವರು ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸಿದ್ದೇನೆ. ಹಾಗೆಯೇ ಮಾನ್ಯ ಸದಸ್ಯರು ಇನ್ನೊಂದು ವಿಷಯವನ್ನು ಹೇಳಿದ್ದಾರೆ. ಆಯವ್ಯಯ ಪಟ್ಟಿಯಲ್ಲಿ ಹಣ ಕೊಟ್ಟಿರತಕ್ಕದ್ದು ಕಡಿಮೆಯಾಗಿದೆ ಎಂದು ಹೇಳಿದ್ದಾರೆ. ಅದು ನಿಜ, ಬಜೆಟ್ ಅಲೋಕೇಷನ್‌ನಲ್ಲಿ ಈ ಭಾಗಗಳಿಗೆ ಕಡಿಮೆ ಹಣ ಕೊಟ್ಟಿರತಕ್ಕದ್ದು ನಿಜ. ದಾಮಾಷಾ ಪ್ರಕಾರ ಇಲ್ಲಿ ಕೂಡ ಕಡಿಮೆಯಾಗಿದೆ ಎನ್ನುವುದನ್ನು ಒಪ್ಪಿಕೊಳ್ಳುತ್ತೇನೆ. ಇನ್ನು ಡಿಕೇಡ್ ಪರ್‌ಫಾರ್‌ಮೆನ್ಸ್ ಏನು ಮಾಡಿದ್ದೀರಿ ಎಂದು ಹೇಳಿದ್ದಾರೆ. ಅದನ್ನು ನಾನು ಓದಲಿಕ್ಕೆ ಇಷ್ಟಪಡುವುದಿಲ್ಲ. ೩೦೦ ಕೋಟಿ ರೂಪಾಯಿ ಕಾರ್ಯಕ್ರಮ

ಹಾಕಿಕೊಂಡಿದ್ದೇವೆ. ಅದರ ಬಗ್ಗೆ ಚಿಂತನೆ ನಡೆದಿದೆ ಎಂದು ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಇಷ್ಟ ಪಡುತ್ತೇನೆ. This is "PERSPECTIVE 1981-90." Here, it has been stated thus :

> "The Karnataka State has committed to provide drinking water to 100% population as per standard norms and sanitation to 80% of the population according to the international drinking water supply and sanitation decade programme 1981-90. The outlays involved for this massive target is around Rs. 300 Crores. So far in five years, the outlays incurred is about Rs. 36 Crores only. In our State, 143 towns are having water supply service of less than 70 LPCD as against the target of 100 LPCD and 63 towns are having 70-100 LPCD and 36 towns are having above 100 LPCD. In sanitation only, 29.29 lakhs population i.e., about 38.50% is having sanitation facilities, Therefore, it had become imminent to go in for massive investment on water supply and sanitation schemes for urban areas. The proposed Seventh Plan envisages an investment of about Rs. 79 Crores for thesetwo sectors but this is yet to be finalised."

ಬೆಂಗಳೂರು ಜಲಮಂಡಲಿಯಲ್ಲಿ ೨೪೦ ಕೋಟಿ ರೂಪಾಯಿ ಕಾವೇರಿ ೩ನೇ ಹಂತಕ್ಕೆ ನಾವು ಖರ್ಚು ಮಾಡತಕ್ಕಂಥ ವ್ಯವಸ್ಥೆ ಇದೆ ಮತ್ತು ಎರಡನೇ ಹಂತಕ್ಕೆ ೭೫ ಕೋಟಿ ಹೀಗೆ ಒಟ್ಟು ೩೧೫ ಕೋಟಿ ಖರ್ಚು ಮಾಡಬೇಕೆಂದು ಈ ಡಿಕೇಡ್‌ನಲ್ಲಿ ಇಟ್ಟುಕೊಂಡಿದ್ದೇವೆ.

ಸನ್ಮಾನ್ಯ ಅಧ್ಯಕ್ಷರೇ, ಅಕ್ವಾಯಿರಿಯನ್ನು ಮತ್ತೆ ಜಾರಿಗೆ ತನ್ನಿ ಎಂದು ಶ್ರೀ ಧರ್ಮಸಿಂಗ್ ರವರು ಹೇಳಿದ್ದಾರೆ. ಹಲವಾರು ವರ್ಷಗಳ ಚರ್ಚೆ ಮತ್ತು ತಿಳಿವಳಿಕೆಯ ಹಿನ್ನೆಲೆಯಲ್ಲಿ ಅವರ ಹಿಂದಿನ ಸರ್ಕಾರದವರು ಇದನ್ನು ಬದಲಾವಣೆ ಮಾಡಲಿಲ್ಲ. ಆದ್ದರಿಂದ ಇವನ್ನು ಬದಲಾಯಿಸುವ ಚಿಂತನೆ ಸಧ್ಯಕ್ಕಿಲ್ಲ.

ನಗರಸಭೆಗಳಲ್ಲಿ ೯೯ ವರ್ಷ, ೬೦ ವರ್ಷ, ೩೦ ವರ್ಷ ಈ ರೀತಿಯಾಗಿ ಲೀಸ್ ಕೊಟ್ಟಿದ್ದೀರಿ. ಅವು ಗಳಿಂದ ಸಾಕಷ್ಟು ವರಮಾನ ನಗರಸಭೆಗಳಿಗೆ ಬರುವ ಅವಕಾಶ ಇದ್ದರೂ ಸಹ ಅವುಗಳನ್ನು ಉಪ ಯೋಗಿಸಿಕೊಂಡಿಲ್ಲವೆಂದು ಹೇಳಿದರು ಮತ್ತು ರಿವ್ಯೂ ಮಾಡುವಾಗ ಹೆಚ್ಚು ಆದಾಯ ಬರುವಂತೆ ಮಾಡಿ ಎಂದು ಮಾನ್ಯ ಸದಸ್ಯರು ಹೇಳಿದ್ದನ್ನು ಒಪ್ಪಿ ಕೊಳ್ಳುತ್ತೇನೆ.

ಇನ್ನು ಅಲಸೂರು ಲೇಕ್ ಏನೂ ಆಗಿಲ್ಲ. ಅದರ ಸ್ಥಳವನ್ನು ಚೆನ್ನಾಗಿ ಮಾಡತಕ್ಕಂಥ ವ್ಯವಸ್ಥೆ ಮಾಡುತ್ತೇನೆ ಇದರ ಬಗ್ಗೆ ಹೆಚ್ಚಿನ ಕಾಳಜಿ ಇದೆ.

ಕ್ರಿಯೇಷನ್ ಆಫ್ ಅಸೆಟ್ಸ್. ಎಲ್ಲ ಮುನಿಸಿಪಾಲಿಟಿ ಪ್ರೆಸಿಡೆಂಟ್ಸ್ ಮತ್ತು ಚೀಫ್ ಆಫೀಸರ್‌ಗಳಿಗೆ ನಿಮ್ಮ ಡಿಸಿಬಿಯನ್ನು ನೀವು ಉತ್ತಮಪಡಿಸಿಕೊಳ್ಳಿ ಎಂದು ಹೇಳಿದ್ದೇನೆ. ಆ ರೀತಿ ಉತ್ತಮಪಡಿಸಿ ಕೊಂಡಲ್ಲಿ ಸಾಲ ಸ್ಥಳೀಯ ಬ್ಯಾಂಕ್‌ಗಳಿಂದ ಸಿಗುವ ಅವಕಾಶ ಇದೆ. ಜೊತೆಗೆ ಫೀಸಿಬಲ್ ಸ್ಕೀಮ್ ಗಳನ್ನು ಸರ್ಕಾರಕ್ಕೆ ತಂದರೆ ಸರ್ಕಾರ ಗ್ಯಾರಂಟಿ ಕೊಡುವ ವ್ಯವಸ್ಥೆಯನ್ನು ಮಾಡುತ್ತದೆಂದು ಅವರಿಗೆ ತಿಳಿಸಿದ್ದೇನೆ. ಅದೇ ಮಾತನ್ನು ಸನ್ಮಾನ್ಯ ಧರ್ಮಸಿಂಗ್ ಅವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಕೊಡುವ ಸೈಟ್‌ಗಳ ಸಂಖ್ಯೆ ಕಡಿಮೆಯಾಗಿದೆ ಎಂದು ಹೇಳಿದ್ದಾರೆ. ಸ್ವಲ್ಪಮಟ್ಟಿಗೆ ಇದು ನಿಜ. ಆದರೂ ಇದನ್ನು ಜಾಸ್ತಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಎಲ್‌ಐಸಿಯಿಂದ ಎಷ್ಟು ಹಣ ತರುತ್ತೀರಿ ಎಂದು ಕೇಳಿದ್ದಾರೆ. ಒಂದೊಂದು ಸ್ಕೀಮ್‌ಗೂ ಬೇರೆ ಬೇರೆ ಇರುತ್ತದೆ. ಆಫೀಸರ್ಸ್ ಉಪಯೋಗಕ್ಕೋಸ್ಕರವಾಗಿ ಹ್ಯಾಂಡ್‌ಬುಕ್ಸ್‌ಗಳನ್ನು ತಯಾರು ಮಾಡಿದ್ದೇವೆ. ಬೇಕಾದರೆ ಮಾನ್ಯ ಸದಸ್ಯರಿಗೂ ಅವನ್ನು ಕಳಿಸಿಕೊಡುತ್ತೇನೆ. ನೋಡಲಿ.

ಆಮೇಲೆ ಗುಲ್ಬರ್ಗ ನಗರಕ್ಕೆ ನೀರಿನ ವಿಚಾರ ಕೇಳಿದ್ದೀನೆ. ಗುಲ್ಬರ್ಗ ವಾಟರ್ ಸಪ್ಲೈಸ್ಕೀಮ್‌ನಲ್ಲಿ ಬೆಣ್ಣೆತೊರೆ ರಿಸರ್‌ವಾಯಿರ್ ಬಗ್ಗೆ the work is in progress. The estimated cost is Rs 156 lakhs and the expenditure so far incurred is Rs. 200 lakhs. ಇದಕ್ಕೆ ಮುನಿಸಿಪಾಲಿಟಿಯವರು ಕಾರ್ಪೊರೇಷನ್‌ನವರು ತಮ್ಮ ಕಂಟ್ರಿಬ್ಯೂಷನ್ ಕೊಡುತ್ತಿಲ್ಲ. ಆದ್ದರಿಂದ ಕೆಲಸ ಮಾಡಲು ಆಗುತ್ತಿಲ್ಲ. ತ್ವರಿತ ಗತಿಯಲ್ಲಿ ಕೆಲಸ ಮಾಡಲು ಪ್ರಯತ್ನ ಮಾಡುತ್ತೇನೆ. ಸನ್ಮಾನ್ಯ ಕಾಂತಾ ಅವರಿಗೂ ಇದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಡತನದ ಬಗ್ಗೆ ಹೆಚ್ಚಿನ ಚಿಂತನೆ ಮಾಡಿಲ್ಲ ಎಂದು ಮಾತನಾಡಿದ್ದಾರೆ. ಇದು ಸಬ್ ಜುಡೀಸ್ ಆಗಿರುವುದರಿಂದ ಮಾತನಾಡಲು ಇಷ್ಟವಾಗುವುದಿಲ್ಲ ವಾದ ವಿವಾದ ಬಂದರೆ ಕೋರ್ಟಿನಲ್ಲಿರುವ ಕೇಸ್‌ಗಳ ಪ್ರಸ್ತಾಪ ಮಾಡಬಾರದೆಂಬ ಹಿನ್ನೆಲೆಯಲ್ಲಿ ಹೇಳುತ್ತಿದ್ದೇನೆ.

ಸಿಟಿ ಇಂಪ್ರೂವ್‌ಮೆಂಟ್‌ಗೆ ೧೦ ಲಕ್ಷ ಮಾತ್ರ ಇಟ್ಟಿದ್ದು, ಅದು ಸಾಲದೆಂದು ಸದಸ್ಯರು ಹೇಳಿದ್ದಾರೆ ನಿಜ, ಆದರೆ ಇದು ಪರಿಹಾರವಾಗುವುದು ಸದರಿ ಸಂಸ್ಥೆಗಳು ಸ್ಥಳೀಯ ಹಣಕಾಸಿನ ಸ್ಥಿತಿಯನ್ನು ರೂಢಿಸಿ ಕೊಂಡಾಗ ಮಾತ್ರ,

ಇನ್ನು ಇಂಟಿಗ್ರೇಟೆಡ್ ಅರ್ಬನ್ ಡೆವಲಪ್‌ಮೆಂಟ್ ಬಗ್ಗೆ ಮಾತನಾಡಿದ್ದಾರೆ. ೧೬ ಟೌನ್‌ಗಳನ್ನು ಹಿಂದೆ ತೆಗೆದುಕೊಂಡಿದ್ದೆವು. ಹಾಗೂ ಇನ್ನೂ ಅನೇಕ ಯೋಜನೆಗಳು ಇದರ ಬಗ್ಗೆ ಇವೆ. ಅವುಗಳ ಬಗ್ಗೆ ಅವರು ಪ್ರಯತ್ನ ಮಾಡಬೇಕು. ಈ ವರ್ಷ ಎಷ್ಟು ತೆಗೆದುಕೊಳ್ಳುತ್ತೀರಿ ಎಂದೂ ಕೇಳಿದ್ದಾರೆ. ಈ ವಿಚಾರದಲ್ಲಿ ಎಷ್ಟು ನಗರಸಭೆಗಳಿಗೆ ಈ ಸ್ಕೀಮ್ ಅನ್ವಯವಾಗಬೇಕೆಂಬುದರ ಬಗ್ಗೆ ನಾವು ಕೇಂದ್ರ ಸರ್ಕಾರದವರ ಜೊತೆ ಪತ್ರ ವ್ಯವಹಾರ ಮಾಡುತ್ತಿದ್ದೇವೆ. ಅದು ಫೈನಲೈಸ್ ಆದ ತಕ್ಷಣ ಹೇಳಿಕೆ ಕೊಡುತ್ತೇನೆ.

ನಂತರ ಬಿವಿಕೆ ಆಯ್ಯಂಗಾರ್ ರಸ್ತೆ ಅಗಲವಾಗಬೇಕು ಎಂದು ಹೇಳಿದ್ದಾರೆ. ಇದನ್ನು ನಾನೂ ಒಪ್ಪುತ್ತೇನೆ. ಕಾರ್ಪೊರೇಷನ್‌ನವರು ಮಾಡುತ್ತಿದ್ದಾರೆ. ನಾನೂ ಪ್ರಯತ್ನ ಮಾಡಿದ್ದೇನೆ.

ಇನ್ನು ಬೆಂಗಳೂರು ಟ್ರಾಫಿಕ್ ಪ್ರಾಬ್ಲಮ್ಸ್ ಬಗ್ಗೆ ಹೇಳಿದ್ದರೆ ನಾವು ಇದಕ್ಕಾಗಿ ಹಲವಾರು ಯೋಜನೆಗಳನ್ನು ಹಾಕಿಕೊಂಡಿದ್ದೇವೆ. ನೀವು ಹೇಳಿದಂತೆ ಅಲ್ಲಿಯ ಸ್ಕೀಮ್‌ಗಳನ್ನು ಜಾರಿಗೆ ಕೊಡುವುದಕ್ಕೆ ಪ್ರಯತ್ನ ನಡೆಯುತ್ತಿದೆ.

ಬಿಎಂಆರ್‌ಡಿಎ ಇದಕ್ಕೆ ಹೋದ ವರ್ಷವೇ ಈ ಸಭೆಯಲ್ಲಿ ಮಸೂದೆ ಬಂದು ಚರ್ಚೆಯಾಗಿ ಅದು ಅರ್ಧದಲ್ಲೇ ನಿಂತುಹೋಯಿತು. ಈಗ ಲ್ಯಾಪ್ಸ್ ಆಗಿದೆ. ಹೊಸ ಮಸೂದೆಯನ್ನು ತಯಾರು ಮಾಡಿದ್ದೇವೆ ಅದನ್ನು ಈ ವರ್ಷದಲ್ಲೇ ತಂದು ಈ ಸಭೆಯ ಒಪ್ಪಿಗೆಯನ್ನು ಪಡೆಯುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅದರ ಅವಶ್ಯಕತೆ ಇದೆ. ಈ ಮಧ್ಯೆ ಅಫಿಶಿಯಲ್ ಕಮಿಟಿಯನ್ನು ಪೂರ್ವಭಾವಿ ಕೆಲಸ ಗಳನ್ನು ಮಾಡುವುದಕ್ಕೋಸ್ಕರ ಸೂಪರ್ ಟೈಮ್ ಸ್ಕೇಲಿನ ಐಎಎಸ್ ಅಧಿಕಾರಿಯೊಬ್ಬರನ್ನು ನೇಮಕ ಮಾಡಿ ೧೫ ಜನರ ಕಮಿಟಿಯನ್ನು ನೇಮಕ ಮಾಡಿದ್ದೇವೆ. ಆಮೇಲೆ ಬೆಂಗಳೂರು ಜಲ ಮಂಡಲಿಯವರು ಹಳೆಯ ಪೈಪುಗಳನ್ನು ತೆಗೆದುಹಾಕಿ ಹೊಸ ಪೈಪುಗಳನ್ನು ಹಾಕಬೇಕೆಂದು ಹೇಳಿದ್ದಾರೆ. ಇದಕ್ಕಾಗಿ ಏನೂ ಹಣ ಇಟ್ಟಿಲ್ಲವೆಂದು ಹೇಳಿದರು. ಆದರೆ ಪರ್‌ಫಾರ್ಮೆನ್ಸ್ ಬಜೆಟ್‌ನಲ್ಲಿ ಪೇಜ್ ೨೫ ಪ್ಯಾರ ೧ರಲ್ಲಿ ಈಗಾಗಲೇ ಒಂದು ಕೋಟಿ ರೂ.ಗಳನ್ನು ಹಳೆಯ ಪೈಪುಗಳನ್ನು ಬದಲಾಯಿಸುವುದಕ್ಕಾಗಿ ಖರ್ಚು ಮಾಡತಕ್ಕ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಸುಮಾರು ೬೦ ಪರ್ಸೆಂಟ್ ಕೆಲಸ ಪೈಪ್ ಗಳನ್ನು ತೆಗೆಯುವುದಕ್ಕೆ ಪ್ರಯತ್ನ ನಡೆದಿದೆ. ಇದನ್ನು ಮುಂದುವರೆಸಿಕೊಂಡು ಹೋಗುತ್ತೇವೆ.

ಶೇಕಡ ೧೮ರಷ್ಟು ಹಣವನ್ನು ಎಸ್‌ಸಿ/ಎಸ್‌ಟಿಗಳಿಗೆ ವ್ಯಯ ಮಾಡಬೇಕೆಂದು ಈ ಒಂದು ಕೆಲಸ ಆಗಬೇಕೆಂದೂ ಹೇಳಿದರು. ಈ ಕೆಲಸ ಆಗುತ್ತಿದೆ. ಕೆಲವು ಸಿಟಿ ಮುನಿಸಿಪಲ್ ಟೌನ್ ಮುನಿಸಿಪಲ್ ಗಳಲ್ಲಿ ಸರಿಯಾಗಿ ವ್ಯವಸ್ಥಿತವಾಗಿ ಆಗುತ್ತಿಲ್ಲ ಎಂಬುದನ್ನು ನಾನೇ ಕಂಡಿದ್ದೇವೆ. ಅವರಿಗೆ ಈಗಾಗಲೇ ಸರ್ಕಾರದ ಗೈಡ್‌ಲೈನ್ಸ್ ಇದ್ದರೂ ಕೂಡ ಅದರಂತೆ ನಡೆಯುತ್ತಿಲ್ಲ. ಮತ್ತು ನಗರಸಭೆಯ ಸದಸ್ಯರನ್ನು ಕೇಳಿ ಎಲ್ಲರಿಗೂ ಪಂಚತಕ್ಕಂಥ ರೀತಿಯಲ್ಲಿ ಇವರಿಗೂ ವಿಶೇಷವಾಗಿ ಈ ಕೆಲಸಮಾಡಬೇಕೆಂದು ಆದೇಶ ವನ್ನು ಈಗಾಗಲೇ ಕೊಟ್ಟಿದ್ದೇವೆ ಎಂದು ಮತ್ತೊಮ್ಮೆ ಈ ವಿಚಾರವನ್ನು ತಿಳಿಸುವುದಕ್ಕೆ ಇಷ್ಟಪಡು ತ್ತೇನೆ.

ಸೋಶಿಯಲ್ ಜಸ್ಟಿಸ್ ಕಮಿಟಿ ಎಂದು ಮಾಡಿ ಎಂದು ಹೇಳಿದ್ದಾರೆ. ಈಗಾಗಲೇ ಮಾಡಿದ್ದೇವೆ. ಆದರೆ ಅದರ ಅಧಿಕಾರ ವ್ಯಾಪ್ತಿ ಏನು ಎಂದು ನಿಶ್ಚಯ ಮಾಡಿಲ್ಲ. ಕಾರ್ಯಕ್ರಮ ತೆಗೆದುಕೊಳ್ಳಲಾಗಿಲ್ಲ ನಿಜ. ಕಾರ್ಪೊರೇಷನ್ ಆಕ್ಟ್ ತಿದ್ದುಪಡಿ ಮಾಡತಕ್ಕ ಸಮಯದಲ್ಲಿ ಅದನ್ನು ಗಮನದಲ್ಲಿಟ್ಟುಕೊಂಡು ಯಾವ ರೀತಿ ಮಾಡಬೇಕೆಂಬುದನ್ನು ವಿಚಾರ ಮಾಡುತ್ತೇನೆ.

ಇನ್ನು ಬಿಡಿಎ ಲೇಔಟ್ಸ್‌ನಲ್ಲಿ ಸಿವಿಕ್ ಅಮಿನಿಟೀಸ್ ಅನ್ನು ಕೊಡಬೇಕೆಂದು ಹೇಳಿದ್ದಾರೆ. ಕೆಲವೊಂದು ಕಡೆ ಕೊಟ್ಟಿದ್ದಾರೆ. ಕೆಲವೊಂದು ಕಡೆ ಕೊಟ್ಟಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ಅದನ್ನು ನಾನು ಗಮನದಲ್ಲಿಟ್ಟುಕೊಂಡು ಅಲ್ಲಿ ಸಿವಿಕ್ ಅಮಿನಿಟೀಸ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಇನ್ನು ಸೆಲ್ಫ್ ಫೈನಾನ್ಸ್ ಹೌಸಿಂಗ್ ಸ್ಕೀಂ ಬಗ್ಗೆ ಶ್ರೀಮಾನ್ ಧರ್ಮಸಿಂಗ್‌ರವರು ಪ್ರಸ್ತಾಪ ಮಾಡಿದ್ದಾರೆ. ಈ ಸ್ವಯಂ ನೆರವು ಯೋಜನೆಯ ಅಂಗವಾಗಿ ಎಲ್ಲೆಲ್ಲಿ ಯಾವ್ಯಾವ ಕೆಲಸಗಳು ನಡೆಯುತ್ತಾ ಇವೆ ಎನ್ನುವುದನ್ನು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ರಾಜಾಮಹಲ್ ವಿಲಾಸ್ ೨ನೇ ಹಂತ ಬೈರಸಂದ್ರ-ತಾವರೆಕೆರೆ-ಮಡಿವಾಳ ಹಾಗೂ ನಂದಿನಿ ಬಡಾವಣೆಯಲ್ಲಿ ಅಧಿಕ ವರಮಾನ, ಮಧ್ಯಮ ವರಮಾನ ಹಾಗೂ ಅಲ್ಪ ವರಮಾನದವರಿಗಾಗಿ ಮನೆಗಳನ್ನು ಕಟ್ಟಿಕೊಡುವ ಕಾರ್ಯಕ್ರಮವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಪ್ರಾರಂಭಿಸಿದೆ. ವಿವರಗಳು ಈ ರೀತಿ ಇದೆ.

೧) ರಾಜಾಮಹಲ್ ವಿಲಾಸ್ ೨ನೇ ಹಂತದಲ್ಲಿ ಅಧಿಕ ವರಮಾನ ವರ್ಗದವರಿಗಾಗಿ ೫೫೮ ಮನೆಗಳು.

೨) ಬೈರಸಂದ್ರ-ತಾವರೆಕೆರೆ-ಮಡಿವಾಳ ಬಡಾವಣೆಯಲ್ಲಿ ಮಧ್ಯಮ ಮತ್ತು ಅಲ್ಪ ವರಮಾನದವರಿಗಾಗಿ ೫೦೮ ಮನೆಗಳು.

೩) ನಂದಿನಿ ಬಡಾವಣೆಯಲ್ಲಿ ಮಧ್ಯಮ ಮತ್ತು ಅಲ್ಪ ವರಮಾನದವರಿಗಾಗಿ ೧೪೦೭ ಮನೆಗಳು ಈ ಕೆಲಸಗಳು ತ್ವರಿತಗತಿಯಲ್ಲಿ ನಡೆಯುತ್ತಾ ಇದ್ದು ಅದು ಈಗ ಮುಕ್ತಾಯ ಹಂತದಲ್ಲಿರುತ್ತದೆ ಎನ್ನುವ ವಿಷಯವನ್ನು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಬೆಂಗಳೂರು ಸಿಟಿ ಕಾರ್ಪೋರೇಷನ್ ಹೆಚ್ಚಿನ ಕಾಳಜಿ ವಹಿಸಬೇಕು ಎನ್ನುವ ಮಾತನ್ನು ಹೇಳಿದ್ದಾರೆ ಈಗಾಗಲೇ ಬೆಂಗಳೂರು ನಗರದ ಎಲ್ಲಾ ಎಂ.ಎಲ್.ಎ. ಎಂ.ಎಲ್.ಸಿ. ಮತ್ತು ಎಂ.ಪಿ ಗಳನ್ನು ಒಂದು ತಿಂಗಳಿಗೊಂದು ಸಲವೋ ಎರಡು ತಿಂಗಳಿಗೊಂದು ಸಲವೋ ಎಲ್ಲರನ್ನೂ ಕರೆದು ಅವರೊಂದಿಗೆ ಸಮಾಲೋಚನೆ ಮಾಡಿ ಅವರಿಂದ ಬಂದಿರತಕ್ಕಂಥಾ ಸಲಹೆ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಅದರಂತೆ ಕೆಲಸ ನಡೆಯುತ್ತಾ ಇದೆ ಎಂದು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಹೈರೈಜ್ ಬಿಲ್ಡಿಂಗ್ಸ್ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ ಮಾನ್ಯ ಸದಸ್ಯರಿಗೆ ನನಗಿಂತಲೂ ಚೆನ್ನಾಗಿ ಗೊತ್ತಿದೆ. ಈ ಒಂದು ಪ್ರಕರಣ ಸ್ವಲ್ಪ ಮಟ್ಟಿಗೆ ಅವಘಡವಾದಾಗಲೇ ಬೆಳಕಿಗೆ ಬಂದಿದ್ದು. ಇದು ಈಗಾಗಲೇ ಸುಪ್ರೀಂಕೋರ್ಟಿಗೆ ಹೋಗಿರುವುದರಿಂದ ಅವರು ಈ ಬಗ್ಗೆ ಏನು ತೀರ್ಮಾನ ಕೊಡುತ್ತಾರೋ ಅವರ ತೀರ್ಮಾನದಂತೆ ನಡೆದುಕೊಳ್ಳುತ್ತೇವೆ. ಇನ್ನು ೬ ಅಂತಸ್ತು, ೮ ಅಂತಸ್ತು ಕಟ್ಟುವ ವಿಚಾರದಲ್ಲಿ ಆಪಾದನೆ ಮಾಡಿದ್ದಾರೆ, ಈ ಬಗ್ಗೆ ಸುಪ್ರೀಂಕೋರ್ಟ್‌ನವರು ಯಾವರೀತಿ ತೀರ್ಮಾನ ಕೊಡುತ್ತಾರೋ ಅದರಂತೆ ನಡೆದುಕೊಳ್ಳುತ್ತೇವೆ. ಇನ್ನು ಗಂಗಾರಾಂ ಕಟ್ಟಡದ ವಿಚಾರದ ಬಗ್ಗೆ ಹೇಳುವುದಾದರೆ ಈ ಬಗ್ಗೆ ಜುಡಿಷಿಯಲ್ ಎನ್‌ಕ್ವೈರಿ ರಿಪೋರ್ಟ್ ಬಂದಮೇಲೆ ಸರ್ಕಾರದ ನಿಲುವು ಏನು, ನಿರ್ಧಾರ ಏನು ಎನ್ನುವುದನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಕೊನೆಯದಾಗಿ ಧರ್ಮಸಿಂಗ್‌ರವರು ಒಂದು ಮಾತು ಹೇಳಿದರು. ಅವರು ಚೇಷ್ಟೆಯಿಂದ ಹೇಳಿದರೋ ಸರಿಯಾಗಿ ಹೇಳಿದರೋ ನನಗೆ ಗೊತ್ತಿಲ್ಲ. ನಾನು ಸ್ವಲ್ಪ ನಗುಮುಖ ಹಾಕಿಕೊಂಡು ಇರಬೇಕು ಎಂದು ಹೇಳಿದ್ದಾರೆ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಹಸನ್ಮುಖವಾಗಿರಬೇಕು ಎಂದು.

ಶ್ರೀ ಎ. ಲಕ್ಷ್ಮೀಸಾಗರ್.—ಹಸನ್ಮುಖವಾಗಿರಬೇಕು ಎಂದೇ ಆಗಲಿ. ಆದರೆ ನನ್ನ ಜೀವಮಾನದಲ್ಲೇ ನಡೆದುಕೊಂಡು ಬಂದ ದಾರಿಯಂತೆ ನಾನು ಹೋಗಬೇಕಾಗುತ್ತದೆ. ಅವರಿಗೆ ಗೊತ್ತಿಲ್ಲ. ಹಸನ್ಮುಖಿಯಾಗಲಿ, ಕೃತಕ ನಗುವಾಗಲಿ ಹೊಸದಾಗಿ ಬೀರುವುದಕ್ಕೆ ನನ್ನ ಕೈಯ್ಯಲ್ಲಿ ಆಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಗೋಮುಖ ವ್ಯಾಘ್ರದಂತೆ.....

ಶ್ರೀ ಎ. ಲಕ್ಷ್ಮೀಸಾಗರ್.—ಗೋಮುಖ ವ್ಯಾಘ್ರದಂತೆಯೂ ಸಹ ನಡೆದುಕೊಳ್ಳುವುದಕ್ಕಾಗುವುದಿಲ್ಲ. ತಮಗೆ ಹೇಳಬೇಕಾದರೆ ನನ್ನ ಬಣ್ಣವನ್ನು ಸಹ ಬದಲಾಯಿಸುವುದಕ್ಕೂ ಆಗುವುದಿಲ್ಲ. ನಾನು ಮಂತ್ರಿಯಾಗುವುದಕ್ಕಿಂತ ಮುಂಚಿತವಾಗಿ ಮೊದಲು ಹೇಗೆ ಇದ್ದೆನೋ ಹಾಗೆಯೇ ಇದ್ದೇನೆ. ನನ್ನ ಬಣ್ಣ ಗ್ಯಾರಂಟಿ ಬಣ್ಣ, ಅದನ್ನೇನೂ ಬದಲಾಯಿಸುವುದಕ್ಕಾಗುವುದಿಲ್ಲ. ಆದರೆ ಮಾನ್ಯ ಸದಸ್ಯರು ಹೇಳಿದ ಹಾಗೆ ನಾನು ಕೃತಕ ನಗೆಯನ್ನು ಬೀರುವುದಕ್ಕೆ ಪ್ರಯತ್ನ ಮಾಡುತ್ತೇನೆ, ಆದರೆ ಅದು ಎಷ್ಟರ ಮಟ್ಟಿಗೆ ಆಗುತ್ತದೋ ಇಲ್ಲವೋ ಎನ್ನುವುದನ್ನು ಹೇಳುವುದು ಕಷ್ಟ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮನ್ನು ನೋಡಿದರೆ ಮಾನ್ಯ ಸದಸ್ಯರಿಗೆ ಆ ರೀತಿಯ ಭಾವನೆ ಬಂದಿದೆ ಅಷ್ಟೆ.

ಶ್ರೀ ಎ. ಲಕ್ಷ್ಮೀಸಾಗರ್.—ಆಗಲಿ. ಇನ್ನು ಮಾನ್ಯ ನಾರಾಯಣರಾವ್ ಅವರು ಬೆಂಗಳೂರಿಗೆ ಬರತಕ್ಕಂಥ ವಲಸೆಯನ್ನು ತಡೆಗಟ್ಟಬೇಕು ಎಂದು ಹೇಳಿದರು. ಮಾನ್ಯ ಅಧ್ಯಕ್ಷರೇ, ಸಂವಿಧಾನದ ಪ್ರಕಾರ ವಲಸೆ ಬರುವವರನ್ನು ತಡೆಗಟ್ಟುವುದಕ್ಕಾಗುವುದಿಲ್ಲ. ನಾವು ಇಲ್ಲಿಗೆ ಬರುವವರನ್ನು ಬರಬೇಡಿ ಎಂದೂ ಹೇಳುವುದಕ್ಕಾಗುವುದಿಲ್ಲ. ಆದರೆ ಅವರು ಈ ಊರಿನಲ್ಲೇ ಒಂದು ಮನೆ ಮಾಡಿಕೊಂಡು ವಾಸ ಮಾಡಿಕೊಂಡು ಇರಲು ಅಭ್ಯಂತರ ಇಲ್ಲ. ಆದರೆ ಖಾಲಿ ಇದ್ದಂಥಾ ಜಾಗದಲ್ಲಿ ಯಾವುದೇ ಒಂದು ಗುಡಿಸಲುಗಳನ್ನು ಹಾಕಿಕೊಳ್ಳುವುದನ್ನಾಗಲಿ ಅಥವಾ ಮನೆಯನ್ನು ಕಟ್ಟುವುದಾಗಲಿ ಇದ್ದರೆ ಅದನ್ನು ತಡೆಯಬೇಕೆನ್ನುವುದೇ ನಮ್ಮ ಗುರಿ, ಮತ್ತು ನಮ್ಮ ಉದ್ದೇಶವನ್ನಾಗಿ ಇಟ್ಟುಕೊಂಡಿದ್ದೇವೆ.

ಇನ್ನು ನಗರಸಭೆಗಳಿಗೆ ಹೆಚ್ಚಿನ ಸಹಾಯ ಕೊಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದಕ್ಕೆ ನಾನು ಈಗಾಗಲೇ ಉತ್ತರ ಹೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಗುಡಿಸಲು, ಮನೆಗಳನ್ನು ಕೆಡವಿದ ವಿಚಾರದಲ್ಲಿ ನಾನು ಒಂದು ಮಾತನ್ನು ಹೇಳಬೇಕಾಗಿದೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಈ ಬಗ್ಗೆ ಏನು ಹೇಳಬೇಕು ಎನ್ನುವುದನ್ನು ಬರವಣಿಗೆಯಲ್ಲಿ ಬರೆದುಕೊಂಡು ಬಂದಿದ್ದಾರೆ. ಮೊದಲು ಅದನ್ನು ಹೇಳಿ ಬಿಡಲಿ, ಆ ಮೇಲೆ ನೀವು ಏನು ಕೇಳಬೇಕೋ ಕೇಳಿ. ಅವರ ಬರವಣಿಗೆಯಲ್ಲಿ ಏನು ಬರೆದುಕೊಂಡು ಬಂದಿದ್ದಾರೋ ಅದಕ್ಕೆ ತೊಂದರೆ ಕೊಡಬಾರದು.

ಶ್ರೀ ಎಸ್. ಬಂಗಾರಪ್ಪ.—ರೂಲ್ ೬೮ರ ಪ್ರಕಾರ ಇದು ಚರ್ಚೆಯಾಗಬೇಕಾಗಿದೆ. ಈ ವಿಚಾರ ಮುಂದಿನ ವಾರ ಬರುತ್ತದೆ. ಅದಕ್ಕೆ ಪ್ರತ್ಯೇಕವಾದ ಉತ್ತರ ಕೊಡುವುದಕ್ಕೆ ಮಾನ್ಯ ಮಂತ್ರಿಗಳು ಸಿದ್ಧವಾಗಿದ್ದರೆ ಸಾಕು.

ಶ್ರೀ ಎ. ಲಕ್ಷ್ಮೀಸಾಗರ್.—ಇನ್ನು ನಗರ ಸಭೆಯಲ್ಲಿ ಎಸ್ಟಾಬ್ಲಿಷ್‌ಮೆಂಟ್ ಛಾರ್ಜಸ್ ಅನ್ನು ಕಡಿಮೆ ಮಾಡಬೇಕು ಎಂದು ಹೇಳಿದ್ದಾರೆ. ಅದು ನನ್ನ ಕೈಯಲ್ಲಿ ಇಲ್ಲ. ಇನ್ನೂ ಅನೇಕ ವಿಷಯಗಳ ಬಗ್ಗೆ ನಗರ ಸಭೆಯ ಬಗ್ಗೆ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಎಂದು ಹೇಳಿದ್ದಾರೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರಿಗೆ ತಿಳಿಸುವುದೇನೆಂದರೆ ಇವೆಲ್ಲಾ ಸ್ವಾಯತ್ತತೆ ಸಂಸ್ಥೆಗಳು, ಆ ಸಂಸ್ಥೆಯ ಅಧಿಕಾರ ವ್ಯಾಪ್ತಿಯಲ್ಲಿ ಅವುಗಳು ಕೆಲಸ ಮಾಡತಕ್ಕಂಥಾವುಗಳು ಸಾಮಾನ್ಯವಾದ ಪರಿಸ್ಥಿತಿಯಲ್ಲಿ ಸರ್ಕಾರ ಪ್ರವೇಶ ಮಾಡುವುದಿಲ್ಲ. ವಿಶೇಷ ಪರಿಸ್ಥಿತಿಯಲ್ಲಿ ಮಾತ್ರ ಅಂದರೆ ಅವರು ಕೈಮೀರಿ ನಡೆದುಕೊಂಡಾಗ ಮಾತ್ರ ಅದಕ್ಕೆ ವಿರುದ್ಧವಾಗಿ ನಡೆದುಕೊಂಡಾಗ ಮಾತ್ರ ಸರ್ಕಾರ ಮಧ್ಯೆ ಪ್ರವೇಶ ಮಾಡುವುದಕ್ಕೆ ಅವಕಾಶ ಇದೆ. ಸಾಮಾನ್ಯವಾದ ಪರಿಸ್ಥಿತಿಯಲ್ಲಿ ಸರ್ಕಾರ ಮಧ್ಯೆ ಪ್ರವೇಶ ಮಾಡುವುದನ್ನು ಹಿಂದೂ ಮಾಡಿಲ್ಲ, ಮುಂದೂ ಮಾಡುವುದಿಲ್ಲ, ನಾವೂ ಸಹ ಮಾಡುವುದಿಲ್ಲ. ಆದರೆ ಅದನ್ನು ಸರಿಪಡಿಸತಕ್ಕಂಥ ಜವಾಬ್ದಾರಿ, ತಿಳುವಳಿಕೆ ಸ್ಥಳೀಯ ಸಂಸ್ಥೆಗಳಿಗೆ ಇರಬೇಕು. ಇನ್ನು ಅದರಲ್ಲಿ ತೆರಿಗೆ ವಸೂಲಿ ಮಾಡುವುದು ಬಹಳ ಇದೆ. ಅದನ್ನು ಚಾಚೂ ತಪ್ಪದೆ ಜವಾಬ್ದಾರಿಯಿಂದ ನಿರ್ವಹಿಸಿ ಕೆಲಸ ಮಾಡಬೇಕು. ಇದನ್ನು ಆಗಲೇ ಹೇಳಿದ್ದೇನೆ.

ಇನ್ನು ಡೈರೆಕ್ಟರ್ ಆಫ್ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಅಧಿಕಾರಿಗಳು ಅಲ್ಲಿ ತೆರಿಗೆ ವಸೂಲಿ ಮಾಡುವುದರ ಬಗ್ಗೆ ಬೇಜವಾಬ್ದಾರಿ ಇದೆ ಅನ್ನುವ ಮಾತನ್ನು ಹೇಳಿದ್ದಾರೆ. ನಿಜ; ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಅದನ್ನು ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಹೋಗುವ ಜವಾಬ್ದಾರಿ ಆಯಾಯ ಮುನಿಸಿಪಾಲಿಟಿಗಳಿಗೆ ಕೊಟ್ಟಿದ್ದೇವೆ. ಅವರು ಕಾನೂನು ರೀತ್ಯ ನಡೆದುಕೊಂಡು ಹೋಗಬೇಕು. ಆದರೂ ಕೂಡ ಈ ಬಗ್ಗೆ ಮಾನ್ಯ ಸದಸ್ಯರು ಹೇಳಿದ ವಿಷಯವನ್ನು ಗಮನದಲ್ಲಿಟ್ಟು ಕೊಂಡಿರುತ್ತೇನೆ. ಇನ್ನು ಲೋಕಲ್ ಬಾಡೀಸ್ ಬಗ್ಗೆ ಅವರಿಗೆ ವರಮಾನ ಬರುವ ಬಗ್ಗೆ, ತೆರಿಗೆಯ ವಿಚಾರವಾಗಿ ಹೇಳಿದ್ದಾರೆ. ಇದನ್ನು ಗಮನದಲ್ಲಿಟ್ಟುಕೊಂಡು ಯಾವ ನಗರಸಭೆಗಳಲ್ಲಿ ಖಾಲಿ ನಿವೇಶನವನ್ನು ಇಟ್ಟುಕೊಂಡಿರುತ್ತಾರೋ ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳುವಂತೆ ಹೇಳಿದ್ದಾರೆ. ಇದಕ್ಕೆ ಉತ್ತರವನ್ನು ನಾನು ಈಗಾಗಲೇ ಹೇಳಿದ್ದೇನೆ. ಇದಲ್ಲದೆ ಲೀಜ್ ಕೊಡುವ ವಿಚಾರದಲ್ಲಿ ಮತ್ತು ರಿವ್ಯೂ ಮಾಡುವ ವಿಚಾರದಲ್ಲಿ ಹೇಳಿದ್ದಾರೆ. ಇದನ್ನೂ ಸಹ ಆಯಾ ಸ್ಥಳೀಯ ಸಂಸ್ಥೆಗಳೇ ಜವಾಬ್ದಾರಿ ವಹಿಸಿಕೊಂಡು ವರಮಾನ ಬರತಕ್ಕಂಥಾ ರೀತಿಯಲ್ಲಿ ಮಾಡಿಕೊಳ್ಳಬೇಕು. ಮಾನ್ಯ ಸದಸ್ಯರು ಹೇಳಿದ ಹಾಗೆ ಖಾಲಿನಿವೇಶನಗಳನ್ನು ಸಹ ಉಪಯೋಗಿಸಿಕೊಂಡು ಅದರಿಂದ ವರಮಾನ ಬರುವ ಹಾಗೆ ಸ್ಥಳೀಯ ಸಂಸ್ಥೆಗಳು ಮಾಡುವ ಹಾಗೆ ಮಾಡಿಕೊಳ್ಳಬಹುದು. ಇನ್ನು ಅಡ್ವರ್ಟೈಸ್‌ಮೆಂಟ್ ಟ್ಯಾಕ್ಸ್, ಮೋಟಾರ್ ವೆಹಿಕಲ್ ಟ್ಯಾಕ್ಸ್ ಆಸ್ತಿ ತೆರಿಗೆ ಈ ವಿಚಾರದಲ್ಲಿ ಲೋಕಲ್ ಫೈನಾನ್ಸ್ ಕಮಿಟಿ ರಿಪೋರ್ಟ್ ಬಂದಿದೆ. ಅದರ ಬಗ್ಗೆ ಇಷ್ಟರಲ್ಲೆ ಸರ್ಕಾರ ಸೂಕ್ತ ತೀರ್ಮಾನ ತೆಗೆದುಕೊಳ್ಳುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಟೆಂಡರ್ ವಿಚಾರದಲ್ಲಿ ಸ್ವಲ್ಪ ತೊಂದರೆ ಇದೆ ಎನ್ನುವ ಮಾತನ್ನು ಹೇಳಿದರು ನಿಜ. ಆದರೆ ಅದು ಬಿಟ್ಟು ಬೇರೆ ಮಾರ್ಗ ಇನ್ನಾವುದು ಇದೆ. ತಮಗೆ ಹೇಳಬೇಕಾದರೆ ನಾವು ಚಾಪೆ ಕೆಳಗೆ ತೂರುವುದಕ್ಕೆ ಹೊರಟರೆ ಬೇರೆಯವರು ರಂಗೋಲಿ ಕೆಳಗೆ ತೂರುವುದಕ್ಕೆ ಹೋಗುತ್ತಾರೆ. ಅದು ಬಿಟ್ಟು ಬೇರೆ ಮಾರ್ಗ ಇಲ್ಲ. ಇನ್ನೇನಾದರೂ ಮಾರ್ಗ ಇದ್ದರೆ ಹೇಳಿ.

ಇನ್ನು ಸ್ವಚ್ಛತೆ ವಿಚಾರದಲ್ಲಿ ಗುಡಿಸುವ ವಿಚಾರದಲ್ಲಿ ಮಾನ್ಯ ನಾರಾಯಣರಾವ್‌ರವರು. ಈ ಬಗ್ಗೆ ಯಾಂತ್ರಿಕವಾಗಿ ಒಂದು ಹೊಸ ಪದ್ಧತಿ ತರಬೇಕೆಂದು ಹೇಳಿದರು. ಈಗಾಗಲೇ ಈ ದಿಶೆಯಲ್ಲಿ ಕೆಲಸ ನಡೆಯುತ್ತಾ ಇದೆ. ಯಾಂತ್ರಿಕವಾಗಿ ಗುಡಿಸುವ ಕೆಲಸ ಬೆಂಗಳೂರಿನಲ್ಲಿ ನಡೆದಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಸೈಟ್ಸ್ ಬೆಲೆ ಜಾಸ್ತಿ ಎನ್ನುವ ಮಾತನ್ನು ಹೇಳಿದ್ದಾರೆ. ನಿಜ, ಸನ್ಮಾನ್ಯ ಅಧ್ಯಕ್ಷರೇ, ಈಗ ಏನಾಗಿದೆ ಎಂದರೆ ಜಮೀನಿನ ಒಡೆಯನ ಹತ್ತಿರಕ್ಕೇನೇ ಹೋಗಿ ನೇರವಾಗಿ ಆ ಜಮೀನನ್ನು ಪರ್ಚೇಸ್ ಮಾಡತಕ್ಕಂಥ ವ್ಯವಸ್ಥೆ ಇದೆ. ಲ್ಯಾಂಡ್ ಅಕ್ವಿಸಿಷನ್ ಅಧಿಕಾರಿಗಳ ಹತ್ತಿರ ಹೋಗ ಬೇಕಾಗಿಲ್ಲ. ಕೊನೆಯ ತೀರ್ಮಾನ ಭೂಮಿಯ ಒಡೆಯನದೇ ಆಗಿರುವುದರಿಂದ ಅವನಿಗೆ ಜಾಸ್ತಿ ಬೆಲೆ ಕೊಟ್ಟುಕೊಂಡು ಕೊಳ್ಳುತ್ತಾರೆ. ಅದನ್ನು ಸುಲಭ ಬೆಲೆಯಲ್ಲಿ ಕೊಡುವ ಹಾಗೆ ಹೇಳುತ್ತೇನೆ. ಇನ್ನು ಬಿ.ಡಿ.ಎ. ಲೇಔಟ್ ರೆವಿನ್ಯೂ ಪ್ಯಾಕೆಟ್ಸ್ ಏನು ಇದೆ ಅದನ್ನು ರೆಗ್ಯುಲರೈಸ್ ಮಾಡಬೇಕೆಂದು ಶ್ರೀ ನಾರಾಯಣರಾವ್‌ರವರು ಹೇಳಿದರು. ಈಗಾಗಲೇ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡಿದ್ದಾರೆ. ಉಳಿದಿರತಕ್ಕಂಥಾ ರೆವಿನ್ಯೂ ಪಾಕೆಟ್ಸ್‌ಗಳ ಬಗ್ಗೆ ಕೂಡ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರಿಗಳಿಗೆ ಆದೇಶ ಕೊಡುತ್ತೇನೆ.

ಇನ್ನು ಸ್ಲಂ ಕ್ಲಿಯರೆನ್ಸ್ ಬಗ್ಗೆ ಸರಿಯಾಗಿ ಕೆಲಸ ನಡೆಯುತ್ತಾ ಇಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಸ್ಲಂ ಕ್ಲಿಯರೆನ್ಸ್ ಬೋರ್ಡ್‌ನವರು ಸಹ ಹಣವನ್ನು ಖರ್ಚು ಮಾಡಿಲ್ಲ ಎನ್ನುವ ಮಾತನ್ನು ಹಲವಾರು ಸದಸ್ಯರು ಹೇಳಿದ್ದಾರೆ. ಆ ಬಗೆ ನಾನು ಉತ್ತರಕೊಡುವುದಕ್ಕೆ ಇಷ್ಟ ಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ. ಈ ಕೊಳಚೆ ನಿರ್ಮೂಲನಾ ಕೆಲಸಕ್ಕೆ ರಾಜ್ಯ ಸರ್ಕಾರದ ಹಣ ಮತ್ತು ಕೇಂದ್ರ ಸರ್ಕಾರದ ಹಣ ಎಷ್ಟೆಷ್ಟು ಖರ್ಚಾಗಿದೆ ಅನ್ನುವುದರ ಬಗ್ಗೆ ೩ ವರ್ಷದ ಅಂಕಿಅಂಶವನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ೧೯೮೨–೮೩ರಲ್ಲಿ ರಾಜ್ಯ ಸರ್ಕಾರದ್ದು ೧೪೩ ಲಕ್ಷ ಆ ವರ್ಷ ಕೇಂದ್ರದಿಂದ ಹಣ ಬರಲಿಲ್ಲ ಅದರಲ್ಲಿ ಖರ್ಚಾಗಿರುವುದು ೧೬೫ ಲಕ್ಷ, ಹೆಚ್ಚಿಗೆ ೨೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಹಾಗೆಯೇ ೧೯೮೩–೮೪ರಲ್ಲಿ ರಾಜ್ಯ ಸರ್ಕಾರದ್ದು ೧೧೭.೬೦ ಲಕ್ಷ ಕೇಂದ್ರ ಸರ್ಕಾರದಿಂದ ಬಂದದ್ದು ೬೫ ಲಕ್ಷ, ಒಟ್ಟು ೧೮೨.೬೦ ಲಕ್ಷ, ಆದರೆ ಅದರಲ್ಲಿ ಖರ್ಚಾಗಿರುವುದು ೧೮೭.೬೧ ಲಕ್ಷ ರೂಪಾಯಿ.

೫.೦೧ ಲಕ್ಷ ಜಾಸ್ತಿ ಖರ್ಚು ಮಾಡಿದ್ದೇವೆ. ೧೯೮೪-೮೫ರಲ್ಲಿ ರಾಜ್ಯ ಸರ್ಕಾರ ೩೧೮ ಲಕ್ಷ ರೂಪಾಯಿಗಳನ್ನು ಕೊಟ್ಟಿವೆ. ವರ್ಷೇ ವರ್ಷೇ ಜಾಸ್ತಿ ಮಾಡಿಕೊಂಡು ಹೋಗಲಾಗಿದೆ. ಕೇಂದ್ರ ಸರ್ಕಾರ ಕೂಡ ಜಾಸ್ತಿ ಮಾಡುತ್ತಾ ಹೋಗಿದೆ. ೧೯೮೪-೮೫ರಲ್ಲಿ ಕೇಂದ್ರ ಸರ್ಕಾರ ೧೦೪ ಲಕ್ಷ ರೂಪಾಯಿಗಳನ್ನು ಕೊಟ್ಟಿದೆ. ಒಟ್ಟು ೪೭೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿತ್ತು. ೨೭೭.೬೯ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಲಾಗಿದೆ. ಕಡಿಮೆಯಾಗಿರುವುದು ನಿಜ. ಇದಕ್ಕೆ ಕಾರಣ ಕೇಂದ್ರ ಸರ್ಕಾರದಿಂದ ಹಣ ತಡವಾಗಿ ಬಂದಿದೆ. ಈ ಹಣ ಲ್ಯಾಪ್ಸ್ ಆಗುವುದಿಲ್ಲ. ಈ ಹಣದ ಜೊತೆಗೆ ಇನ್ನೂ ಹೆಚ್ಚು ಹಣವನ್ನು ಸೇರಿಸಿ ಎಲ್ಲವನ್ನೂ ಖರ್ಚು ಮಾಡತಕ್ಕ ವ್ಯವಸ್ಥೆ ಮಾಡಲಾಗುವುದು. ಜಮೀನು ವಶಪಡಿಸಿಕೊಳ್ಳುವ ವಿಚಾರದಲ್ಲಿ ಜಮೀನು ಮಾಲೀಕರು ಕೋರ್ಟಿಗೆ ಹೋಗಿರುವುದರಿಂದ ವಿಳಂಬವಾಗಿದೆ. ಇದರ ಬಗ್ಗೆ ಕೂಡ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಇನ್ನು ನೀರು ಸರಬರಾಜು ಮಂಡಲಿಯ ಬಗ್ಗೆ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಬೆಂಗಳೂರು ನಗರಕ್ಕೆ ಹೇಮಾವತಿ ನೀರನ್ನು ಉಪಯೋಗಿಸಿಕೊಳ್ಳಬೇಕೆಂದು ಹೇಳಿದ್ದಾರೆ. ಇದರ ಬಗ್ಗೆ ಯೋಚನೆ ಮಾಡಲಾಗುವುದು. ಕಮಿಟ್‌ಮೆಂಟ್ ಮಾಡಿಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಹೇಮಾವತಿ ನೀರು ತರುವ ಬಗ್ಗೆ ಚಿಂತನೆ ಮಾಡುತ್ತಿದ್ದೇವೆ. ತೀರ್ಮಾನ ಮಾಡಿಲ್ಲ. ಬೆಂಗಳೂರು ನಗರ ಸಭೆ ದಕ್ಷತೆಯಿಂದ ಕೆಲಸ ಮಾಡುತ್ತಿಲ್ಲವೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಇದು ನನ್ನ ಕೈಯಲ್ಲಿ ಇಲ್ಲ. ಅಲ್ಲಿ ಕೂಡ ಚುನಾಯಿತ ಪ್ರತಿನಿಧಿಗಳು ಇರುತ್ತಾರೆ. ತಿಳುವಳಿಕೆ ಮತ್ತು ಅರಿವಿನ ಹಿನ್ನಲೆಯಲ್ಲಿ ಅವರು ಕೆಲಸ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಸದಸ್ಯರಾದ ಮುದ್ದುಗಿರಿಯಪ್ಪನವರು ಕಾನೂನು ತಿಳುವಳಿಕೆ ಸಾಮಾನ್ಯ ಜನರಿಗೆ ಸಿಗುತ್ತಿಲ್ಲವೆಂದು ಹೇಳಿದರು. "ಇಗ್ನೋರೆನ್ಸ್ ಆಫ್ ಲಾ ಹ್ಯಾಸ್ ನೋ ಎಕ್ಸ್‌ಕ್ಯೂಸ್ ಎಂದು ಹೇಳಿದ್ದಾರೆ. ಮಾನ್ಯ ಸದಸ್ಯರು ತೀರ್ಮಾನದ ಹಂತದಲ್ಲಿ ಜನರಿಗೆ ತೊಂದರೆಯಾಗುತ್ತದೆ ಅವರ ವಾದವನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ನಮ್ಮ ಸರ್ಕಾರದವರು "ಉಚಿತ ಕಾನೂನಿನ ನೆರವು" ಆಶ್ರಯದಲ್ಲಿ ಎರಡು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಉಚಿತ ಕಾನೂನಿನ ನೆರವಿನಿಂದ ಸಂಸೂತ್ರವಾಗಿ ಅಂತರ್‌ಗತವಾಗಿ ಕಾನೂನಿನ ಪ್ರಜ್ಞೆಯನ್ನು ತರತಕ್ಕಂಥಾದ್ದು. ಎರಡನೆಯದಾಗಿ ಕಾನೂನು ನೆರವು ಕೊಡುವ ದಿಸೆಯಲ್ಲಿ ಸಾಕಷ್ಟು ಕೆಲಸ ನಡೆಯುತ್ತಿದೆ. ಮಾನ್ಯ ಸದಸ್ಯರಾದ ವೆಂಕಟರಾಮಯ್ಯನವರು ಇದರಿಂದ ಏನೂ ಪ್ರಯೋಜನ ಇಲ್ಲ. ಮತ್ತು ಇದು ಪರಿಣಾಮಕಾರಿಯಾಗಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಕಳೆದ ಒಂದೂವರೆ ವರ್ಷದಿಂದ ಬಹಳ ಜಾಗರೂಕತೆಯಿಂದ ಶ್ರಮ ವಹಿಸಿ ಇದನ್ನು ಜಾರಿಗೆ ತರುತ್ತಿದ್ದೇವೆ. ಅದರ ಅಂಕಿ ಸಂಖ್ಯೆಗಳನ್ನು ಕೂಡ ಕೊಡುತ್ತೇನೆ. ಈ ಕಾನೂನು ೧೯೭೧ರಲ್ಲಿ ಜಾರಿಗೆ ಬಂದಿದೆ. ೧೯೭೧ ರಿಂದ ೧೯೮೫ರ ವರೆಗೆ ಉಚಿತ ಕಾನೂನು ನೆರವು ಕೋರಿ ಬಂದಿರತಕ್ಕ ಅರ್ಜಿಗಳು ೮೯೦೨. ಕಳೆದ ಒಂದೂವರೆ ವರ್ಷದಲ್ಲಿ ೨೮೭೯ ಅರ್ಜಿಗಳು ಬಂದಿದೆ; ಕೋರ್ಟಿನಲ್ಲಿ ೫೭೪ ಅರ್ಜಿಗಳು ತೀರ್ಮಾನವಾಗಿದ್ದು. ಅವುಗಳ ಪೈಕಿ ಅರ್ಜಿದಾರರ ೪೫೭೭ ಕೇಸುಗಳು ತೀರ್ಮಾನವಾಗಿವೆ. ಉಚಿತ ಕಾನೂನು ನೆರವಿನ ಬಗ್ಗೆ ತಿಳುವಳಿಕೆ ಕೊಡುವುದಕೋಸ್ಕರ ಜನತೆಯಲ್ಲಿ ಕಾನೂನಿನ ಪ್ರಜ್ಞೆ ಮೂಡಿಸುವುದಕೋಸ್ಕರ ೪೦ ಕ್ಯಾಂಪುಗಳನ್ನು ಮಾಡಿದ್ದೇವೆ. ಇದರಿಂದ ೧,೮೮೦ ಫಲಾನುಭವಿಗಳಿಗೆ ಅನುಕೂಲವಾಗಿದೆ. ಫ್ರೀ-ಅಡ್ವೈಸ್ ಸೆಂಟರ್ ಕೂಡ ಮಾಡಿದ್ದೇವೆ. ಇದರ ಮುಖಾಂತರ ೩೮೭ ಜನಕ್ಕೆ ಅನುಕೂಲ ಕೊಡಲಾಗಿದೆ. ಮತ್ತೆ ಫ್ರೀ ಲೀಗಲ್ ಸರ್ವೀಸ್ ಮೂಲಕ ೭೨೦ ಜನಕ್ಕೆ ನೆರವು ಕೊಡಲಾಗಿದೆ. ಕಳೆದ ಒಂದೂವರೆ ವರ್ಷದಲ್ಲಿ ೩೮೭ ಜನಕ್ಕೆ ನೆರವು ಕೊಟ್ಟಿದ್ದೇವೆ. ಇದನ್ನು ವ್ಯಾಪಕವಾಗಿ ಮಾಡುವುದಕ್ಕಾಗಿ ಪಾಂಪ್ಲೆಟ್ಸ್ ಮಾಡಿಸಿದ್ದೇವೆ. ಜನರು ಹೆಚ್ಚು ಸೇರತಕ್ಕ ಪ್ರದೇಶದಲ್ಲಿ ನಾಮಫಲಕಗಳನ್ನು ಹಾಕಿಸಿದ್ದೇವೆ. ಪ್ರಚಾರ ಫಲಕಗಳನ್ನು ಹಾಕಿಸಿದ್ದೇವೆ. ಪೋಲೀಸಿನವರ ಸಹಾಯದಿಂದ ಕರಪತ್ರಗಳನ್ನು ಹಂಚಿಸಿದ್ದೇವೆ. ೧೫ ನಿಮಿಷದ ಒಂದು ಫಿಲಂ ತಯಾರು ಮಾಡಿ ರಾಜ್ಯದ ಎಲ್ಲಾ ಕಡೆ ತೋರಿಸತಕ್ಕ ಪ್ರಯತ್ನ ಮಾಡಿದ್ದೇವೆ. ಈ ರೀತಿ ಫಿಲಂ ತಯಾರು ಮಾಡಿ ತೋರಿಸಿತಕ್ಕದ್ದು ನಮ್ಮ ಕರ್ನಾಟಕ ರಾಜ್ಯ ಒಂದೇ. ನಾನು ೧೯ ಜಿಲ್ಲೆಗಳಿಗೆ ಭೇಟಿ ಕೊಟ್ಟು. ವಕೀಲರನ್ನು ಕಂಡು ಉಚಿತ ಕಾನೂನು ನೆರವಿನ ಬಗ್ಗೆ ಹೆಚ್ಚು ಮುತುವರ್ಜಿ ವಹಿಸಬೇಕೆಂದು ಕೇಳಿದ್ದೇನೆ. ಅಲ್ಲದೆ, ನಾಟಕಗಳನ್ನು ಆಡಿಸುವುದು, ಲಾವಣಿಗಳನ್ನು ಹೇಳಿಸುವಂತ ಪ್ರಯತ್ನ ಕೂಡ ಮಾಡಲಾಗಿದೆ. ಇದರ ಜೊತೆಗೆ ಇತರೆ ಕಛೇರಿಗಳು ಕೂಡ ಇದರಲ್ಲಿ ಭಾಗಿಯಾಗತಕ್ಕ ರೀತಿಯಲ್ಲಿ ಕಾರ್ಯಕ್ರಮಗಳನ್ನು ಅಳವಡಿಸಬೇಕೆಂಬ ಉದ್ದೇಶ ಇದೆ. ಕಳೆದ ಒಂದೂವರೆ ವರ್ಷಗಳ ಅವಧಿಯಲ್ಲಿ ಪ್ರಗತಿ ಕಡಿಮೆಯಾಗಿಲ್ಲ. ಜಾಸ್ತಿಯಾಗಿದೆ ಎನ್ನುವ ಮಾತನ್ನು ವಿನಯದಿಂದ ಹೇಳುವುದಕ್ಕೆ

ಇಷ್ಟಪಡುತ್ತೇನೆ. ಮಾನ್ಯ ಸದಸ್ಯರಾದ ಮೂಡ್ಲಗಿರಿಯಪ್ಪನವರು ವರಮಾನದ ಮಿತಿ ಬಗ್ಗೆ ಪ್ರಸ್ತಾಪ ಮಾಡಿದರು. ಉಚಿತ ಕಾನೂನು ನೆರವು ಪಡೆಯುವುದಕ್ಕೆ ನಮ್ಮ ರಾಜ್ಯದಲ್ಲಿ ೮,೦೦೦ ರೂಪಾಯಿ ಮಿತಿ ಇದೆ. ಬೇರೆ ರಾಜ್ಯಗಳಲ್ಲಿ ೪,೦೦೦–೫,೦೦೦–೬,೦೦೦ ಇದೆ. ನನ್ನ ತಿಳುವಳಿಕೆ ಪ್ರಕಾರ ೧೦೦ಕ್ಕೆ ೭೫ ರಷ್ಟು ಜನಕ್ಕೆ ಇದರ ಅನುಕೂಲವಿದೆ. ಕೋರ್ಟಿಗೆ ಹೋಗತಕ್ಕ ಫೀ ಕಟ್ಟಬೇಕಿಲ್ಲ. ವಕೀಲರ ಫೀ ಕೊಡಬೇಕಿಲ್ಲ ಪ್ರೊಸೆಸ್ ಫೀ ಕೊಡಬೇಕಿಲ್ಲ. ಕೋರ್ಟಿಗೆ ತಗಲತಕ್ಕಂಥ ಯಾವ ವೆಚ್ಚವನ್ನು ಕೊಡಬೇಕಾಗಿಲ್ಲ, ಸ್ಟ್ಯಾಂಪ್ ಪೇಪರಿನಲ್ಲಿ ಕೊಡುವುದನ್ನು ಕೂಡ ತೆಗೆದುಹಾಕಿದ್ದೇವೆ. ಸಾದಾ ಪೇಪರಿನಲ್ಲಿ ಕೊಡುವುದನ್ನು ಕೂಡ ತೆಗೆದುಹಾಕಿದ್ದೇವೆ. ಸಾದಾ ಪೇಪರಿನಲ್ಲಿ ಬಾರ್ ಅಸೋಸಿಯೇಷನ್ ಅಧ್ಯಕ್ಷರಿಗೆ, ಕಾರ್ಯದರ್ಶಿಯವರಿಗೆ ಅಫಿಡವಿಟ್ ಹಾಕಿದರೆ ಸಾಕು. ಇನ್ನು ಅತ್ಯಂತ ಸರಳವಾದಂಥ ರೀತಿಯಲ್ಲಿ ಮಾಡುವಂಥ ಸಲಹೆ ಸೂಚನೆಗಳು ಬಂದರೆ ಅವುಗಳನ್ನೆಲ್ಲಾ ಅಳವಡಿಸಿಕೊಂಡು ಉಚಿತ ಕಾನೂನು ನೆರವು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ರಾಜ್ಯದಲ್ಲಿ ಸಿವಿಲ್ ಕೋರ್ಟುಗಳಲ್ಲಿ, ಮುನ್ಸೀಫ್ ಮತ್ತು ಮ್ಯಾಜಿಸ್ಟ್ರೇಟ್ ಕೋರ್ಟುಗಳಲ್ಲಿ ಡಿಸ್ಟ್ರಿಕ್ ಕೋರ್ಟುಗಳಲ್ಲಿ ಹೈಕೋರ್ಟಿನಲ್ಲಿ ಉಚಿತ ಕಾನೂನು ಸಮಿತಿಗಳನ್ನು ಏರ್ಪಾಡು ಮಾಡಿದ್ದೇವೆ. ಆ ಸಮಿತಿಗಳಲ್ಲಿ ವಕೀಲರು ಇದ್ದಾರೆ. ಸಾರ್ವಜನಿಕ ಕ್ಷೇತ್ರದಿಂದ ಬಂದಿರತಕ್ಕ ಅನುಸೂಚಿತ ಜಾತಿಯವರು ಹಿಂದುಳಿದವರ್ಗದವರೂ ಮಹಿಳೆಯರೂ ಹಾಗೂ ಅಧಿಕಾರಿಗಳು ಇದ್ದಾರೆ. ಇದರಿಂದ ಪರಿಣಾಮಕಾರಿಯಾಗಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಕ್ರಿಮಿನಲ್‌ಗೆ ಸಂಬಂಧಪಟ್ಟಂತೆ ಸೆಕ್ಷನ್ ೩೦೪ ಸಿಆರ್‌ಪಿಸಿ. ಪ್ರಕಾರ ಅನ್ ಡಿಫೆಂಡ್ ಅಕ್ಯೂಸ್ಡ್ ಏನಿದ್ದಾನೆ ಅವನಬಗ್ಗೆ ಮ್ಯಾಜಿಸ್ಟ್ರೇಟರ ಆದೇಶದ ಮೇರೆಗೆ ಕೋರ್ಟಿನಲ್ಲಿರತಕ್ಕ ವಕೀಲನಿಂದ ಡಿಫೆಂಡ್ ಮಾಡಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ.

ಇನ್ನು ಕ್ವಾಸಿ ಜ್ಯುಡಿಷಿಯಲ್‌ಗೆ ಸಂಬಂಧಪಟ್ಟಂತೆ ತಹಶೀಲ್ದಾರ್, ಎ.ಸಿ ಡಿ.ಸಿ.ಯವರ ಮುಂದೆ ವ್ಯಾಜ್ಯಗಳು ಇದ್ದರೂ ಕೂಡ ಅಂಥವರಿಗೂ ಉಚಿತ ಕಾನೂನು ನೆರವು ಸಿಗುವಂಥ ವ್ಯವಸ್ಥೆ ಮಾಡಿದ್ದೇವೆ. ಸಮಾಜದ ಜನರು ಇದನ್ನು ಉಪಯೋಗಿಸಿಕೊಳ್ಳಬೇಕು. ಇನ್ನೂ ಹೆಚ್ಚಿನ ಜನಕ್ಕೆ ಸಿಗತಕ್ಕಂಥ ಪರಿಪೂರ್ಣವಾದ ಸಹಾಯವನ್ನು ಸನ್ಮಾನ್ಯ ಸದಸ್ಯರುಗಳು ಮಾಡಬೇಕೆಂದು ವಿನಯದಿಂದ ಮನವಿ ಮಾಡಿಕೊಳ್ಳುತ್ತೇನೆ. ಸಮನ್ಸ್ ರಿಜಿಸ್ಟರ್ ಪೋಸ್ಟ್‌ನಲ್ಲಿ ಒಂದೇ ಸಾರಿ ಹೋಗಬೇಕೆಂದು ಮಾನ್ಯ ಸದಸ್ಯರಾದ ಮೂಡ್ಲಗಿರಿಯಪ್ಪನವರು ಹೇಳಿದ್ದಾರೆ. ಸಿವಿಲ್ ಪ್ರೊಸೀಜರ್ ಇದನ್ನು ಕೊಡತಕ್ಕ ವ್ಯವಸ್ಥೆ ಮಾಡಿದ್ದೇವೆ. ಮೋಟಾರ್ ವೆಹಿಕಲ್ಸ್ ಕ್ಲೈಮ್ಸ್‌ನ ಟ್ರಿಬ್ಯೂನಲ್ ವಿಚಾರದಲ್ಲಿ ಡಿಸ್ಟ್ರಿಕ್ಟ್ ಜಡ್ಜ್‌ಗೆ ಮಾತ್ರ ಅಧಿಕಾರ ಕೊಟ್ಟಿದ್ದೀರಿ, ಬೇರೆ ಜಡ್ಜ್‌ಗಳಿಗೂ ಆ ಅಧಿಕಾರವನ್ನು ಕೊಟ್ಟರೆ ಕೇಸುಗಳನ್ನು ಬೇಗ ತೀರ್ಮಾನ ಮಾಡುವುದಕ್ಕೆ ಅನುಕೂಲವಾಗುತ್ತದೆಂದು ಹೇಳಿದ್ದಾರೆ. ಈ ವಿಚಾರದಲ್ಲಿ ಹೈಕೋರ್ಟಿನವರ ಅನುಮತಿ ಪಡೆದು ಇದರ ಬಗ್ಗೆ ಉಪಾಯ ಹುಡುಕುವುದಕ್ಕೆ ಪ್ರಯತ್ನ ಮಾಡುತ್ತೇನೆಂಬ ಮಾತನ್ನು ಹೇಳುತ್ತೇನೆ.

ಕೋರ್ಟ್ ಫೀ ಮಿನಿಮಮ್, ಮ್ಯಾಕ್ಸಿಮಮ್ ಎಂದು ಇದೆ. ನಾನು ಇದರಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೋರ್ಟ್ ಫೀ ಯನ್ನು ಬಡವರಿಗೆ ವಾರ್ಷಿಕ ವರಮಾನ ಎಂಟು ಸಾವಿರ ರೂಪಾಯಿಗಿಂತಲೂ ಜಾಸ್ತಿ ಇಲ್ಲದೇ ಹೋದರೆ ಅವರೆಲ್ಲರಿಗೂ ಕೂಡ ಉಚಿತ ಕಾನೂನು ನೆರವು ನೀಡುವ ವ್ಯವಸ್ಥೆ ಇದೆ. ಕೋರ್ಟ್ ಫೀ ಇಲ್ಲದೇ ಇರತಕ್ಕಂಥ ಅವಕಾಶ ಇದೆ. ಇದನ್ನು ಉಪಯೋಗಿಸಿಕೊಳ್ಳಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ರೆವಿನ್ಯೂ ಕೋರ್ಟ್ಸ್ ಮತ್ತು ಫ್ಯಾಮಿಲಿ ಕೋರ್ಟ್ಸ್ ಇವರು ಕೆಲಸ ಮಾಡುವುದಕ್ಕಾಗುವುದಿಲ್ಲ, ಇದಕ್ಕೆ ಬೇರೆ ವ್ಯವಸ್ಥೆ ಮಾಡಿ ಎಂದು ಹೇಳಿದ್ದಾರೆ. ಇದರ ಬಗ್ಗೆ ನಾನು ಚಿಂತನೆ ಮಾಡುತ್ತೇನೆ. ಫ್ಯಾಮಿಲಿ ಕೋರ್ಟ್ಸ್ ಆಡ್‌ಜ್ಯುಡಿಕೇಷನ್ ಬಗ್ಗೆ ಈಗಾಗಲೇ ಹೈಕೋರ್ಟಿಗೆ ಪತ್ರ ಬರೆದಿದ್ದೇನೆ, ಅವರ ಉತ್ತರವನ್ನು ನಾನು ನಿರೀಕ್ಷಣೆ ಮಾಡುತ್ತಿದ್ದೇನೆ. ಆ ಮೇಲೆ ಹೈಕೋರ್ಟ್‌ನವರಿಗೆ ಪತ್ರ ಬರೆದು ಅವರ ಅಭಿಪ್ರಾಯವನ್ನು ತೆಗೆದುಕೊಂಡು ಮುಂದುವರಿಯುತ್ತೇನೆ. ರಿಟೈರ್ಡ್ ಜಡ್ಜಸ್ ಅವರನ್ನು ಕೆಲಸಕ್ಕೆ ಸೇರಿಸಿಕೊಂಡು ಇರತಕ್ಕಂಥ ಅರಿಯರ್ಸ್ ಇವೆಲ್ಲಾ ಬಾಕಿ ಕೇಸುಗಳನ್ನು ಮಾಡಬೇಕು ಎಂದು ಕೇಳಿದ್ದೀರಿ ಹೈಕೋರ್ಟಿನವರು ಇದಕ್ಕೆ ಒಪ್ಪಿಕೊಂಡಿಲ್ಲ. ಇನ್ನು ಒಂದು ಮಾತನ್ನು ಈ ಸಮಯದಲ್ಲಿ ಹೇಳುತ್ತೇನೆ. ಮಹಿಳೆಯರಿಗೆ ಪ್ರಾಧಾನ್ಯತೆ ಕೊಡಬೇಕು ಎನ್ನುವ ದೃಷ್ಟಿಯಿಂದ ಆರು ಜನ ಲೇಡಿ ಮುನ್ಸೀಫ್ ಮ್ಯಾಜಿಸ್ಟ್ರೇಟ್‌ರನ್ನು ನೇಮಕ ಮಾಡಲಾಗಿದೆ.

ಮಾನ್ಯ ಕೃಷ್ಣನ್‌ರವರು ರಿಪೋರ್ಟರ್ಸ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಇದಕ್ಕೆ ಸ್ಪೆಷಲ್ ಬೋರ್ಡ್ ಎಂದು ಇದೆ. ತಮಗೆ ಅಧಿಕಾರ ಕೊಟ್ಟಿದ್ದೇವೆ, ನಿಮ್ಮ ತೀರ್ಮಾನ ಹೇಗೆ ಆಗುತ್ತದೋ ಅದರಂತೆ ನಾವು ನಡೆದುಕೊಳ್ಳುವುದಕ್ಕೆ ಸಿದ್ಧರಾಗಿದ್ದೇವೆ.

ಆರ್ಡಿನೆನ್ಸನ್ನು ೨೧ ಮಾಡಿದ್ದಾರೆ ಯೋಚನೆ ಮಾಡಿ ಮಾಡಿಲ್ಲ. ಅರ್ಜೆನ್ಸಿ ಇಲ್ಲದೆ ಮಾಡ ತಕ್ಕಂಥದ್ದು ಸರಿಯಲ್ಲ. ಇನ್ನು ಮೇಲೆ ಇಂಥ ಪ್ರವೃತ್ತಿಯನ್ನು ಕಡಿಮೆ ಮಾಡಬೇಕೆಂದು ಹೇಳಿದ್ದಾರೆ. ಮಾನ್ಯ ಸದಸ್ಯರ ಸೂಚನೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ, ಅತ್ಯಂತ ಅವಶ್ಯಕತೆ ಇರುವ ಸಮಯದಲ್ಲಿ ಮಾತ್ರ ಕಾನೂನನು ಮಾಡಲೇಬೇಕಾಗುತ್ತದೆ.

ಲೋಕಲ್ ಏಡ್ಸ್ ಸ್ಕೀಮ್ ಬಗ್ಗೆ ಹೇಳಿದ್ದಾರೆ. ನಗರ ಅಭಿವೃದ್ಧಿ ವಿಚಾರ ಅಷ್ಟು ಸುಲಭ ವಾದುದಲ್ಲ. ಈ ದೇಶದ ಸಮಾಜವನ್ನು ಒಂದು ವ್ಯವಸ್ಥೆಯ ಸಮಾಜವಾದದ ಕಕ್ಷೆಯಲ್ಲಿ ತೆಗೆದು ಕೊಂಡು ಹೋದರೆ ಆಗ ಈ ನಗರದ ಕೆಲಸ ಸುಗಮವಾಗಿ ನಡೆಯುವುದಕ್ಕೆ ಸಾಧ್ಯವಾಗುತ್ತದೆ. ಪ್ರಜಾ ಪ್ರಭುತ್ವದ ಕಕ್ಷೆಯಲ್ಲಿ ಇದು ಕಷ್ಟ ಎನ್ನುವ ಮಾತನ್ನು ಹೇಳಿದ್ದಾರೆ. ಅವರ ಈ ವಾದ ಸಮಂಜಸ ವಾಗಿ ಕಾಣುತ್ತದೆ. ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ಕೆಲಸ ಮಾಡಬೇಕು ಎನ್ನುವ ತೀರ್ಮಾನ ಮಾಡಿದ್ದೇವೆ. ಆದ್ದರಿಂದ ಅನೇಕ ಎಡರುತೊಡರುಗಳನ್ನು ನಾವು ಎದುರಿಸಬೇಕಾಗುತ್ತದೆ. ಅವುಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಅವರು ಹೇಳಿದ ಮಾರ್ಗದಲ್ಲಿ ಆದಷ್ಟು ಬೇಗ ಈ ನಗರಾಭಿವೃದ್ಧಿ ಕೆಲಸದ ಮುನ್ನಡೆಯನ್ನು ಸಾಧಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂಬ ಮಾತನ್ನು ಅವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮಲ್ಲಿ ಆಸ್ತಿಗಳ ಪ್ರಭಾವ ಆಗಿದೆ. ಯೋಜಿತವಾದಂತಹ ರೀತಿಯಲ್ಲಿ ಬೆಳವಣಿಗೆಯಾಗಬೇಕು. ಅದನ್ನು ಒಪ್ಪಿಕೊಂಡಿದ್ದೇನೆ. ಬಿ.ಡಿ.ಎ. ನವರು ಈಗಾಗಲೇ ಮ್ಯಾಕ್ರೋ ಪ್ಲಾನ್ಸ್ ತಯಾರು ಮಾಡಿದ್ದಾರೆ. ಮತ್ತು ವರ್ತುಲ ರೈಲ್ವೆ ಬಗ್ಗೆ ಪ್ರಸ್ತಾವ ಆಗಿದೆ. ಮತ್ತು ರಿಂಗ್ ರಸ್ತೆ, ಇನ್ನರ್ ರಿಂಗ್ ರಿಂಗ್ ರೋಡ್, ಔಟರ್ ರಿಂಗ್ ರೋಡು, ಇದು ಸ್ವಲ್ಪ ಸ್ವಲ್ಪವಾಗಿ ನಡೆದಿದೆ. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಯೋಜನಾ ಬದ್ಧವಾದ ರೀತಿಯಲ್ಲಿ ಬೆಳವಣಿಗೆಯನ್ನು ಮುಂದುವರಿಸಿಕೊಂಡು ಹೋಗುವ ತತ್ವವನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ.

ಶಿವನಹಳ್ಳಿ, ವೆಸ್ಟ್ ಆಫ್ ಕಾರ್ಡ್ ರೋಡು ಮತ್ತು ಶಂಕರನಗರ ಆಸ್ತಿಯನ್ನು ಕಬಳಿಸುವ ಜನ ಬಂದಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಇದನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ವಾದಂತಹ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಪತ್ರ ಬರೆದಿದ್ದರೆ ಮೊದಲೇ ಅದಕ್ಕೆ ಏನು ಮಾಡಬೇಕೋ ಅದನ್ನು ಮಾಡುತ್ತಿದ್ದೆ ಎನ್ನುವ ಮಾತನ್ನು ಹೇಳುತ್ತೇನೆ,

ಲೋಕಲ್ ಫೈನಾನ್ಸ್ ಬಗ್ಗೆ ಉತ್ತರ ಕೊಟ್ಟಿದ್ದೇನೆ. ಬಿ.ಡಿ.ಎ. ನಲ್ಲಿ ಕರಪ್ಷನ್ ಇದೆ ಎಂದು ಹೇಳಿದ್ದಾರೆ ಮತ್ತು ದಕ್ಷ ಅಧಿಕಾರಿಯನ್ನು ವರ್ಗಾವಣೆ ಮಾಡಿದ್ದಾರೆ ಎಂದು ಹೇಳಿದ್ದಾರೆ. ಒಬ್ಬ ಅಧಿಕಾರಿ ಒಂದೇ ಕಡೆಯಲ್ಲಿ ಇರುವುದಕ್ಕಾಗುವುದಿಲ್ಲ. ಅದು ಸಾಧ್ಯವಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಕರಪ್ಷನ್ ಇದು ನಿನ್ನೆ ಮೊನ್ನೆಯದಲ್ಲ. ಇದು ಹಳೆಯ ಕಾಯಿದೆ. ನಾನು ಚರಿತ್ರೆಯನು ಓದಿ ತಿಳಿದುಕೊಂಡಿರತಕ್ಕಂಥ ಪ್ರಕಾರ...... Our Society has been always corrupt. This is my understanding of the situation, Corruption is not age-old. It is century-old. I do not know when will it come to an end, All of us should make attempts in that direction ಇದು ಒಂದು ಜಾಡ್ಯ. ಈ ಪಿಡುಗನ್ನು ತಪ್ಪಿಸುವುದಕ್ಕೆ ಎಲ್ಲಾ ಪ್ರಯತ್ನ ನಾನು ಮಾಡುತ್ತೇನೆ ಎನ್ನುವ ಮಾತನ್ನು ಅವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಈಗಿರತಕ್ಕಂಥ ಸೈಟುಗಳ ಡಿಸ್ಟ್ರಿಬ್ಯೂಷನ್ ಪಾಲಿಸಿಯನ್ನೇ ಮುಂದುವರಿಸಿಕೊಂಡು ಹೋಗಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ಅದರಲ್ಲಿ ಯಾವ ಬದಲಾವಣೆಯನ್ನು ಮಾಡುವುದಿಲ್ಲ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಆಲ್ಟರ್‌ನೇಟಿವ್ ಸೈಟನ್ನು ಹೊಂದಿರುವವರ ಬವಣೆ ಜಾಸ್ತಿಯಾಗಿದೆ. ಅವರು ಹನ್ನೆರಡು ಸಾವಿರ ಹದಿನೈದು ಸಾವಿರ ರೂಪಾಯಿ ಇದೆ ಎಂದು ಕೊಟ್ಟಿದ್ದಾರೆ. ಇದು ಹತ್ತಾರು ವರ್ಷಗಳಿಂದ ಬಂದಿರತಕ್ಕಂಥ ಪಾಪದ

ಅವಶೇಷ. ಇದನ್ನು ಒಂದೇ ದಿನ ಮುಗಿಸುವುದಕ್ಕೆ ಆಗುವುದಿಲ್ಲ. ಇದಕ್ಕೆ ಒಂದೇ ದಿನ ಗಂಗಾನದಿಗೆ ತೆಗೆದುಕೊಂಡ ಹೋಗಿ ಸ್ನಾನ ಮಾಡಿದರೆ ಪರಿಹಾರವಾದಂಥ ಪರಿಸ್ಥಿತಿಯಲ್ಲಿಲ್ಲ. ಹೊಸದಾಗಿ ಮಾಡಿದಂತಹ ಬಡಾವಣೆಗಳಲ್ಲಿ ಶೇಕಡಾ ಹತ್ತರಷ್ಟು ಪರ್ಯಾಯವಾಗಿ ಸೈಟುಗಳನ್ನು ಕೊಡತಕ್ಕಂಥ ವ್ಯವಸ್ಥೆ ಮಾಡಿದ್ದಾರೆ. ಹೊಸದಾಗಿ ಬಡಾವಣೆ ಮಾಡುವಾಗ ಈ ವಿಷಯವನ್ನು ಗಮನದಲ್ಲಿಟ್ಟುಕೊಳ್ಳಲಾಗುವುದು. ಇವರ ಬವಣೆ ಏನು ಎಂದು ನನಗೆ ಅರ್ಥವಾಗುತ್ತದೆ. ಪರ್ಯಾಯವಾಗಿ ಸೈಟುಗಳನ್ನು ಕೊಡತಕ್ಕಂಥದ್ದು ಅಷ್ಟು ಸುಲಭವಾದ ಕೆಲಸ ಅಲ್ಲ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನನ್ನ ವಾದವನ್ನು ಅವರು ಸಹ ಒಪ್ಪಿಕೊಳ್ಳುತ್ತಾರೆ. ಬೇರೆಯವರಿಗೆ ಕೊಡುವುದನ್ನೆ ನಿಲ್ಲಿಸಿ ಇವರಿಗೆ ಶೇಕಡಾ ೫೦ ಪರ್‌ಸೆಂಟಿನಷ್ಟು ಕೊಡಿ ಎಂದು ಹೇಳುತ್ತಿದ್ದಾರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅವರ ಆರ್ಥಿಕ ಪರಿಸ್ಥಿತಿಯನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ ಕೊಡತಕ್ಕಂಥದ್ದು ಮತ್ತು ಮಾಡತಕ್ಕಂಥದ್ದು ಇದೆ. ಹೊಸ ಬಡಾವಣೆಗಳಿಗಾಗಿ ಶೇಕಡ ೫೦ ರಷ್ಟು ನಿವೇಶನಗಳನ್ನು ಇವರಿಗೆ ಕೊಟ್ಟಿದ್ದೇ ಆದರೆ ಅವರ ವರಮಾನ ಚಿಂತನೆ ಕೂಡ ಮಾಡಬೇಕಾಗಿದೆ. ಆದಷ್ಟು ಬೇಗ ಅವರ ಬವಣೆಯನ್ನು ನೀಗಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಇನ್ನು ಟ್ಯಾಂಕ್ ಬೆಡ್ ಬಗ್ಗೆ ಪರಭಾರೆ ಆಗಬಾರದು ಎಂದು ಹೇಳಿದ್ದಾರೆ. ಕಾರ್ಪೊರೇಷನ್ ಆ್ಯಕ್ಟ್ ಪ್ರಕಾರ ಈ ಟ್ಯಾಂಕ್ ಬೆಡ್ ಕಾರ್ಪೊರೇಷನ್ ಪ್ರಾಪರ್ಟಿಯಲ್ಲಿ ಸೇರಿವೆ. ಈಗಾಗಲೇ ಇದರ ಬಗ್ಗೆ ಡಿಕ್ಲೇರ್ ಆಗಿವೆ. ಅದನ್ನು ರಕ್ಷಣೆ ಮಾಡಿಕೊಳ್ಳುವ ಪ್ರಯತ್ನವನ್ನು ಕಾರ್ಪೊರೇಷನ್ ಮಾಡಬೇಕು. ಇದರ ಬಗ್ಗೆ ಸೂಕ್ತವಾದ ವಿಚಾರವನ್ನು ನಾನು ತಿಳಿಸುತ್ತೇನೆ.

ಇನ್ನು ಬಿ. ಡಬ್ಲ್ಯು. ಎಸ್. ಅಂಡ್ ಎಸ್. ಬಿ. ಬಗ್ಗೆ ಮಾತನಾಡಿದ್ದಾರೆ. ಡೈನಾಮಿಸಂ ಇಲ್ಲ ಎಂದು ಹೇಳಿದ್ದಾರೆ. ಮಂತ್ರಿಗಳಿಗೂ ಡೈನಾಮಿಸಂ ಇದ್ದ ಹಾಗೆ ಕಾಣುತ್ತಿಲ್ಲ ಎಂದು ಹೇಳಿದ್ದಾರೆ. ಅಧ್ಯಕ್ಷರೇ, ಈ ಡೈನಾಮಿಸಂ ಅರ್ಥ ಏನು ಎಂದು ಗೊತ್ತಿಲ್ಲ. ತಳತಳ ನಡುಗುತ್ತಾ ಇದ್ದರೆ ಡೈನಾಮಿಸಂ ಇದೆ ಎಂದು ಇವರು ಅರ್ಥ ಮಾಡಿಕೊಂಡ ಹಾಗೆ ಕಾಣುತ್ತದೆ. ಪರಿಣಾಮಕಾರಿಯಾಗಿ ಗೊತ್ತಾದ ಕಾರ್ಯಕ್ರಮಗಳನ್ನು ಸಮಯಕ್ಕೆ ಸರಿಯಾಗಿ ಮಾಡತಕ್ಕಂಥದ್ದು ಡೈನಾಮಿಸಂ ಎಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಕೃಷ್ಣನ್‌ರವರಿಗೆ ಈ ಜಲಮಂಡಲಿ ವಿಚಾರ ಚೆನ್ನಾಗಿ ಗೊತ್ತಿದೆ. ಆದರೆ ಈ ಜಲಮಂಡಲಿ ಪರಿಚಯ ಅವರಿಗಿಂತಲೂ ಪೂರ್ವ ಕಾಲದ್ದು ಎಂದು ಹೇಳಿದರೆ ಅವರು ನನ್ನನ್ನು ಅಪಾರ್ಥ ಮಾಡಿಕೊಳ್ಳಬಾರದು. ಅದು ಪ್ರಾರಂಭವಾದಾಗಿನಿಂದಲೂ ಅದರ ಬಗ್ಗೆ ಚಿಂತನೆ ಮಾಡಿ ನಾನು ನೋಡುತ್ತಾ ಬಂದಿದ್ದೇನೆ, ನಮ್ಮ ರಾಜ್ಯದ ಜಲಮಂಡಲಿಯನ್ನು ಎಲ್ಲಾ ಕಡೆಗಳಿಗೂ ಹೋಲಿಸಿದರೆ ಅತ್ಯಂತ ಪರಿಣಾಮಕಾರಿಯಾದ ಮತ್ತು ನಿಯೋಜಿತ ರೀತಿಯಲ್ಲಿ ಕೆಲಸವನ್ನು ಮಾಡಿದ್ದಾರೆ. ಕಠಿಣ ಸಮಯದಲ್ಲಿ ಜನರ ಸಮಸ್ಯೆಗಳನ್ನು ಗುರುತಿಸಿ ಅವರಿಗೆ ಎಷ್ಟು ಸಾಧ್ಯವಾಗುತ್ತದೋ ಅದರ ಕಕ್ಷಾರೇಖೆಯಲ್ಲಿ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಎನ್ನುವ ಮಾತನ್ನು ಮಾನ್ಯ ಕೃಷ್ಣನ್‌ರವರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಮನುಷ್ಯ ಮಾಡತಕ್ಕಂಥ ಎಲ್ಲಾ ಕೆಲಸದಲ್ಲೂ ತಪ್ಪುಗಳು ಇರುತ್ತವೆ. Man is fallible God is only infallible. ಆದ್ದರಿಂದ ಈ ಫ್ಯಾಲಿಬಿಲಿಟೀಸ್ ಇದ್ದೇ ಇರುತ್ತದೆ. ಇದನ್ನು ಕಡಿಮೆ ಮಾಡುವುದಕ್ಕೆ ಆಗುವುದಿಲ್ಲ. ಸಾಲ ತೆಗೆದುಕೊಂಡರೆ ಸಾಲ ಕೊಡುತ್ತಾರೆ ಪ್ರಿನ್ಸಿಪಲ್, ಇಂಟರೆಸ್ಟ್ ಎಲ್ಲಾ ಸೇರಿಸಿಕೊಡುತ್ತಾರೆ. ಜಲಮಂಡಲಿ ಒಂದೇ ನಮ್ಮ ದೇಶದಲ್ಲಿ ಈ ರೀತಿಯಾದ ಸುವ್ಯವಸ್ಥಿತವಾದ ಕೆಲಸ ಮಾಡತಕ್ಕಂಥದ್ದು ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಎಲ್ಲ ಅಧಿಕಾರಿಗಳು ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ಎಂಬ ಮಾತನ್ನು ಅವರು ಹೇಳಿದ್ದರೂ ಮೇಲಿನ ನೋಟಕ್ಕೆ ಡೈನಾಮಿಸಂ ಇಲ್ಲದೆ ಹೋದರೂ In reality, they are dynamic enough to face the problems and to solve the problems. ಇಷ್ಟು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಕಾವೇರಿ ನಾಲ್ಕನೇ ಸ್ಟೇಜಿನ ಬಗ್ಗೆ ಹೇಳಿದ್ದಾರೆ. ಇದರ ಬಗ್ಗೆ ಚಿಂತನೆ ಮಾಡಬೇಕು ಕಾವೇರಿ ನಾಲ್ಕನೇ ಸ್ಟೇಜಿನಿಂದ ನೀರು ತೆಗೆದುಕೊಳ್ಳಬೇಕಾದ ಸಮಯ ಬರುತ್ತದೆ. ಮುಂದೆ ನಾಲ್ಕನೇ ಪೈಪ್ ಹಾಕುವುದಕ್ಕೆ ಲ್ಯಾಂಡ್ ಅಕ್ವೈರ್ ಮಾಡಿಕೊಳ್ಳಬೇಕು ಅದಕ್ಕೆ ಸಿದ್ಧತೆಗಳು ನಡೆಯುತ್ತಿವೆ, ನಾಲ್ಕನೇ ಸ್ಟೇಜ್ ಹಾಕುವ ವಿಚಾರದಲ್ಲಿ ಹಣದ ತೊಂದರೆ ಇದೆ. ಈ ಹಣದ ತೊಂದರೆಯನ್ನು ನೀಗಿಸುವುದಕ್ಕೆ ಬಿ. ಡಿ. ಎ. ಅಧಿಕಾರಿಗಳನ್ನು ಮತ್ತು ಕಾರ್ಪೊರೇಷನ್ ಅಧಿಕಾರಿಗಳನ್ನು ಕರೆಸಿ ಅವರೊಡನೆ ಸಮಾಲೋಚನೆ ಮಾಡಿ ಮಾಡಿದರೂ ಇನ್ನೂ ಕೆಲಸ ಪ್ರಾರಂಭವಾಗಿಲ್ಲ. ಸೌತ್ ಎಂಡ್

ವರ್ತುಲದಿಂದ ಕೇತಮಾರನಹಳ್ಳಿಗೆ ಒಂದು ಪೈಪ್ ಹಾಕಿದರೆ ಕಾವೇರಿ ನೀರು ಗ್ರಾವಿಟೇಷನ್ ಫೋರ್ಸ್ ಮುಖಾಂತರ ರಾಜಾಜಿನಗರ ಮತ್ತು ಇತರ ಎಲ್ಲಾ ಪ್ರದೇಶಗಳಿಗೂ ಸರಬರಾಜಾಗುತ್ತದೆ. ಮತ್ತು ಬೆಂಗಳೂರು ನಗರದ ಎಲ್ಲಾ ಪ್ರದೇಶಗಳು ಸಮಗ್ರವಾಗಿ ಕಾವೇರಿ ನೀರಿನ ಸರಬರಾಜಿಗೆ ಒಳಪಡುತ್ತದೆ. ಈ ಒಂದು ಮುಖ್ಯವಾದ ಕೆಲಸ, ಇದನ್ನು ಮಾಡುವುದಕ್ಕೆ ಎಲ್ಲಾ ಪ್ರಯತ್ನವನ್ನು ನಾನು ಮಾಡುತ್ತೇನೆಂದು ಹೇಳುತ್ತೇನೆ. ಮತ್ತು ಇದರ ಕಾರ್ಯ ಪ್ರಾರಂಭ ಮಾಡುವುದಕ್ಕೆ ಅಧಿಕಾರಿಗಳಿಗೆ ಆದೇಶ ಕೊಡುತ್ತೇನೆ ಎನ್ನುವ ಮಾತನ್ನು ಹೇಳುತ್ತೇನೆ.

ಇನ್ನು ಬೋರ್‌ವೆಲ್‌ಗಳನ್ನು ಜಾಸ್ತಿಮಾಡಬೇಕೆಂದು ಹೇಳಿದ್ದಾರೆ. ಆದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಮಾನ್ಯ ಸದಸ್ಯರಾದ ಕೃಷ್ಣನ್‌ರವರು ೧೦೫ ಕೊಳವೆ ಬಾವಿಗಳನು ಕೇಳಿದ್ದರು, ಅದರಲ್ಲಿ ೮೫ ಕೊಳವೆಬಾವಿಗಳನ್ನು ಕೊಟ್ಟಿದ್ದೇವೆ. ಮಾನ್ಯ ಸದಸ್ಯರ ವಂತಕ್ಷೇತ್ರವಾದ ರಾಜಾಜಿನಗರ ಹೇಗಿದೆ ಅಂದರೆ ಎತ್ತರವಾದ ಪ್ರದೇಶಗಳಲ್ಲಿ ಜನರು ಸೇರಿಕೊಂಡು ಬಿಟ್ಟಿದ್ದಾರೆ. ಬೆಂಗಳೂರು ನಗರಕ್ಕೆ ನೀರನ್ನು ತರುವುದೇ ಕಷ್ಟ. ಆದರಲ್ಲೂ ಎತ್ತರವಾದ ಸ್ಥಳಗಳಲ್ಲಿ ಸೇರಿಕೊಂಡಿರ ತಕ್ಕವರಿಗೂ ನೀರನ್ನು ಕೊಡಬೇಕು. ಅದನ್ನು ಮಾಡುತ್ತಿದ್ದೇವೆ.

ಇನ್ನು ಮಾನ್ಯಸದಸ್ಯರಾದ ವೆಂಕಟರಾಮಯ್ಯನವರು ಎಲ್ಲರಿಗೂ ನ್ಯಾಯ ದೊರಕಿಸಿ ಕೊಡಬೇಕೆಂದು ಹೇಳಿದ್ದಾರೆ. ಅದು ತುಂಬಾ ದೊಡ್ಡ ಪ್ರಶ್ನೆ. ಅದನ್ನು ಯಾವ ರೀತಿ ಮಾಡಬೇಕು ಹೇಗೆ ಮಾಡಬೇಕು ಎನ್ನುವ ಬಗ್ಗೆ ನಾವೆಲ್ಲರೂ ಕೂತು ಯೋಚನೆ ಮಾಡಬೇಕೆಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ನ್ಯಾಯಾಲಯಗಳಲ್ಲಿ ಬೇಗ ತೀರ್ಪುಗಳು ಆಗಬೇಕೆಂದು ಹೇಳಿದ್ದಾರೆ, ಈ ತಿಂಗಳ ೩೧ನೇ ತಾರೀಖು ಮತ್ತು ಸೆಪ್ಟೆಂಬರ್ ೧ನೇ ತಾರೀಖು ಕೇಂದ್ರ ಸರ್ಕಾರದವರು ಒಂದು ಸಭೆಯನ್ನು ಕರೆದಿದ್ದಾರೆ. ಕೇಂದ್ರಸರ್ಕಾರದವರು ಮುಖ್ಯಮಂತ್ರಿಗಳ ಸಭೆ, ಮುಖ್ಯ ನ್ಯಾಯಾಧೀಶರುಗಳ ಸಭೆ ಮತ್ತು ಕಾನೂನು ಮಂತ್ರಿಗಳ ಸಭೆಯನ್ನು ಕರೆದಿದ್ದಾರೆ. ಕೇಸುಗಳು ಬೇಗ ತೀರ್ಮಾನವಾಗುವ ಬಗ್ಗೆ ವಿಷಯವನ್ನು ಚರ್ಚೆಗೆ ತೆಗೆದುಕೊಂಡು ಕೇಸುಗಳನ್ನು ನಿಕಾಲೆ ಮಾಡುವ ಬಗ್ಗೆ ಎಲ್ಲಾ ಪ್ರಯತ್ನಗಳನ್ನು ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ.

ತಾಲ್ಲೂಕಿಗೊಂದು ನ್ಯಾಯಾಲಯ ಇರಬೇಕೆಂದು ಹೇಳಿದ್ದಾರೆ. ಅದರ ಬಗ್ಗೆ ಕೂಡ ನಾನು ಈಗಾಗಲೇ ಹೇಳಿದ್ದೇನೆ. ನ್ಯಾಯಾಧೀಶರುಗಳ ಸಂಬಳ ಜಾಸ್ತಿ ಮಾಡಬೇಕೆಂದು ಕೇಳಿದ್ದಾರೆ. ಇದೇ ವಿಚಾರವಾಗಿ ಪ್ರಶ್ನೆಯನ್ನು ಕೂಡ ಮಾನ್ಯ ಸದಸ್ಯರು ಕೇಳಿದ್ದರು, ಅದರ ಬಗ್ಗೆ ಉತ್ತರ ಕೊಟ್ಟಿದ್ದೇನೆ. ಪುನಃ ಕೇಳಿದ್ದಾರೆ. For Munsiff Magistrates, we have fixed the grade of Rs. 2175/-plus allowances as against their previous pay scale of Rs. 1260–1500–75 etc., Magistrates are on par with the Revenue Assistant Commissioners. In addition to pay, they also get allowances New entrants willdraw a total emoluments at Rs, 1650/– at taluk places and Rs, 1800/–in Bangalore

ಈಗ ಮೊದಲು ೧೭೫ ತಾಲ್ಲೂಕುಗಳಲ್ಲಿ ಕೋರ್ಟ್ ಸ್ಥಾಪನೆ ಮಾಡುವ ಕೆಲಸ ಮುಗಿಯಲಿ ಮುಂದಿನ ವಿಚಾರ ಮಾಡೋಣ. ಜಾಸ್ತಿ ನ್ಯಾಯಾಧೀಶರುಗಳನ್ನು ನೇಮಕ ಮಾಡಬೇಕೆಂದು ಹೇಳಿದ್ದಾರೆ, ಎಷ್ಟು ನ್ಯಾಯಾಧೀಶರುಗಳ ಅಗತ್ಯ ಇದೆಯೋ ಅಷ್ಟು ನ್ಯಾಯಾಧೀಶರುಗಳನ್ನು ನೇಮಕ ಮಾಡುವುದಕ್ಕೆ ಪ್ರಯತ್ನ ನಡೆದಿದೆ. ಕೋಲಾರದ ಕೋರ್ಟ್ ಬಿಲ್ಡಿಂಗ್ ವಿಚಾರದಲ್ಲಿ ಹೇಳಿದ್ದಾರೆ. ಕಟ್ಟಿರುವ ಕೋರ್ಟ್‌ಗಳ ಬಗ್ಗೆ ಏನೂ ಹೇಳಿಲ್ಲ. ಹಳೆಯ ಕೋರ್ಟ್ ಬಿಲ್ಡಿಂಗ್ ಬಗ್ಗೆ ಹೇಳಿದ್ದಾರೆ, ಅದನ್ನು ರಿಪೇರಿ ಮಾಡತಕ್ಕ ಕೆಲಸ ಮಾಡುತ್ತೇವೆ ಎನ್ನುವ ವಿಚಾರವನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕೋರ್ಟ್‌ನ ಬಗ್ಗೆ ಕೆಲವು ವಿವರಣೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. There are 260 court buildings in the State. Out of 260 court buildings, 153 court buildings are reported to be in satisfactory condition and the remaining 107 court buildings are reported not to be satisfactory. Out of 107 court buildings which are reported to be not satisfactory, 49 court buildings are located in revenue buildings. Administrative

approval for construction of 16 court buildings has already been given. ೧೬ ಕೋರ್ಟ್ ಬಿಲ್ಡಿಂಗ್ ಕಟ್ಟುವುದಕ್ಕೆ ವ್ಯವಸ್ಥೆ ಮಾಡಲಾಗಿದೆ. ಮಾನ್ಯ ವೆಂಕಟರಾಮಯ್ಯನವರು ಜಡ್ಜ್ ಕ್ವಾರ್ಟರ್ಸ್‌ಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ೪೧೨ ಜುಡಿಷಿಯಲ್ ನ್ಯಾಯಾಧೀಶರುಗಳು ಇದ್ದಾರೆ. ಅವರಲ್ಲಿ ಈಗಾಗಲೇ ೧೮೫ ಜನಗಳಿಗೆ ಕ್ವಾರ್ಟರ್ಸ್ ಕಟ್ಟತಕ್ಕ ವ್ಯವಸ್ಥೆಯನ್ನು ಮಾಡಲಾಗಿದೆ. ೧೯೮೩ನೇ ಇಸವಿಗಿಂತ ಹಿಂದೆ ೧೦೫ ಕ್ವಾರ್ಟರ್ಸ್‌ಗಳು ಇತ್ತು. ನಾನು ಅಧಿಕಾರಕ್ಕೆ ಬಂದಮೇಲೆ ಕಳೆದ ಎರಡು ವರ್ಷಗಳ ಅವಧಿಯಲ್ಲಿ ಎಲ್ಲೆಲ್ಲಿ ಸರ್ಕಾರಿ ಕಟ್ಟಡಗಳು ಇಲ್ಲವೋ ಅಲ್ಲೆಲ್ಲಾ ಬಾಡಿಗೆ ನಿಯಂತ್ರಣ ಕಾನೂನು ಪ್ರಕಾರ ಬಾಡಿಗೆಗೆ ತೆಗೆದುಕೊಂಡು ಡಿಫರೆಂಟ್ ರೆಂಟ್ ಕೊಡತಕ್ಕ ವ್ಯವಸ್ಥೆ ಮಾಡಿದ್ದೇವೆ. ಬೆಂಗಳೂರಿನಲ್ಲಿ ೨೫ ಕ್ವಾರ್ಟರ್ಸ್‌ಗಳು ಇತ್ತು. ಅದರಲ್ಲಿ ೨೦ ಕ್ವಾರ್ಟರ್ಸ್‌ಗಳನ್ನು ಹೈಕೋರ್ಟ್ ನ್ಯಾಯಾಧೀಶರುಗಳಿಗೆ ಕೊಟ್ಟಿದ್ದೇವೆ. ಐದು ಕ್ವಾರ್ಟರ್ಸ್‌ಗಳನ್ನು ಲಾ ಡಿಪಾರ್ಟ್‌ಮೆಂಟ್‌ನವರು ಇಟ್ಟುಕೊಂಡಿದ್ದಾರೆ. ಕ್ವಾರ್ಟರ್ಸ್‌ಗಳನ್ನು ಬೇರೆ ಕಡೆ ಕಟ್ಟುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆ. ಅದು ಹೇಗೆಂದರೆ ಜಿಲ್ಲಾಧಿಕಾರಿಗಳನ್ನು ನಾನು ಈಗಾಗಲೇ ಕೇಳಿಕೊಂಡಿದ್ದೇನೆ. ಜಿಲ್ಲಾಮಟ್ಟಗಳಲ್ಲಿ ಎರಡು ಎಕರೆ ಭೂಮಿಯನ್ನು ಕೊಡಬೇಕೆಂದೂ ತಾಲ್ಲೂಕುಮಟ್ಟಗಳಲ್ಲಿ ಒಂದು ಎಕರೆ ಭೂಮಿಯನ್ನು ಕೊಡಬೇಕೆಂದು ಕೇಳಿಕೊಂಡಾಗ, ಅನೇಕ ಜಿಲ್ಲಾಧಿಕಾರಿಗಳು ಭೂಮಿಯನ್ನು ಕೊಡುತ್ತೇವೆಂದು ಹೇಳಿರುತ್ತಾರೆ. ಅವರು ಜಮೀನು ಕೊಟ್ಟಮೇಲೆ ಹುಡ್ಕೋ ಯೋಜನೆ ಪ್ರಕಾರ ಕ್ವಾರ್ಟರ್ಸ್‌ಗಳನ್ನು ಆದಷ್ಟು ಬೇಗ ಕಟ್ಟಿಸಿಕೊಡುವುದಕ್ಕೆ ನಾನು ಪ್ರಯತ್ನಮಾಡಿ ಒಂದೇ ಸಲ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನುವ ಮಾತನ್ನು ಮಾನ್ಯ ವೆಂಕಟರಾಮಯ್ಯನವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ವಕೀಲರಿಗೆ ಮರ್ಯಾದೆ ಕಡಿಮೆಯಾಗುತ್ತಿದೆ ಎಂದು ಹೇಳುತ್ತಿದ್ದಾರೆ. ನಾನು ಏನು ಮಾಡಲಿ ಸ್ವಾಮಿ ? ಮರ್ಯಾದೆ ಸಂಪಾದನೆ ಮಾಡಿಕೊಳ್ಳತಕ್ಕದ್ದು ಒಬ್ಬೊಬ್ಬ ವ್ಯಕ್ತಿಗೆ ಸಂಬಂಧಪಟ್ಟ ವಿಚಾರ. ವಕೀಲರಿಗೆ ಮರ್ಯಾದೆ ಬರುವ ಹಾಗೆ ಮಾಡಲಿಕ್ಕೆ ನಾವು ನೀವೂ ಎಲ್ಲಾ ಪ್ರಯತ್ನಮಾಡಬೇಕು. ಈ ಸದನದಲ್ಲಿ ಯಾರ್ಯಾರು ವಕೀಲರಿದ್ದಾರೆ ನಾವೆಲ್ಲರೂ ಸೇರಿ ಅದರ ಬಗ್ಗೆ ಪ್ರಯತ್ನ ಮಾಡೋಣವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ವಕೀಲರಿಗೆ ಕೊಡತಕ್ಕ ಸ್ಟೈಫಂಡನ್ನು ಜಾಸ್ತಿ ಕೊಡಬೇಕೆಂದು ಹೇಳಿದ್ದಾರೆ. ಅದರ ಮೇಲೆ ವಾದ ಕೂಡ ಮಾಡಿದ್ದಾರೆ. ಸ್ಟೈಫಂಡನ್ನು ಎಲ್ಲರಿಗೂ ಕೊಡತಕ್ಕ ಯೋಜನೆಯನ್ನು ಮಾಡಿಲ್ಲ. ನಮ್ಮ ರಾಜ್ಯದಲ್ಲಿ ೧೮ ಸಾವಿರ ಜನ ಹೊಸ ವಕೀಲರಿದ್ದಾರೆ, ಹೊಸದಾಗಿ ವಕೀಲರು ಜಾಸ್ತಿ ಸಂಖ್ಯೆಯಲ್ಲಿ ಬರುತ್ತಿದ್ದಾರೆ. ನಮ್ಮ ಸಮಾಜದಲ್ಲಿ ಯಾರು ಆರ್ಥಿಕವಾಗಿ ಸಾಮಾಜಿಕವಾಗಿ ಹಿಂದುಳಿದವರಿದ್ದಾರೆ ಅಂತಹವರಿಗೆ ನಾಲ್ಕು ವರ್ಷಗಳ ಕಾಲ ಪ್ರತಿ ತಿಂಗಳು ೫೦೦ ರೂಪಾಯಿಗಳನ್ನು ಸ್ಟೈಫಂಡ್ ಕೊಡತಕ್ಕ ವ್ಯವಸ್ಥೆಯನ್ನು ಜಾರಿಗೆ ತಂದಿದ್ದೇವೆ ಇದು ಎಲ್ಲರಿಗೂ ಇಲ್ಲ. ಯಾರು ವಕೀಲ ವೃತ್ತಿಮಾಡಿ ನಾಲ್ಕು ವರ್ಷಗಳ ಕಾಲ ಉಳಿಯುವುದಕ್ಕೆ ಸಾಧ್ಯವಿಲ್ಲವೋ ಅಂತಹವರಿಗೆ ಸಹಾಯವಾಗುವ ಉದ್ದೇಶದಿಂದ ಜಾರಿಗೆ ತಂದಿದ್ದೇವೆ. ಸ್ಟೈಫಂಡ್ ಕೊಡುವಾಗ ಕಟ್ಟುನಿಟ್ಟಾಗಿ ಕೊಡುತ್ತಿದ್ದೇವೆ. ಎಲ್ಲರಿಗೂ ಕೊಡುವುದಕ್ಕೆ ಸಾಧ್ಯವಿಲ್ಲ. ಯಾರಾದರೂ ತಪ್ಪು ಮಾಹಿತಿ ಕೊಟ್ಟು ಸ್ಟೈಫಂಡ್ ತೆಗೆದುಕೊಂಡರೆ ಕ್ರಮ ತೆಗೆದುಕೊಳ್ಳುತ್ತೇವೆ. ಈಗಾಗಲೇ ೫ ಜನರಿಗೆ ನೋಟೀಸ್ ಕೊಟ್ಟು ಇಬ್ಬರಿಗೆ ಸ್ಟೈಫಂಡ್ ನಿಲ್ಲಿಸಿದ್ದೇವೆ ಮೂರು ಜನರ ಬಗ್ಗೆ ತನಿಖೆ ಮಾಡುತ್ತಿದ್ದೇವೆ. ಅವರು ಯಾರೇ ಆಗಿರಲಿ ಮುಖ ಮೂತಿ ನೋಡದೆ ಕ್ರಮ ತೆಗೆದುಕೊಳ್ಳುತ್ತೇವೆ. ಸ್ಟೈಫಂಡನ್ನು ಬಡವರಿಗೆ ಮಾತ್ರ ಕೊಡುತ್ತಿದ್ದೇವೆ. ಈಗಾಗಲೇ ಜನರಿಗೆ ನೂರಾರು ಸ್ಟೈಫಂಡ್ ಕೊಟ್ಟಿದ್ದೇವೆ. ಯಾರ್ಯಾರಿಗೆ ಕೊಟ್ಟಿದ್ದೇವೆ ಎನ್ನುವುದರ ಬಗ್ಗೆ ಕೆಲವು ಜಾತಿಯ ಹೆಸರುಗಳನ್ನು ಓದುತ್ತೇನೆ ಅದು ಈ ರೀತಿ ಇದೆ.

೧.	ಬೇಡರ್	೯.	ಕುಂಬಾರ	೧೭.	ಕಲೆಯಾರ್
೨.	ವಾಲ್ಮೀಕಿ	೧೦.	ಕುರುಬ	೧೮.	ನಾಯಿಂದ
೩.	ಬೆಸ್ತರ್	೧೧.	ತಿಗಳ	೧೯.	ಬಣಜಿಗ
೪.	ದರ್ವೇಸಿ	೧೨.	ಉಪ್ಪಾರ	೨೦.	ರಜಪೂತ
೫.	ತಳವಾರ್	೧೩.	ಕೊರವ	೨೧.	ಗಾಣಿಗ
೬.	ನಾಯ್ಕ	೧೪.	ಕಬ್ಬಲಿಗ	೨೨.	ಮರಾಠ
೭.	ಕೋಟೆಕ್ಷತ್ರಿಯ	೧೫.	ಮುಸ್ಲಿಂ	೨೩.	ವಯಾರ್
೮.	ಗೊಲ್ಲರ್	೧೬.	ಈಡಿಗ		

ಹಿಂದೆ ಯಾವಾಗಲೂ ಇಂತಹ ಹೆಸರುಗಳು ಕೇಳಿ ಬಂದಿರಲಿಲ್ಲ, ಹೆಚ್ಚಾಗಿ ಹಿಂದುಳಿದ ವರ್ಗದವರು ವಕೀಲರಾಗಿ ಬಂದಿದ್ದಾರೆ ಇಂತಹವರಿಗೆ ಸಹಾಯ ಮಾಡುವ ಉದ್ದೇಶದಿಂದ ಸ್ಟೈಫಂಡ್ ಕೊಟ್ಟಿದ್ದೇವೆ. ತಿಂಗಳಿಗೆ ೫೦೦ ರೂಪಾಯಿಗಳನ್ನು ತೆಗೆದುಕೊಳ್ಳುವುದು ಮುಖ್ಯವಲ್ಲ ಅದನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳಿ, ನಾಲ್ಕು ವರ್ಷಗಳಲ್ಲಿ ತಪಸ್ಸು ಮಾಡುವ ಹಾಗೆ ತಮ್ಮ ವೃತ್ತಿಯನ್ನು ಪ್ರಾರಂಭಮಾಡಿ, ಆ ರೀತಿ ಮಾಡದಿದ್ದರೆ ವೃಥಾ ಹಣ ಖರ್ಚಾಗುತ್ತದೆಂದು ಯಾರು ಸ್ಟೈಫಂಡನ್ನು ತೆಗೆದುಕೊಳ್ಳುತ್ತಿದ್ದಾರೆ ಅವರಿಗೆ ತಮ್ಮ ಮೂಲಕ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಸೈಟ್ ಡಿಸ್ಟ್ರಿಬ್ಯೂಷನ್ ಬಗ್ಗೆ ಈಗಾಗಲೇ ಹೇಳಿದ್ದೇನೆ, ಅದೇ ರೀತಿ ಲ್ಯಾಂಡ್ ಅಕ್ವಿಜಿಷನ್‌ನಲ್ಲಿ ಎಷ್ಟು ಕೇಸುಗಳು ಪೆಂಡಿಂಗ್‌ನಲ್ಲಿವೆ ಎಂಬುದರ ಪಟ್ಟಿಯನ್ನು ಮಾಡಿ ಅದನ್ನು ಹೈಕೋರ್ಟಿಗೆ ಕಳುಹಿಸಿ ಪ್ರಿಯಾರಿಟಿ ಬೇಸಿಸ್ ಮೇಲೆ ತೀರ್ಮಾನ ಮಾಡಬೇಕೆಂದು ಅವರಲ್ಲಿ ಮನವಿ ಮಾಡಿದ್ದೇನೆ. ಪದೇ ಪದೇ ಈ ಕೆಲಸವನ್ನು ಮಾಡಿಸುವುದಕ್ಕೆ ಮಾಡುತ್ತಿದ್ದೇನೆ. ಸ್ಲಮ್‌ಗಳ ಬಗ್ಗೆ ಹೇಳಿದ್ದಾರೆ ಅದರ ಬಗ್ಗೆ ಈಗಾಗಲೇ ಉತ್ತರವನ್ನು ಹೇಳಿದ್ದೇನೆ. ಮತ್ತೆ ಕೋಲಾರದ ನೀರಿನ ಸಮಸ್ಯೆ ಬಗ್ಗೆ ಹೇಳಿದ್ದಾರೆ. ಅದಕ್ಕಾಗಿಯೇ ಹೆಚ್ಚಿನ ಪ್ರಮಾಣದಲ್ಲಿ ಕೊಳವೆ ಬಾವಿಗಳನ್ನು ಹಾಕಿಸಿದ್ದೇನೆ. ಇನ್ನೂ ಜಾಸ್ತಿ ಕೊಳವೆ ಬಾವಿಗಳನ್ನು ಹಾಕಿದರೆ, ಪಕ್ಕದಲ್ಲಿರುವ ಕೊಳವೆ ಬಾವಿಯಲ್ಲಿ ನೀರು ಬಾರದೆ ಹೋಗುವಂತಹ ಪರಿಸ್ಥಿತಿ ಇರುತ್ತದೆ. ಇದು ಸಾಲದು ಇನ್ನೂ ಹೆಚ್ಚು ಕೊಡಬೇಕು ಅಂತ ಹೇಳಿದ್ದಾರೆ. ಇನ್ನೂ ಸ್ವಲ್ಪ ಕೊಡುತ್ತೇನೆ. ಆಮೇಲೆ ಪುರಸಭೆಗಳಿಗೆ ಹಣಕಾಸಿನ ನೆರವನ್ನು ಜಾಸ್ತಿ ಕೊಡಿ ಅಂತ ಹೇಳಿದ್ದಾರೆ. ಕಮಿಷನ್ನಿನ ವರದಿ ಬಂದಿದೆ ಅದನ್ನು ಪರಿಶೀಲನೆ ಮಾಡಿ ಆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀಮಾನ್ ಯಡಿಯೂರಪ್ಪನವರು ಪಟ್ಟಣ ಪ್ರದೇಶದ ಜನರಿಗೆ ಹಣ ಜಾಸ್ತಿ ಕೊಡುತ್ತಿಲ್ಲ ಅಂತ ಹೇಳಿದ್ದಾರೆ. ಅದಕ್ಕೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಆಮೇಲೆ ಪಡುವಾರಹಳ್ಳಿಯ ವಿಚಾರವನ್ನು ನನ್ನ ಗಮನಕ್ಕೆ ತಂದಿದ್ದಾರೆ. ಅದರ ಬಗ್ಗೆ ರೆಕಾರ್ಡನ್ನು ತರಿಸಿ ಏನಾಗಿದೆ ಎಂಬುದನ್ನು ನೋಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಆಮೇಲೆ ಬೆಂಗಳೂರು ನಗರದಲ್ಲಿರುವ ಕೆಂಪೇಗೌಡ ರಸ್ತೆಯಲ್ಲಿ ಮಂತ್ರಿಯಾದ ಮೇಲೆ ಹೋಗಿದ್ದೀರಾ ಅಂತ ಹೇಳಿದ್ದಾರೆ. ಅವರ ಸಂಶಯವನ್ನು ನಿವಾರಣೆ ಮಾಡುವ ಸಲುವಾಗಿ ಹೇಳುವುದಾದರೆ, ನಾನು ಇಂಟರ್ ಮಿಡಿಯೇಟ್‌ನಿಂದ ಹಿಡಿದು ಇವತ್ತಿನವರೆಗೂ ಕೆಂಪೇಗೌಡ ರಸ್ತೆಯ ಪಕ್ಕದ ಪೇಟೆಯಲ್ಲೇ ವಾಸ ಮಾಡುತ್ತಿದ್ದೇನೆ. ಈಗಲೂ ಅಲ್ಲೇ ವಾಸ ಮಾಡುತ್ತಿದ್ದೇನೆ. ೨೫-೩೦ ವರ್ಷಗಳಿಂದಲೂ ನನಗೆ ಆ ಪ್ರದೇಶದ ಬಗ್ಗೆ ಗೊತ್ತಿರುವಷ್ಟು ಮಾನ್ಯ ಶ್ರೀ ಯಡಿಯೂರಪ್ಪನವರಿಗೆ ಗೊತ್ತಿಲ್ಲ ಅಂತ ಹೇಳಿದರೆ ಅವರು ಕೋಪಿಸಿಕೊಳ್ಳಬಾರದು. ಸ್ವಚ್ಛೀಕರಣ ಆಗಬೇಕಾಗಿದೆ. ಅದನ್ನು ಮಾಡಿಸುತ್ತೇನೆ ಎನ್ನುವ ಮಾತನ್ನು ಹೇಳುತ್ತೇನೆ. ಗ್ರಾಮೀಣ ನಿವೇಶನದ ಬಗ್ಗೆ ಕಡಿಮೆ ಹಣವನ್ನು ಕೊಟ್ಟಿದ್ದೀರಿ ಎಂಬುದಾಗಿ ಹೇಳಿದ್ದಾರೆ. ಪ್ಲಾನಿಂಗ್ ಸ್ಕೀಮಿನಲ್ಲೇ ಕಡಿಮೆ ಬಂದಿದೆ. ಮುಂದಿನ ವರ್ಷ ಜಾಸ್ತಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಪುರಸಭೆಗಳಿಗೆ ಹೆಚ್ಚಿನ ಹಣಕಾಸಿನ ನೆರವನ್ನು ಕೊಡುವ ಬಗ್ಗೆ ಈಗಾಗಲೇ ಉತ್ತರವನ್ನು ಹೇಳಿದ್ದೇನೆ. ಅದೇ ರೀತಿ ಶಾಪಿಂಗ್ ಕಾಂಪ್ಲೆಕ್ಸ್ ಬಗ್ಗೆಯೂ ಕೂಡ ಉತ್ತರ ಕೊಟ್ಟಿದ್ದೇನೆ. ಶಾಸಕರ ಭವನದಲ್ಲಿರುವ ಕ್ಯಾಂಟೀನ್‌ನಲ್ಲಿರುವ ಊಟದ ವ್ಯವಸ್ಥೆಯ ಬಗ್ಗೆ ಹೇಳಿದ್ದಾರೆ. ತಾವೇ ಇದಕ್ಕೆ ಪರಿಹಾರವನ್ನು ಕೊಡಬೇಕು. ಆಮೇಲೆ ಸಿನಿಮಾ ಮಂದಿರದ ಮೇಲೆ ಎರಡು ಪರ್ಸೆಂಟ್ ಟ್ಯಾಕ್ಸ್ ಹಾಕಿಲ್ಲವೆಂದು ಹೇಳಿದ್ದಾರೆ. ನನಗೆ ಜಿಲ್ಲಾಧಿಕಾರಿಗಳಿಂದ ಎಂಟ್ರಿ ಟ್ಯಾಕ್ಸ್ ೨ ಪರ್ಸೆಂಟ್ ಹಾಕಿದ್ದೇವೆಂದು ವರದಿ ಬಂದಿದೆ. ಅನುದಾನವನ್ನು ಜಾಸ್ತಿ ಮಾಡಿ ಎಂಬುದಾಗಿ ಹೇಳಿದ್ದಾರೆ. ಅದು ಸರ್ಕಾರದ ಗಮನದಲ್ಲಿದೆ. ಸೂಕ್ತ ಕ್ರಮವನ್ನು ಆ ಬಗ್ಗೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಭದ್ರಾವತಿ ಹಾಗೂ ಶಿವಮೊಗ್ಗವನ್ನು ಕಾರ್ಪೊರೇಷನ್ ಆಗಿ ಮಾಡಿ ಎಂಬುದಾಗಿ ಹೇಳಿದ್ದಾರೆ. ಶಿವಮೊಗ್ಗ ಪುರಸಭೆಯವರು ಮಾಡಬಹುದು ಅಂತ ಹೇಳಿದ್ದಾರೆ. ಆದರೆ ಭದ್ರಾವತಿ ನೋಟಿಫೈಡ್ ಏರಿಯಾ ಆಗಿದ್ದು ಅವರು ತಮ್ಮ ಸಮ್ಮತಿಯನ್ನು ಇನ್ನೂ ಸೂಚಿಸಿಲ್ಲ, ಅವರಿಂದ ನೋ ರೆಸ್‌ಪಾನ್ಸ್ ಆದ್ದರಿಂದ ಮುಂದೆ ಆ ಬಗ್ಗೆ ವಿಚಾರ ಮಾಡಿನೋಡೋಣ ಎನ್ನುವ ಮಾತನ್ನು ಅವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇ ರೀತಿ ಶ್ರೀಮಾನ್ ನಾರಾಯಣಕುಮಾರ್‌ರವರು ಬಹಳ ವಿಚಾರಗಳ ಬಗ್ಗೆ ಮಾತನಾಡಿದ್ದಾರೆ. ಅವುಗಳಿಗೆಲ್ಲಾ ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಪಾದರಾಯನಪುರದಲ್ಲಿ ಒಳಚರಂಡಿ ವ್ಯವಸ್ಥೆ ಸರಿಯಾಗಿಲ್ಲ, ಎಂದು ತಿಳಿಸಿದ್ದಾರೆ. ಅದಕ್ಕೆ ೧೫ ಲಕ್ಷ ರೂಪಾಯಿಗಳು ಬೇಕಾಗುತ್ತವೆ. ಜಲಮಂಡಲಿಯುವರಿಗೆ ಬೆಂಗಳೂರ

ನಗರಸಭೆಯವರು ತಿಳಿಸಿದ್ದಾರೆ. ಹಣದ ವ್ಯವಸ್ಥೆಯಾದ ನಂತರ ಆ ಕೊಳವೆಗಳನ್ನು ರಿಪೇರಿ ಮಾಡತಕ್ಕ ಕೆಲಸವನ್ನು ಮಾಡುತ್ತಾರೆ. ನಂತರ ನಗರ ಯೋಜನಾ ಇಲಾಖೆ ಸತ್ತು ಹೋಗಿದೆ ಅಂತ ಹೇಳಿದ್ದಾರೆ. ನಗರ ಯೋಜನಾ ಇಲಾಖೆಯವರು ಏನು ಕೆಲಸ ಮಾಡುತ್ತಾರೆಂಬುದು ಬಹುಶಃ ಅವರಿಗೆ ಗೊತ್ತಿಲ್ಲ ಅಂತ ಕಾಣುತ್ತದೆ. ನಗರದ ಯೋಜನೆಗಳನ್ನು ತಯಾರು ಮಾಡಿ ತಾತ್ವಿಕ ನಿರ್ದೇಶನವನ್ನು ಕೊಡತಕ್ಕಂತಹ ಒಂದು ಅಂಗ ಅದು. ಅವರು ಹೇಳಿದ್ದನ್ನು ನಮ್ಮ ಮುಂದೆ ಕಾಣಿಸಿಕೊಳ್ಳುವುದಿಲ್ಲ. ಪರಿಣಾಮಕಾರಿಯಾದ ಕೆಲಸ ಮಾಡಿದ್ದಾರೆ ಎನ್ನುವ ಮಾತನ್ನು ಹೇಳುತ್ತೇನೆ. ಅವರಲ್ಲಿ ರಾಜಕೀಯ ಇದೆ ಎಂಬುದಾಗಿ ತಿಳಿಸಿದ್ದಾರೆ. ಅದರ ಬಗ್ಗೆ ತನಿಖೆ ಮಾಡುತ್ತೇನೆ. ನಂತರ ಬೆಳಗಾವಿ ನಗರ ಸಭೆಯವರು ರಾಜಕೀಯವಾಗಿ ದುರುಪಯೋಗ ಮಾಡುತ್ತಿದ್ದಾರೆ ಎಂಬುದಾಗಿ ಹೇಳಿದ್ದಾರೆ. ಅವರು ರಾಜಕೀಯವಾಗಿ ದುರುಪಯೋಗ ಮಾಡುವುದಕ್ಕೆ ಕಾನೂನಿನ ಚೌಕಟ್ಟಿನಲ್ಲಿ ಅವಕಾಶ ಇಲ್ಲ. ಅದರ ಬಗ್ಗೆ ಚಿಂತನೆ ಮಾಡುವುದು ಬೇಡ ಎನ್ನುವ ಮಾತನ್ನು ತಮ್ಮ ಮೂಲಕ ಅವರಿಗೆ ಹೇಳುತ್ತೇನೆ. ನಂತರ ಬ್ಲೇಸಿಯಸ್ ಡಿಸೋಜರವರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಮುನಿಸಿಪಲ್ ಅಡ್ಮಿನಿಸ್ಟ್ರೇಷನ್‌ಗೆ ಪ್ರತ್ಯೇಕವಾದ ಡೈರೆಕ್ಟರೇಟ್ ಇರಬೇಕು ಅಂತ ಹೇಳಿದ್ದಾರೆ. ಹೆಚ್ಚು ಅಧಿಕಾರವನ್ನು ಕೊಡಬೇಕು ಅಂತ ಹೇಳಿದ್ದಾರೆ. ಆ ಬಗ್ಗೆ ಕಾನೂನನ್ನು ಬದಲಾವಣೆ ಮಾಡಬೇಕೆಂದು ಹೇಳಿದ್ದಾರೆ. ಈ ವಿಷಯವನ್ನೂ ಗಮನದಲ್ಲಿಟ್ಟುಕೊಂಡಿದ್ದೇನೆ. ಫೈನಾನ್ಸ್ ವಿಚಾರದ ಬಗ್ಗೆ ಸೆಂಟ್ರಲ್ ಸ್ಟೇಟ್ ರಿಲೇಷನ್ ಬಗ್ಗೆ ಹೇಳುವಾಗ ಜಾಸ್ತಿ ಕೊಡಬೇಕೆಂದು ಅಲ್ಲಿ ಹೇಳುತ್ತೀರಿ. ಆದರೆ ಇಲ್ಲಿಂದ ಪುರಸಭೆಗಳಿಗೆ ಹಣವನ್ನು ಕೊಡುವಾಗ ಅದೇ ನೀತಿಯನ್ನು ಅನುಸರಿಸುತ್ತಿಲ್ಲವೆಂದು ಹೇಳಿದ್ದಾರೆ. Local bodies must be able to make best efforts to collect maximum of local taxes. Then only they can have additional sums. ಆಮೇಲೆ ಕಾನೂನು ತಿದ್ದುಪಡಿಯ ಬಗ್ಗೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ. ನಂತರ ಮುನಿಸಿಪಲ್ ಎಂಪ್ಲಾಯಿಸ್‌ಗಳಿಗೆ who retired before May 1972 ಅವರಿಗೂ ಪೆನ್‌ಷನ್ ಕೊಡಬೇಕೆಂದು ಹೇಳಿದ್ದಾರೆ. ಪೆನ್‌ಷನ್ ಕಾಂಟ್ರಿಬ್ಯೂಷನ್ ಯಾವ ಪುರಸಭೆಗಳೂ ಕೊಡುತ್ತಿಲ್ಲ. ೧೯೭೨ ರಿಂದ ಹಿಂದೆ ನಿವೃತ್ತಿಯಾದವರಿಗೆ ಕೊಡುವುದಕ್ಕೆ ಬರುವುದಿಲ್ಲ. ಹಾಲಿ ಇರತಕ್ಕ ನೌಕರರಿಗೂ ಪೆನ್‌ಷನ್ ಕಾಂಟ್ರಿಬ್ಯೂಷನ್ ಕೊಡುವುದಕ್ಕೂ ಸಾಧ್ಯವಿಲ್ಲ. ಅವರು ದಯಮಾಡಿ ಕ್ಷಮಿಸಬೇಕೆಂದು ಅವರಲ್ಲಿ ಹೇಳುತ್ತೇನೆ. ನಂತರ ಮಂಗಳೂರು ನಗರ ಸಭೆಗೆ ಲೋನ್ ಕೊಟ್ಟಿಲ್ಲ, ಮಲತಾಯಿ ಧೋರಣೆಯನ್ನು ತೋರಿದ್ದಾರೆ ಅಂತ ಹೇಳಿದ್ದಾರೆ. I don't think this is a correct statement of fact. ಈಗ ತಾನೇ ಹಣವನ್ನು ಕೊಟ್ಟಿದ್ದೇವೆ. ಅದರ ಬಗ್ಗೆ ಚಿಂತೆ ಮಾಡುವುದು ಬೇಡ. ಅವರು ಅಲ್ಲಿ ಕಾಂಗ್ರೆಸ್ ಮೆಜಾರಿಟಿ ಬಂದಿದೆ ಅದಕ್ಕಾಗಿ ಈ ರೀತಿ ಮಾಡುತ್ತಿದ್ದಾರೆಂದು ಹೇಳಿದ್ದಾರೆ. ನಾನು ಆ ದೃಷ್ಟಿಯಿಂದ ಅವರನ್ನು ನೋಡುತ್ತಿಲ್ಲ. ನಾನೇ ಸ್ವತಃ ಎರಡು ಬಾರಿ ಹೋಗಿ ಅವರ ಜೊತೆ ಮಾತನಾಡಿದ್ದೇನೆ, ಅವರ ಸಮಸ್ಯೆಗಳನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇನೆ. ನನ್ನ ದೃಷ್ಟಿಯಲ್ಲಿ ಎಲ್ಲಾ ಚುನಾಯಿತ ಪ್ರತಿನಿಧಿಗಳೂ ಒಂದೆ. ಅದನ್ನು ಈಗಾಗಲೇ ಅವರಿಗೆ ಹೇಳಿದ್ದೇನೆ. ಚುನಾವಣೆಯ ಸಮಯದಲ್ಲಿ ಹೊಡೆದಾಡಿಕೊಂಡು ಇಲ್ಲಿಗೆ ಬಂದಿದ್ದರೂ, ಇಲ್ಲಿಗೆ ಬಂದ ಮೇಲೆ ಊರಿನ ಜನರಿಗೆ ಕೆಲಸವನ್ನು ಮಾಡಿಕೊಡಿ ಎಂಬುದಾಗಿ ಹೇಳಿ ಬಂದಿದ್ದೇನೆ. ಅದೇ ದೃಷ್ಟಿಯಿಂದ ನಡೆಯುವುದಕ್ಕೂ ಪ್ರಯತ್ನ ಮಾಡಿದ್ದೇನೆ. ಆಮೇಲೆ ನೀರು ಸರಬರಾಜು ಬಗ್ಗೆ ಹೇಳಿದ್ದಾರೆ. ಇದಕ್ಕೆ ಮುಖ್ಯವಾದ ಸೋರ್ಸ್ ನೇತ್ರಾವತಿ ನದಿ. ಬೇಸಿಗೆ ಕಾಲದಲ್ಲಿ ನೀರಿನ ಕೊರತೆಯಾಗುತ್ತದೆ. ಅದನ್ನು ಸರಿಪಡಿಸಬೇಕಾದರೆ ರಿಸರ್‌ವಾಯರ್‌ನ್ನು ಕಟ್ಟಬೇಕು, ಅದಕ್ಕೆ ಹಣ ಬೇಕು. ಅದರ ಅಂದಾಜು ವೆಚ್ಚವನ್ನು ಮಾಡುವುದಕ್ಕೆ ಹೇಳಿದ್ದೇನೆ. They are under preparation. The cost is an important factor. We will consider it later. ಆಮೇಲೆ ಸ್ಯಾನಿಟೇಷನ್ ಸರಿಯಾಗಿಲ್ಲ ಅಂತ ಹೇಳಿದ್ದಾರೆ. ಅದರಲ್ಲಿ ಎರಡು ಮಿಲಿಯನ್ ಗ್ಯಾಲನ್ ಸಪ್ಲೈಯಾಗತಕ್ಕಂತಹದ್ದರಲ್ಲಿ ಇವತ್ತು ೫ ಮಿಲಿಯನ್ ಗ್ಯಾಲನ್ ಹೋಗಬೇಕಾದರೆ ಸಾಮಾನ್ಯವಾಗಿ ಓವರ್ ಫ್ಲೋ ಆಗುತ್ತದೆ. ಅದನ್ನು ಸರಿಪಡಿಸುವುದಕ್ಕೆ ನಗರಸಭೆಗೆ ಸೂಕ್ತ ಆದೇಶವನ್ನು ಕೊಡುತ್ತೇನೆ, ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅರ್ಬನ್ ಲ್ಯಾಂಡ್ ಸೀಲಿಂಗ್ ಕಾನೂನು ಏನು ಇದೆ ಅದನ್ನು ತೆಗೆದುಹಾಕಬೇಕೆಂದು ಹೇಳಿದ್ದಾರೆ. ಅದು ಕೇಂದ್ರ ಶಾಸನ. ಅದನ್ನು ತೆಗೆಯುವುದಕ್ಕೆ ಅವಕಾಶ ಇಲ್ಲ ಎಂಬುದನ್ನು ತಮ್ಮ ಮೂಲಕ ಅವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಂತರ

ಸ್ಲಮ್ಸ್‌ಗಳ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. ವಿಶ್ವಬ್ಯಾಂಕಿನವರ ನೆರವನ್ನು ತೆಗೆದುಕೊಳ್ಳಿ ಎಂಬುದಾಗಿ ಹೇಳಿದ್ದಾರೆ. ವಿಶ್ವ ಬ್ಯಾಂಕಿನ ಟೀಮೊಂದು ನಾಳೆ ಬೆಂಗಳೂರಿಗೆ ಬರುತ್ತಿದೆ ಅವರನ್ನು ಭೇಟಿ ಮಾಡಿ. ಅವರಿಂದ ಎಷ್ಟು ಸಹಾಯ ತೆಗೆದು ಕೊಳ್ಳಬೇಕೋ ಅಷ್ಟನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ನಗರಸಭೆ ಹಾಗೂ ಪುರಸಭೆಗಳಲ್ಲಿರತಕ್ಕ ಎಂಪ್ಲಾಯಿಸ್ ಕರಪ್ಟ್ ಆಗಿದ್ದಾರೆ ಎಂಬುದಾಗಿ ಹೇಳಿದ್ದಾರೆ, ನಿಜ. ಕರಪ್ಷನ್ ಮಾಡತಕ್ಕವರು ಬರೀ ಪುರಸಭೆ ಹಾಗೂ ನಗರಸಭೆಗಳಲ್ಲೇ ಅಲ್ಲ. ಎಲ್ಲ ಇಲಾಖೆಗಳಲ್ಲೂ ಇದ್ದಾರೆ. ಕೆಲವರನ್ನು ವರ್ಗ ಮಾಡುವುದಕ್ಕೆ ಪ್ರಯತ್ನ ಮಾಡಿದಾಗ, ಬಿ.ಡಿ.ಎ.ನಲ್ಲಿರುವಂತಹ ಕೆಲವರನ್ನು ಮುನಿಸಿಪಾಲಿಟಿಗಳಿಗೆ ವರ್ಗ ಮಾಡಿದಾಗ, ಕಾನೂನನ್ನು ತಿದ್ದುಪಡಿ ಮಾಡದೆ ಮಾಡಿದ್ದಾರೆಂದು ಕೆಲವರು ಹೈಕೋರ್ಟಿಗೆ ಹೋಗಿ ತಡೆಯಾಜ್ಞೆ ತಂದಿದ್ದಾರೆ. ರಿಟ್ ಪಿಟೀಷನ್‌ನ್ನು ಒಟ್ಟಿಗೆ ತೆಗೆದುಕೊಂಡು ಬೇಗ ತೀರ್ಮಾನ ಮಾಡಬೇಕೆಂದು ಹೈಕೋರ್ಟಿನವರನ್ನು ಮನವಿ ಮಾಡಿಕೊಂಡಿದ್ದೇನೆ. ಆಮೇಲೆ ಹಣದ ಕೊರತೆ ಇದೆ ಅಂತ ಹೇಳಿದ್ದಾರೆ. ನಂತರ ಕೊಟ್ಟಂತಹ ೪೨೫ ಲಕ್ಷ ರೂಪಾಯಿಗಳಲ್ಲಿ ಕೇವಲ ೨೦೦ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೀರಿ ಎಂಬುದಾಗಿ ಹೇಳಿದ್ದಾರೆ. ನನಗೆ ಬಂದಿರುವ ವರದಿ ಪ್ರಕಾರ ವರ್ಕ್ ಇನ್ ಪ್ರೊಗ್ರೆಸ್ ಅಂತ ಇದೆ. ಮತ್ತೆ ಮನೆಗಳು ಬಿದ್ದು ಹೋಗಿದ್ದಾವೆ ಅಂತ ಹೇಳಿದ್ದಾರೆ. I am ordering an official enquiry into the incident as to why the houses collapsed and after getting the report I will take suitable action. ಆಮೇಲೆ ತಲೆಯ ಮೇಲೆ ಮಲವನ್ನು ಹೊತ್ತುಕೊಂಡು ಹೋಗು ತ್ತಿದ್ದಾರೆಂದು ಹೇಳಿದ್ದಾರೆ. ಅದು ಅಕಮ್ಯ ಅಪರಾಧ. ಅದಕ್ಕೆ ಅವಕಾಶ ಇಲ್ಲ. ಆ ರೀತಿ ಮಾಡಬಾರದು ಎಂಬುದಾಗಿ ಕಾರ್ಪೊರೇಷನ್ನಿಗೆ ಆದೇಶವನ್ನು ಕೊಡುತ್ತೇನೆ, ಯಾವುದೇ ಕಾರಣದಿಂದ ಈ ಕೆಲಸ ಮುಂದುವರಿಯಬಾರದು. ಆ ರೀತಿ ಆಗದ ಹಾಗೆ ಪುರಸಭೆಗಳು ಕೆಲಸ ಮಾಡಬೇಕಾಗುತ್ತದೆ. ನಗರಸಭೆಯವರು ಲೈನುಗಳನ್ನು ಹಾಕಿದ್ದಾರೆ, ಅದರ ಏಜೆನ್ಸಿ ಕೆ. ಯು. ಡಬ್ಲ್ಯು. ಎಸ್.ಎಸ್.ಬಿ. ಕೆಲಸ ಮುಗಿದಿದೆ. ಆದರೆ ಮನೆ ಮನೆಗೆ ಅದರ ಕನೆಕ್ಷನ್‌ನ್ನು ತೆಗೆದು ಕೊಳ್ಳುವಂತಹ ಕೆಲಸವನ್ನು ಕಾರ್ಪೊರೇಷನ್‌ನವರು ಮಾಡಬೇಕೆಂದು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಹಳೆ ಪೈಪುಗಳಿವೆ, ಅವುಗಳನ್ನು ಬದಲಾಯಿಸಬೇಕು ಅಂತ ಹೇಳಿದ್ದಾರೆ. ಅದನ್ನು ಬದಲಾವಣೆ ಮಾಡುವುದಕ್ಕೆ ಅವರಿಗೆ ಹೇಳುತ್ತೇನೆ. ಸ್ಲಮ್ಸ್‌ಗಳ ಬಗ್ಗೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ. ನಂತರ ಚಂದ್ರಶೇಖರ್ ಬೆಲ್ಲದ್‌ರವರು ಆದಾಯವನ್ನು ಜಾಸ್ತಿ ಮಾಡಿಕೊಳ್ಳ ಬೇಕೆಂದಿದ್ದಾರೆ. ನಂತರ ಕಾರ್ಪೊರೇಷನ್ ಅಥವಾ ಪುರಸಭೆಯ ವ್ಯಾಪ್ತಿಗೆ ಬರತಕ್ಕಂತಹ ಕೆಲವು ಹಳ್ಳಿಗಳನ್ನು ನಗರಸಭೆ ಅಥವಾ ಪುರಸಭೆಗಳಿಗೆ ಸೇರಿಸಿಕೊಳ್ಳುತ್ತಿದ್ದಾರೆಂದು ಹೇಳಿದ್ದಾರೆ. ಇದು ಬರೀ ಹುಬ್ಬಳ್ಳಿ ಧಾರವಾಡ ಮಹಾನಗರ ಸಭೆಗೆ ಮಾತ್ರ ಸೀಮಿತವಾಗಿಲ್ಲ. ಎಲ್ಲ ಕಡೆಯೂ ಇದೆ. ಸರಿಯಾಗಿ ಸೂತ್ರವನ್ನು ಹಾಕಿಕೊಳ್ಳಬೇಕಾಗುತ್ತದೆ. ಆಯಾ ನಗರ ಪ್ರದೇಶಗಳಲ್ಲಿರತಕ್ಕ ಅಧಿಕಾರಿಗಳು ಇದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತಾರೆನ್ನುವ ಮಾತನ್ನು ತಮ್ಮ ಮೂಲಕ ಅವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ನಗರಸಭೆಯ ಸಿಬ್ಬಂದಿಯನ್ನು ಬೇರೆ ಕಡೆಗೆ ವರ್ಗಾಯಿಸಬೇಕೆಂದು ಹೇಳಿದ್ದಾರೆ. ಅದಕ್ಕೆ ಈಗಾಗಲೇ ಉತ್ತರ ಹೇಳಿದ್ದೇನೆ. ಆ ದಿಸೆಯಲ್ಲಿ ಪ್ರಯತ್ನ ನಡೆಯಿತು. ಆದರೆ ಅದರ ಬಗ್ಗೆ ಸ್ಟೇ ಆರ್ಡರ್ ತಂದಿದ್ದಾರೆ. ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಕೇಸುಗಳು ಬೇಗ ನಿಖಾಲೆ ಆಗಬೇಕೆಂದು ಹೇಳಿದ್ದಾರೆ. ಅದಕ್ಕೆ ಎಲ್ಲ ಪ್ರಯತ್ನ ಮಾಡುತ್ತೇನೆ. ಪಂಪಾಪತಿಯವರು ನಗರಸಭೆಯ ವರಮಾನವೆಲ್ಲ ನೌಕರರ ಸಂಬಳಕ್ಕೆ ಹೋಗುತ್ತಿದೆ. ಊರಿನ ಕೆಲಸ ಮಾಡುವುದಕ್ಕೆ ಹಣ ಇಲ್ಲವೆಂದು ಹೇಳಿದ್ದಾರೆ. ಅದಕ್ಕೆ ಈಗಾಗಲೇ ಹೇಳಿದ್ದೇನೆ ದಾವಣಗೆರೆ ಒಳ್ಳೆಯ ವ್ಯಾಪಾರ ಸ್ಥಳ. ಆದರೂ ಅಲ್ಲಿ ಲಕ್ಷಾಂತರ ರೂಪಾಯಿಗಳನ್ನು ವಸೂಲ್ಮಾಡದೆ ಬಾಕಿ ಇಟ್ಟುಕೊಂಡಿದ್ದಾರೆ. ಅದನ್ನು ವಸೂಲ್ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದ್ದೇನೆ. ಅದು ಬಂದರೆ ಮುಂದಿನ ಕೆಲಸ ನಡೆಯುವುದಕ್ಕೆ ಅನುಕೂಲವಾಗುತ್ತದೆ. ಶಾಶ್ವತವಾಗಿ ಆದಾಯ ಬರತಕ್ಕ ಜಾಗಗಳಲ್ಲಿ ಮನೆಗಳನ್ನು, ಮಳಿಗೆಗಳನ್ನು ಷಾಪಿಂಗ್ ಕಾಂಪ್ಲೆಕ್ಸ್ ಕಟ್ಟಬೇಕೆಂದು ಹೇಳಿದ್ದಾರೆ. ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಿದ್ದಾರೆ. ಸ್ಲಂ ಬೋರ್ಡ್ ವಿಚಾರವಾಗಿ ಈಗಾಗಲೇ ಹೇಳಿದ್ದೇನೆ. ಸಣ್ಣ ನಿವೇಶನಗಳನ್ನು ಜಾಸ್ತಿ ಮಾಡಬೇಕೆಂದು ಹೇಳಿದ್ದಾರೆ. ೪೦ × ೩೦ ನಿವೇಶನಗಳನ್ನು ಎಲ್ಲೆಲ್ಲಿ

ಕೊಟ್ಟಿದ್ದೀರೆಂದು ಕೇಳಿದ್ದಾರೆ. ಈಗ ಅಂಕಿ ಅಂಶಗಳು ಇಲ್ಲ. ನಂತರ ಕೊಡುತ್ತೇನೆ. ಎ. ಡಬ್ಲ್ಯು. ಎಸ್. ನಲ್ಲಿ ಪ್ರತಿಯೊಂದು ಬಡಾವಣೆಯಲ್ಲಿ ೨೦. ೩೦. ಅಳತೆಯ ಶೇಕಡ ೬೦ರಷ್ಟು ನಿವೇಶನಗಳನ್ನು ಕಾಯ್ದಿರಿಸುವ ಕ್ರಮವನ್ನು ಜರುಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ನಿವೇಶನ ಇದ್ದವರಿಗೆ ನಿವೇಶನ ಕೊಟ್ಟಿದ್ದೀರೆಂದು ಹೇಳಿದ್ದಾರೆ. ನೀವೇನಾದರೂ ಅಂಥ ನಿರ್ದಿಷ್ಟವಾದ ಉದಾಹರಣೆಗಳನ್ನು ಕೊಟ್ಟರೆ ಅಂಥವರ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ಆದೇಶ ಕೊಡುತ್ತೇನೆ ದಾವಣಗೆರೆಗೆ ಬೇಕಾದ ನೀರನ್ನು ತುಂಗಭದ್ರದಿಂದ ತನ್ನಿ ಎಂದು ಹೇಳುತ್ತಾರೆ. ಆ ಬಗ್ಗೆ ಇಂಜಿನಿಯರ್ ಹತ್ತಿರ ಮಾತನಾಡಿ ಈಗಿನ ವ್ಯವಸ್ಥೆಯಲ್ಲಿ ಭದ್ರ ನಾಲೆಯಿಂದ ಬರತಕ್ಕ ನೀರನ್ನು ಉಪಯೋಗಿಸಿಕೊಂಡು ಕೆರೆಯನ್ನು ಉತ್ತಮಗೊಳಿಸಿದರೆ ನೀರಿನ ಪ್ರಮಾಣ ಬರತಕ್ಕದ್ದೇನು ಕಡಿಮೆ ಇಲ್ಲವೆಂದು ಹೇಳಿದ್ದೇನೆ.

ಶ್ರೀ ಪಂಪಾಪತಿ.—ರೈತರಿಗೆ ತೊಂದರೆಯಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ರೈತರಿಗೆ ತೊಂದರೆ ಆಗದ ಹಾಗೆ ಮಾಡುವುದಕ್ಕೆ ಅವಕಾಶ ಇದೆ ಎಂದು ಹೇಳಿದ್ದೇನೆ. ಸ್ವಲ್ಪ ಖರ್ಚಿನಲ್ಲೇ ಜಾಸ್ತಿ ನೀರನ್ನು ಸಂಗ್ರಹಿಸುವುದಕ್ಕೆ ಸಾಧ್ಯವಾಗುತ್ತದೆ. ಅದನ್ನು ಮಾತ್ರ ಪರಿಶೀಲನೆ ಮಾಡುತ್ತೇನೆ. ಅದು ಆಗದೆ ಹೋದರೆ ಮುಂದಿನ ಕ್ರಮವನ್ನು ಯೋಚನೆ ಮಾಡೋಣ. ಚಿನ್ನಪ್ಪನವರು ಮುನಿಸಿಪಾಲಿಟಿ ಸರಿಯಾಗಿಲ್ಲವೆಂದು ಹೇಳಿದ್ದಾರೆ. ಮುನಿಸಿಪಾಲಿಟಿ ಸರಿಯಾಗಿಲ್ಲದಿದ್ದರೆ. ತಾವು ಶಕ್ತಿ ತುಂಬಬೇಕು. ಸ್ಲಂ ಅನ್ನು ಸುಲಭವಾಗಿ ಕ್ಲಿಯರ್ ಮಾಡಬಹುದು. ಅಲ್ಲಿ ೧೦ ಲಕ್ಷ ಜನ ಇದ್ದಾರೆಂದು ಹೇಳಿದ್ದಾರೆ. ಹತ್ತು ಲಕ್ಷ ಜನರಿಗೆ ನಿವೇಶನಗಳನ್ನು ಕೊಟ್ಟರೆ ಸ್ಲಂ ಬರುವುದಿಲ್ಲವೆಂದು ಅಲ್ಲ. ಬೆಂಗಳೂರಿಗೆ ದಿನಕ್ಕೆ ಸಾವಿರ ಜನ ಬರುತ್ತಾರೆ. ಅದೇ ರೀತಿ ಮಡಿಕೇರಿಗೆ ಬರುತ್ತಾರೆ ಇತರ ಎಲ್ಲ ನಗರಗಳಿಗೆ ಬರುತ್ತಾರೆ. ಸ್ಥಳೀಯ ಸಂಸ್ಥೆಗಳಿಗೆ ಹೇಗೆ ಹಣಕಾಸಿನ ಮಿತಿ ಇದೆಯೋ ಹಾಗೆ ಸರ್ಕಾರಕ್ಕೂ ಮಿತಿ ಇದೆ. ಊರಿಗೆ ಬಂದವರಿಗೆಲ್ಲ ವ್ಯವಸ್ಥೆ ಮಾಡುವುದು ಕಷ್ಟ. ಸುಮಾರು ೧೫–೨೦ ವರ್ಷಗಳಿಂದ ಇದ್ದವರನ್ನು ಯಾರನ್ನೂ ಸ್ಥಳ ಬಿಡಿಸಿಲ್ಲ. ಅಂಥವರಿಗೆ ಪುನರ್ ವ್ಯವಸ್ಥೆ ಮಾಡದ ಹೊರತು ತೆಗೆಯುವುದಿಲ್ಲವೆಂದು ಹೇಳಿದ್ದೇನೆ. ಅವರು ಹಸಿರು ಪಟ್ಟಿಯ ಆಚೆಗೆ ಹೋಗುವುದಿದ್ದರೆ ಅಲ್ಲಿ ಅವರಿಗೆ ಜನತಾ ಮನೆ ಕಟ್ಟಿಸಿಕೊಡುತ್ತೇವೆ. ಅಥವಾ ಮನೆಗಳನ್ನು ಕಟ್ಟಿಸಿ ಕೊಳ್ಳಲು ಹಣ ಕೊಡುತ್ತೇವೆ. ಜಯಕುಮಾರ್‌ರವರು ರಷ್ಯಕ್ಕೆ ಹೋಗಿದ್ದರು. ಆ ಹಿನ್ನೆಲೆಯಲ್ಲಿ ಬಹಳ ಸ್ವಾರಸ್ಯವಾಗಿ ಭಾಷಣ ಮಾಡಿದ್ದಾರೆ. ಕುಶಾಲ ಅವರು ಗ್ರಾಮೀಣ ಕೊಳವೆ ಬಾವಿಗಳ ದುರಸ್ತಿಗೆ ಸರಿಯಾಗಿ ಹಣ ಖರ್ಚು ಮಾಡಬೇಕೆಂದು ಹೇಳಿದ್ದಾರೆ. ಅವುಗಳನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮಾನ್ಯ ಸದಸ್ಯರುಗಳು ಈ ಚರ್ಚೆಯಲ್ಲಿ ಭಾಗವಹಿಸಿ ಅವರು ಇಟ್ಟಿರತಕ್ಕ ಹಲವಾರು ವಿಷಯಗಳ ಬಗ್ಗೆ ಸಮರ್ಪಕವಾಗಿ ಉತ್ತರ ಕೊಟ್ಟಿದ್ದೇನೆಂದು ನನ್ನ ನಂಬಿಕೆ. ಈ ಹಿನ್ನೆಲೆಯಲ್ಲಿ ನನ್ನ ಬೇಡಿಕೆಗಳನ್ನು ಪಾಸ್ ಮಾಡಿಕೊಡಬೇಕೆಂದು ಸದಸ್ಯರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್.—ಮಾನ್ಯ ಸಚಿವರು ಬಹಳ ಸಮಾಧಾನಕರವಾದ ಉತ್ತರ ಕೊಟ್ಟಿದ್ದಾರೆ. ನಾವು ವಿರೋಧ ಪಕ್ಷದ ಕಡೆಯಿಂದ ಏನು ಸಲಹೆ ಸೂಚನೆಗಳನ್ನು ಕೊಟ್ಟಿದ್ದೇವೆ ಅವುಗಳನ್ನು ಸಾಕಷ್ಟು ಒಪ್ಪಿಕೊಂಡಿದ್ದಾರೆ. ಮತ್ತು ಅವುಗಳ ಬಗ್ಗೆ ವಿಚಾರ ಮಾಡುತ್ತೇವೆಂದು ಹೇಳಿದ್ದಾರೆ. ಈಗ ಅವರು ಮುನಿಸಿಪಾಲಿಟಿಗಳಿಗೆ ಫೈನಾನ್ಸಿಯಲ್ ಎಕ್ಸಿಕ್ಯೂಟೀವ್ ಆರ್ಡರ್ ಹೊರಡಿಸುತ್ತೇವೆಂದು ಹೇಳಿದ್ದಾರೆ. ಅದು ಯಾವ ರೀತಿ ಇರುತ್ತದೆ. ಏನು ಎಕ್ಸಿಕ್ಯೂಟೀವ್ ಆರ್ಡರ್ ಹೊರಡಿಸುತ್ತೀರಿ ? ಸರ್ಕಾರ ಮುನಿಸಿಪಾಲಿಟಿಗಳಿಗೆ ಯಾವ ರೀತಿಯಾಗಿ ಸಹಾಯ ಮಾಡಿದೆ ಎಂದು ಪ್ರಸ್ತಾಪ ಮಾಡಿದ್ದರೆ ಒಳ್ಳೆಯದಾಗುತ್ತಿತ್ತು.

ಶ್ರೀ ಎ. ಲಕ್ಷ್ಮೀಸಾಗರ್.—ಈಗ ಅವರಿಗೆ ಹಣ ಖರ್ಚು ಮಾಡುವುದಕ್ಕೆ ಮಿತಿ ಇದೆ. ಕೌನ್ಸಿಲ್ಲಿಗೆ ಇಷ್ಟು, ಸ್ಟ್ಯಾಂಡಿಂಗ್ ಕಮಿಟಿಗೆ ಇಷ್ಟು ಎಂದು ಇದೆ. ಈಗ ಅದರ ಮಟ್ಟವನ್ನು ಜಾಸ್ತಿ ಮಾಡುತ್ತಿದ್ದೇವೆ.

ಶ್ರೀ ಧರ್ಮಸಿಂಗ್.—ಮುನಿಸಿಪಾಲಿಟಿ ಆಕ್ಟಿಗೆ ಇದೇ ಅಧಿವೇಶನದಲ್ಲಿ ತಿದ್ದುಪಡಿಗಳನ್ನು ತರುತ್ತೇವೆಂದು ಹೇಳಿದ್ದಾರೆ. ಅಧಿವೇಶನ ಮುಂದಿನ ತಿಂಗಳ ೬–೭ನೇ ತಾರೀಖಿನವರೆಗೆ ಇದೆ. ಮತ್ತೆ ಸೇರುವುದು ೫–೬ ತಿಂಗಳು ತಡವಾಗಬಹುದು. ಆದ್ದರಿಂದ ಇವತ್ತು ತಾತ್ಕಾಲಿಕವಾಗಿ ಎಲ್ಲ ತಿದ್ದುಪಡಿಗಳನ್ನು ತಂದು ಪಾಸ್ ಮಾಡಿಸಿದರೆ ಸ್ವಲ್ಪ ಅನುಕೂಲವಾಗುತ್ತದೆಂದು ಹೇಳುತ್ತೇನೆ, ಇವತ್ತಿಗೂ ಎಲ್ಲಾ

ಮುನಿಸಿಪಾಲಿಟಿಗಳಿಗೂ ಹಣಕಾಸಿನ ತೊಂದರೆ ಇದ್ದೇ ಇದೆ. ಬೇರೆ ಕಡೆ ಪಟ್ಟಣ ಪ್ರದೇಶಗಳಲ್ಲಿ ೩೦ ಪರ್ಸೆಂಟ್ ಟ್ಯಾಕ್ಸ್ ರವಿನ್ಯೂ ವಸೂಲ್ಮಾಡುತ್ತಿದ್ದಾರೆ. ಇದರಿಂದ ಪ್ರತಿಯೊಬ್ಬರಿಗೆ ೬-೭ ರೂಪಾಯಿ ಬೀಳುತ್ತದೆಂದು ಹೇಳಿದ್ದಾರೆ, ನಾವು ಆಕ್ಟ್ರಾಯ್ ಅನ್ನು ಪುನಃ ಇಂಟ್ರಡ್ಯೂಸ್ ಮಾಡಬೇಕೆಂದು ಒತ್ತಾಯ ಮಾಡಿದ್ದೇವೆ ಏಕೆಂದರೆ ಗುಲಾಟಿ ಕಮೀಷನ್ ರಿಪೋರ್ಟ್ ಬಂದಿದೆ ಎಂದು ಅಲ್ಲ ಲಕ್ಷ್ಮಣ ರಾವ್ ಅವರ ರಿಪೋರ್ಟ್ ಕೂಡ ಬಂದಿದೆ. ಲಕ್ಷ್ಮಣರಾವ್‌ರವರು ಏನೇನು ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆಂಬುದನ್ನು ಇವತ್ತಿನ ದಿವಸ ಉತ್ತರದಲ್ಲಿ ಹೇಳಿದ್ದರೆ ಸಮಾಧಾನವಾಗ ತ್ತಿತ್ತು ನಾವು ಅನುಭವದ ಆಧಾರದ ಮೇಲೆ ಆಕ್ಟ್ರಾಯಿಯನ್ನು ಇಂಟ್ರಡೂಸ್ ಮಾಡಬೇಕೆಂದು ಪ್ರತಿಪಾದನೆ ಮಾಡಿದೆವು ಅಂಕಿ ಅಂಶಗಳನ್ನು ಕೊಟ್ಟು ಇದನ್ನು ಮಾಡದಿದ್ದರೆ ಪುರಸಭೆ ಮತ್ತು ನಗರಸಭೆಗಳಿಗೆ ತೊಂದರೆಯಾಗು ತ್ತದೆಂದು ಹೇಳಿದ್ದೇವೆ ಹೀಗಿರುವಾಗ ಇವತ್ತು ಇದರ ಬಗ್ಗೆ ಉತ್ತರ ಕೊಡದಿದ್ದರೆ ಹೇಗೆ ? ಖಾರ್ಗೆ ಯವರು ಕೂಡ ಹೇಳಿದ್ದಾರೆ, ಆಕ್ಟ್ರಾಯನ್ನು ಇಂಟ್ರಡ್ಯೂಸ್ ಮಾಡಬೇಕೆಂದು ನಾನು ಬರುವುದಕ್ಕೆ ಮುಂಚೆನಿಂದಲೂ ರೆಕಮಂಡೇಷನ್ ಇತ್ತು ಎಂದು. ಗುಲಾಟಿ ಕಮೀಷನ್ ರಿಪೋರ್ಟ್ ಬಂದಮೇಲಾದರೂ ಕ್ರಮ ಕೈಗೊಳ್ಳುವ ಬಗ್ಗೆ ವಿಚಾರ ಮಾಡಬೇಕಾಗಿತ್ತು. ಆ ಆಧಾರದ ಮೇಲೆ ನಾವು ಹೇಳಿದ್ದೇವೆ. ೧೯೮೧ ರಿಂದ ೧೯೯೧ರ ವರೆಗೆ ೧೦ ವರ್ಷಗಳ ಕಾಲ ವಾಟರ್ ಡಿಕೇಡ್ ಪ್ರೋಗ್ರಾಂ ಇದೆ. ಅದಕ್ಕೆ ವಿಶ್ವ ಬ್ಯಾಂಕಿನ ನೆರವು ಬರುತ್ತಿದೆ. ಈಗ ೫ ವರ್ಷಗಳ ಅವಧಿಯಲ್ಲಿ ೨೯೨ ಕೋಟಿ ರೂಪಾಯಿಗಳನ್ನು ಪಟ್ಟಣ ಪ್ರದೇಶಗಳಲ್ಲಿ ಖರ್ಚು ಮಾಡತಕ್ಕದ್ದನ್ನು ಅಳವಡಿಸಿಕೊಂಡಿದ್ದೀರಿ. ಅದಕ್ಕೆ ೫ ವರ್ಷಗಳ ಅವಧಿಗೆ ಎಷ್ಟು ಹಣ ಬಂದಿದೆ ? ಹುಕ್ಕೇರಿ —ಸಂಕೇಶ್ವರ, ಕುಮಟ —ಹೊನ್ನಾವರ ಇಲ್ಲೆಲ್ಲ ರೀಜನಲ್ ವಾಟರ್ ಸಪ್ಲೈ ಇದೆ ಅದೇ ರೀತಿ ಗದಗ್—ಬೆಟಗೇರಿಯಲ್ಲೂ ಇದೆ. ಮೈಸೂರಿನಲ್ಲೂ ಇದೆ ಇಂಥ ಅನೇಕ ಯೋಜನೆಗಳು ಇವೆ. ಅದಕ್ಕೆ ಎಷ್ಟು ದುಡ್ಡು ಬಂದಿದೆ ? ಕರ್ನಾಟಕ ವಾಟರ್ ಸಪ್ಲೈ ಬೋರ್ಡಿಗೆ ವೇಸ್ ಅಂಡ್ ಮೀನ್ಸ್‌ನಲ್ಲಿ ಒಂದು ನಯಾಪೈಸೆಯನ್ನು ಇಟ್ಟಿಲ್ಲ. ಅದಕ್ಕೆ ಬಡ್ಜೆಟ್ಟಿನಲ್ಲಿಯೂ ಹಣವನ್ನು ಇಟ್ಟಿಲ್ಲ. ಎಲ್. ಐ. ಸಿ. ಯಿಂದಲೂ ಹಣ ತರುವುದಕ್ಕೆ ಆಗುವುದಿಲ್ಲವೆಂದರೆ ಹೇಗೆ ? ಎಷ್ಟು ಹಣವನ್ನು ಎಲ್. ಐ. ಸಿ. ಯಿಂದ ಬಂದಿದೆ ಎಂಬುದನ್ನು ಹೇಳಬೇಕು. ಇದರ ಬಗ್ಗೆ ತಾವು ಸವಿಸ್ತಾರವಾಗಿ ಉತ್ತರ ಕೊಡಬೇಕು. ಕಾವೇರಿ ೩ನೇ ಹಂತದ ಬಗ್ಗೆ ೭ನೇ ಯೋಜನೆಯಲ್ಲಿ ಕ್ಲಿಯರ್ ಆಗಿದೆ. ಫೌಂಡೇಷನ್ ಸ್ಟೋನ್ ಎಲ್ಲ ಹಾಕಿದ್ದೇವೆ. ಮತ್ತು ಅದರ ಬಗ್ಗೆ ಪ್ರಧಾನ ಮಂತ್ರಿಗಳ ಜೊತೆಗೆ ಮಾತನಾಡಿದ್ದೇನೆಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಅದನ್ನು ನಾನು ಕೂಡ ಪ್ರಸ್ತಾಪ ಮಾಡಿದ್ದೇನೆ. ೭ನೇ ಯೋಜನೆಯಲ್ಲಿ ಅದು ಕ್ಲಿಯರ್ ಆಗಿಲ್ಲ. ಫೈನಾನ್ಸಿಯಲ್ ಫ್ಯಾಕ್ಟರ್ ಏನಿದೆ, ಕಾರ್ಪೊರೇಷನ್ ಮತ್ತಿತರ ಕಡೆ ದುಡ್ಡು ಖರ್ಚು ಮಾಡತಕ್ಕದ್ದು ಏನಿದೆ ಅದರ ಬಗ್ಗೆ ಸರ್ಕಾರ ಯೋಚಿಸಬೇಕು. ಇದರ ಬಗ್ಗೆ ಸರ್ಕಾರ ನೇರವಾಗಿ ಉತ್ತರ ಕೊಡಬೇಕು.

ಸಿ. ಡಿ. ಪಿ. ಸಲ್ಲಿ ೩೮ ಲಕ್ಷ ರೂಪಾಯಿ ಪ್ರಾವಿಷನ್ ಇತ್ತು. ಈಗ ಗ್ರೀನ್ ಬೆಲ್ಟ್ ಏರಿಯಾ ಎಕ್ಸ್‌ಟೆಂಡ್ ಮಾಡಿರುವುದರಿಂದ ಜನಸಂಖ್ಯೆ ೭೦ ಲಕ್ಷ ಆಗುತ್ತದೆ. ೨೦೦೦ ಎ. ಡಿ. ಗೆ ೮ ಮಿಲಿಯನ್ ಆಗಬಹುದು ಎಂದು ಎಕ್ಸ್‌ಪರ್ಟ್ಸ್ ರಿಪೋರ್ಟ್ ಇದೆ ಈ ಜನರಿಗೆ ವಾಟರ್ ಸಪ್ಲೈ ಮತ್ತು ಇತರ ಸಲವತ್ತುಗಳನ್ನು ಕೊಡುವುದಕ್ಕೆ ಏನು ಮಾಡಿದ್ದೀರಿ ? ಪಿ. ಎಂ. ಡಿ. ಯಲ್ಲಿ ನಾನ್ ಅಫಿಷಿಯಲ್ ಮೆಂಬರ್ಸ್ ಇರಬೇಕು. ಎಕ್ಸ್‌ಪರ್ಟ್ಸ್ ಇದ್ದರೂ ಕೂಡ ಈ ಕಮಿಟಿಯಲ್ಲಿ ಪ್ರತಿನಿಧಿಗಳು ತಮ್ಮ ವಿಚಾರಧಾರೆಗಳನ್ನು ಪ್ರತಿಪಾದನೆ ಮಾಡತಕ್ಕ ಅವಕಾಶ ಕೊಡಬೇಕು ಇದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳಬೇಕು. ಹೈರೈಸ್ ಬಿಲ್ಡಿಂಗ್ ಬಗ್ಗೆ ಇವತ್ತು ಹೇಳಬೇಕೆಂದರೆ ೧೯೮೧ ರಲ್ಲಿ ಇದನ್ನು ಸ್ಟಾಪ್ ಮಾಡಿದಮೇಲೆ ಗ್ರೌಂಡ್ ಪ್ಲಸ್ ಮೂರು ಅಂತಸ್ತಿಗೆ ಕೊಡುತ್ತಿದ್ದರು. ಈಗ ಗ್ರೌಂಡ್ ಪ್ಲಸ್ ನಾಲ್ಕು ಅಂತಸ್ತಿಗೆ ಕೊಡುತ್ತಿದ್ದಾರೆ. ಭಕ್ತಾವರೆ ಕನ್‌ಸ್ಟ್ರಕ್ಷನ್ ಕಂಪೆನಿಯವರು ರೆಸಿಡೆನ್ಷಿಯಲ್ ಏರಿಯಾದಲ್ಲಿ ಕಟ್ಟಿಸುತ್ತಿದ್ದರು. ಅದಕ್ಕೆ ಸುಪ್ರೀಂ ಕೋರ್ಟಿನವರು ತಡೆಯಾಜ್ಞೆ ಕೊಟ್ಟಿದ್ದಾರೆ. ಆದ್ದರಿಂದ ಎಲ್ಲಾ ಹೈರೈಸ್ ಬಿಲ್ಡಿಂಗ್ ಬಗ್ಗೆ ಸುಪ್ರೀಂ ಕೋರ್ಟ್ ತೀರ್ಮಾನಕ್ಕೆ ಕಾಯಬೇಕಾಗಿಲ್ಲ. ಸ್ಲಮ್ಸ್ ವಿಚಾರ ಪ್ರಸ್ತಾಪ ಮಾಡುತ್ತಾ ನಿನ್ನೆ ಕೋರ್ಟಿನಲ್ಲಿದೆ ಎಂದು ಹೇಳಿದರು. ಆಲ್ಟರ್ನೇಟೀವ್ ಸೈಟ್ಸ್ ಪ್ರೊವೈಡ್ ಮಾಡದೆ ಏತಕ್ಕೆ ಡೆಮಾಲಿಷ್ ಮಾಡಿದಿರಿ ಎಂದು ಅವರು ಹೇಳಿದ್ದಾರೆ. ಆದರೆ ಕೊಳಚೆ ಪ್ರದೇಶದ ಜನರ ಬಗ್ಗೆ ಸರ್ಕಾರದ ನಿಲುವು ಏನು ಎಂಬುದನ್ನು ಹೇಳಬೇಕು. ನಂದಿನಿ ಲೇ ಔಟಿನಲ್ಲಿ ಡೆಮಾಲಿಷನ್ ಮಾಡಿದಾಗ, ಡಿ. ದೇವರಾಜ ಅರಸ್‌ರವರಿದ್ದಾಗ ಪ್ರತಿಭಟನೆ ಆಯಿತು. ಆದರೆ ತಾವು ಬುಲ್‌ಡೋಜಿಂಗ್ ಮಾಡಿದ್ದಕ್ಕೆ ಕಾರಣ ಏನು ? ಅವರಿಗೆ ಬೇರೆ ವ್ಯವಸ್ಥೆ ಏನು ಮಾಡಿದ್ದೀರಿ ಎಂಬ ಬಗ್ಗೆ ಉತ್ತರ ಹೇಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಫೈನಾನ್ಷಿಯಲ್ ಪವರ್ಸ್ ಬಗ್ಗೆ ಹೇಳಿದೆ. ಈಗ ರೂಲ್ಸ್‌ನಲ್ಲಿ ಖರ್ಚು ಮಾಡತಕ್ಕ ಮಿತಿ ಏನಿದೆ ಅದನ್ನು ಜಾಸ್ತಿ ಮಾಡತಕ್ಕ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಈ ಬಗ್ಗೆ ಸರ್ಕಾರಿ ಆಜ್ಞೆ ಹೊರಟಿದೆ ಎಂದು ಹೇಳಿದ್ದೇನೆ. ಅದಕ್ಕೆ ಈಗಲೇ ತಿದ್ದುಪಡಿ ತನ್ನಿ ಎಂದು ಹೇಳಿದ್ದಾರೆ. ಅದಕ್ಕೆ ಪ್ರಯತ್ನ ಮಾಡುತ್ತೇನೆ. ಆಗುತ್ತದೋ ಇಲ್ಲವೊ. ಎಂಬುದನ್ನು ಈಗಲೇ ಹೇಳುವುದಕ್ಕೆ ಬರುವುದಿಲ್ಲ. ಪ್ರಯತ್ನ ಮಾಡುತ್ತೇನೆ ಎಂದು ಹೇಳುತ್ತೇನೇ ಲೋಕಲ್ ಫೈನಾನ್ಸ್ ಕಮಿಷನ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾನು ಅದರ ಬಗ್ಗೆ ಸವಿಸ್ತಾರವಾಗಿ ಉತ್ತರ ಹೇಳಿದ್ದೇನೆ. ಗಲಾಟೆ ಕಮಿಷನ್ ರಿಪೋರ್ಟ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾನು ಅದನ್ನು ಇಲ್ಲ ಎಂದು ಹೇಳಲಿಲ್ಲ. ಆದಾದಮೇಲೆ ಸರ್ಕಾರದವರು ಬೇರೆ ತೀರ್ಮಾನ ತೆಗೆದುಕೊಂಡು ವರದಿ ಕೊಟ್ಟಿದ್ದಾರೆ. ಅದನ್ನು ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದೇನೆ. ಎಲ್. ಐ. ಸಿ. ಯಿಂದ ಎಷ್ಟು ಹಣ ಬಂದಿದೆ ಎಂದು ಕೇಳಿದ್ದಾರೆ. ನಮ್ಮಲ್ಲಿ ಒಂದು ಹ್ಯಾಂಡ್ ಬುಕ್ ಇದೆ. ಅದರಲ್ಲಿ ಎಲ್ಲಾ ವಿವರ ಇದೆ. ಅದನ್ನು ದಯವಿಟ್ಟು ಕೊಡುತ್ತೇನೆ, ನೋಡಿ. ಮತ್ತೆ ವಿವರ ಬೇಕಾದರೆ ಕಳುಹಿಸಿಕೊಡುತ್ತೇನೆ. ಕಾವೇರಿ ಥರ್ಡ್ ಸ್ಟೇಜನ್ನು ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದ್ದೇವೆ. ಕೇಂದ್ರ ಸರ್ಕಾರದವರಲ್ಲಿ ಹಣ ಒದಗಿಸಿಕೊಡಬೇಕೆಂದು ಮನವಿ ಮಾಡಿದ್ದೇವೆ. ಈ ಬಗ್ಗೆ ಒತ್ತಾಯ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ. ಗ್ರೀನ್ ಬೆಲ್ಟ್ ವಿಸ್ತಾರ ಮಾಡಿದ್ದೀರಿ. ಅದರೆ ನೀರಿನ ವ್ಯವಸ್ಥೆಗೆ ಏನು ಮಾಡಿದ್ದೀರಿ ಎಂದು ಹೇಳಿದ್ದಾರೆ. ನಾವು ಅದನ್ನೆಲ್ಲಾ ಲೆಕ್ಕಕ್ಕೆ ತೆಗೆದುಕೊಂಡಿದ್ದೇವೆ. ನೀರು ಒದಗಿಸತಕ್ಕ ವ್ಯವಸ್ಥೆ ಮಾಡಬೇಕು ಎಂಬುದನ್ನು ಗಮನದಲ್ಲಿಟ್ಟುಕೊಂಡಿದ್ದೇವೆ. ಆದರೆ ನ್ಯಾಷನಲ್ ಸ್ಟ್ಯಾಂಡರ್ಡ್ ಪ್ರಕಾರ ೨೦೦ ಲೀಟರ್ ತಲಾ ಕೊಡುವುದಕ್ಕೆ ಆಗುವುದಿಲ್ಲ. ಇದು ತಮಗೂ ಗೊತ್ತಿದೆ. ನನಗೂ ಗೊತ್ತಿದೆ. ಆದಷ್ಟು ಹೆಚ್ಚು ಪ್ರಮಾಣದಲ್ಲಿ ನೀರು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಹೇಳುತ್ತೇನೆ. ಮೂರನೇ ಹಂತ ಆಗಿ ನಾಲ್ಕನೇ ಹಂತದ ಯೋಜನೆಯನ್ನೂ ಮಾಡುತ್ತೇವೆಂದು ಹೇಳಿದ್ದೇನೆ. ಹಣದ ಪರಿಸ್ಥಿತಿಯನ್ನು ಅವರು ಗಮನದಲ್ಲಿಟ್ಟುಕೊಂಡಿದ್ದಾರೆಂದು ಭಾವಿಸಿದ್ದೇನೆ.

ಶ್ರೀ ಧರ್ಮಸಿಂಗ್.—ಕಾವೇರಿ ಎರಡನೇ ಹಂತ ಮುಗಿದು ಮೂರನೇ ಹಂತದ ಯೋಜನೆ ಮುಗಿಸಿದರೂ ೫೦ ಲಕ್ಷ ಜನರಿಗೆ ನೀರು ಕೊಡುವುದಕ್ಕಾಗುವುದಿಲ್ಲ, ೩೪೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಮೂರನೇ ಹಂತದ ಯೋಜನೆ ಮುಗಿಸಿದರೂ ನೀರು ಕೊಡುವುದಕ್ಕಾಗುವುದಿಲ್ಲ. ಗ್ರೀನ್‌ಬೆಲ್ಟ್ ಏರಿಯಾ ಎಕ್ಸ್‌ಟೆಂಡ್ ಮಾಡಿರುವುದರಿಂದ ೭೦–೮೦ ಲಕ್ಷ ಜನಸಂಖ್ಯೆ ಆಗುತ್ತದೆ. ನಾಲ್ಕನೇ ಹಂತದ ಯೋಜನೆ ಮುಗಿಸಿ ನೀರನ್ನು ತಂದರೂ ಬೆಂಗಳೂರಿನ ನೀರಿನ ಸಮಸ್ಯೆ ಬಗೆಹರಿಸುವುದಕ್ಕಾಗುವುದಿಲ್ಲ. ಇದೊಂದು ದೊಡ್ಡ ಪ್ರಶ್ನೆ. ತಾವೇ ಅಂತ ಏನಿಲ್ಲ, ಯಾರಾದರೂ ಇದರ ಬಗ್ಗೆ ಗಮನ ಕೊಡಬೇಕಾಗುತ್ತದೆ. ನಗರವನ್ನು ಬೆಳೆಯುದಕ್ಕೆ ಬಿಡಬೇಕೋ ಬಿಡಬಾರದೋ ಎಂಬ ಬಗ್ಗೆ ಎಕ್ಸ್‌ಪರ್ಟ್ಸ್ ರಿಪೋರ್ಟ್ ಕೊಟ್ಟಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಬೆಂಗಳೂರು ನಗರ ಬೆಳೆಯುವುದನ್ನು ತಡೆಯುವುದಕ್ಕೆ ಕ್ರಮ ತೆಗೆದುಕೊಂಡು ಬೆಂಗಳೂರಿನಲ್ಲಿ ದೊಡ್ಡ ದೊಡ್ಡ ಕಾರ್ಖಾನೆಗಳನ್ನು ಸ್ಥಾಪನೆ ಮಾಡುವುದನ್ನು ನಿಲ್ಲಿಸಿದ್ದೇವೆ. ನಮ್ಮ ಆರ್ಥಿಕ ಪರಿಸ್ಥಿತಿ ಮತ್ತು ಇತರೆ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ವ್ಯವಸ್ಥಿತವಾಗಿ ನಗರ ಬೆಳೆಯುವಂತೆ ಮಾಡಲು ಕ್ರಮ ತೆಗೆದುಕೊಂಡಿದ್ದೇವೆ. ಇದರ ಬಗ್ಗೆ ಮೈಕ್ರೋ ಪ್ಲಾನ್ ಕೂಡ ತಯಾರು ಮಾಡಿದ್ದೇವೆ ಎದು ಹೇಳಿದ್ದೇನೆ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಏನೇನು ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೋ ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಪಿ. ಎಂ. ಡಿ. ಯಲ್ಲಿ ನಾನ್–ಅಫಿಶಿಯಲ್ ಸದಸ್ಯರೂ ಇರಬೇಕೆಂದು ಹೇಳಿದ್ದಾರೆ. ಪ್ರಿಪರೇಟರಿ ವರ್ಕ್ ಮಾಡುವುದಕ್ಕೆ ಕ್ರಮ ಈಗ ತೆಗೆದುಕೊಳ್ಳಲಾಗಿದೆ. ಕಾನೂನು ಜಾರಿಗೆ ಬಂದಮೇಲೆ ನಾನ್–ಅಫಿಷಿಯಲ್ಸ್ ಮತ್ತು ಅಫಿಷಿಯಲ್ಸ್ ಇಬ್ಬರೂ ಅದರಲ್ಲಿರುತ್ತಾರೆ. ಹೈರೈಸ್ ಬಿಲ್ಡಿಂಗ್ ವಿಚಾರದಲ್ಲಿ ಸುಪ್ರೀಂ ಕೋರ್ಟ್ ತೀರ್ಮಾನದ ಪ್ರಕಾರ ನಡೆದುಕೊಳ್ಳುತ್ತೇವೆ. ಸ್ಲಮ್ಸ್ ಬಗ್ಗೆ ಸರ್ಕಾರದ ನಿಲುವನ್ನು ಕೇಳಿದ್ದಾರೆ. ಈಗಾಗಲೇ ಅದನ್ನು ನಾನು ಹೇಳಿದ್ದೇನೆ. ೧೫–೨೦ ವರ್ಷಗಳಿಂದ ಇರತಕ್ಕ ಸ್ಲಮ್‌ಗಳನ್ನು ನಾವು ತೆಗೆದಿಲ್ಲ. ತೆಗೆಯಬೇಕು ಎಂದಾಗ ಅವರಿಗೆ ಜನತಾ ಮನೆಗಳ ಯೋಜನೆ ರೀತಿಯಲ್ಲಿ ಮನೆಗಳನ್ನು ಕೊಡುವುದಕ್ಕೆ ಸರ್ಕಾರ ಸಿದ್ಧವಾಗಿದೆ. ಆದರೆ ಅದನ್ನು ಗ್ರೀನ್‌ಬೆಲ್ಟ್

ಏರಿಯಾದಿಂದ ಹೊರಗೆ ಕೊಡುತ್ತೇವೆ. ಅವರು ಅಲ್ಲಿಗೆ ಹೋದರೆ ನಮ್ಮ ಅಭ್ಯಂತರ ಇಲ್ಲ ಅವರೊಬ್ಬರೇ ಮಾನವೀಯತೆ ದೃಷ್ಟಿಯಿಂದ ನೋಡುತ್ತಾರೆ ಎಂದು ನಾನು ಅಪಾದನೆ ಮಾಡುವುದಿಲ್ಲ ಬೆಂಗಳೂರು ನಗರ ಸ್ವಚ್ಛ ರೀತಿಯಲ್ಲಿರುವುದಕ್ಕೆ ಅನಗತ್ಯವಾಗಿ ಸ್ಲಮ್‌ಗಳು ಬೆಳೆಯುವುದಕ್ಕೆ ಅವಕಾಶ ಕೊಡದ ರೀತಿಯಲ್ಲಿ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ. ಎಲ್ಲಿ ಸ್ಲಮ್‌ಗಳನ್ನು ಬದಲಾಯಿಸಿದ್ದೇವೆ ಅಲ್ಲಿ ಅವರಿಗೆ ನಿವೇಶನವನ್ನು ಕೊಟ್ಟಿದ್ದೇವೆ. ನಾನು ಆ ಬಗ್ಗೆ ವಿವರಕ್ಕೆ ವಿತಕ್ಕೆ ಹೋಗಲಿಲ್ಲ ಎಂದರೆ ಇದರ ಬಗ್ಗೆ ತಾವು ಒಂದು ಹೇಳುವುದು, ನಾನು ಒಂದು ಹೇಳುವುದು ಆಗುತ್ತದೆ. ಈ ವಿಚಾರ ಕೋರ್ಟಿನಲ್ಲಿ ರುವುದರಿಂದ ಸಬ್-ಜ್ಯುಡೀಸ್ ಆಗುತ್ತದೆ ಎಂಬ ಕಾರಣದಿಂದ ಹೇಳಲಿಲ್ಲ. Bilateral projec are in consideration of the Government of India. ಕೇಂದ್ರ ಸರ್ಕಾರದಿಂದ ಕ್ಲಿಯರೆನ್ಸ್ ಬಂದತಕ್ಷಣ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಧರ್ಮಸಿಂಗ್.—ನಾನು ಬೆಂಗಳೂರಿನಲ್ಲಿರುವ ಕೊಳಚೆ ಪ್ರದೇಶದ ಬಗ್ಗೆ ಹೇಳಿದ್ದೇನೆ ಬೆಂಗಳೂರಿನಲ್ಲಿ ಐದಾರು ಲಕ್ಷ ಜನ ಇರಬಹುದು. ಬಡವರು ಏನು ಅಲ್ಲಿ ವಾಸವಾಗಿದ್ದಾರೆ ಅವರ ಬಗ್ಗೆ ಮಾನವೀಯತೆ ದೃಷ್ಟಿಯಿಂದ ನೋಡಬೇಕು. ಬುಲ್ಡೋಜಿಂಗ್ ಮಾಡುವುದು ಸರಿಯಾದುದಲ್ಲ ಕೇವಲ ಕೆಲವು ವ್ಯಕ್ತಿಗಳಿಗೆ ಲಾಭ ಆಗತಕ್ಕ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬಾರದು. ಬಡವರ ಬಗ್ಗೆ ಮಾನವೀಯತೆ ಮತ್ತು ಅನುಕಂಪ ಇರಬೇಕು. ಬಡವರ ಸಮಸ್ಯೆ ಬಗ್ಗೆ ಕರುಣೆ ಇರಬೇಕು.

ಅಧ್ಯಕ್ಷರು.—ಉತ್ತರ ಹೇಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಏನು ಹೇಳುವುದು ? ಏನೂ ಬೇಕಾಗಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್ —ಮಾನ್ಯ ಅಧ್ಯಕ್ಷರೆ, ಈ ರಿಪೋರ್ಟರ್ಸ್ ಬಗ್ಗೆ ಮಾನ್ಯ ಮಂತ್ರಿಗಳು ತಮಗೇ ಬಿಟ್ಟರು. ಈಗ ಬಹಳ ಇಕ್ಕಟ್ಟಿನ ಪರಿಸ್ಥಿತಿ ಬಂದಿದೆ. ನಿಮ್ಮನ್ನು ಪ್ರಶ್ನೆ ಮಾಡುವಹಾಗಿಲ್ಲ ಭಾರ ಎಲ್ಲಾ ನಿಮ್ಮ ಮೇಲೇ ಹಾಕಿದ್ದಾರೆ. ಇದನ್ನು ಹೇಗೆ ಬಗೆಹರಿಸಬೇಕು ? ತಮ್ಮ ಚೇಂಬರ್‌ನಲ್ಲಿ ಬಗೆಹರಿಸಬೇಕೋ ಏನೋ ಗೊತ್ತಿಲ್ಲ. ನಾನು ಈ ವಿಚಾರ ಏತಕ್ಕೆ ಎತ್ತಿದೆ ಎಂದರೆ ಮೇಲ್ಮನೆಯಲ್ಲಿ ಕೂಡ ಇದರ ಬಗ್ಗೆ ಹಿಂದೆ ಚರ್ಚೆಯಾಗಿ ಮಾನ್ಯ ಮಂತ್ರಿಗಳು ಭರವಸೆ ಕೊಟ್ಟಿದ್ದಾರೆ. ಮಾಡು ತ್ತೇವೆ ಎಂಬ ಭರವಸೆ ಇದೆ. ಅದನ್ನು ಕಾರ್ಯಗತಗೊಳಿಸುತ್ತೇನೆ ಎಂದು ಹೇಳಬೇಕೇ ವಿನಃ ಇದನ್ನು ನಿಮಗೇ ಬಿಡುತ್ತೇನೆ ಎಂದರೆ ತಪ್ಪಿಸಿಕೊಂಡು ಹೋಗುವ ಮಾತಾಗುತ್ತದೆ. ಇದು ಸರಿಯಲ್ಲ. ಮೇಲ್ಮನೆಯಲ್ಲಿ ನಡೆದ ನಡವಳಿಕೆ ಗಳನ್ನು ನೋಡಿ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.- ವಿಧಾನ ಮಂಡಲ ಕಾರ್ಯಾಲಯ ಬೇರೆ ಆದಮೇಲೆ ಸ್ಪೆಷಲ್ ಬೋರ್ಡ್ ಮಾಡಿದ್ದೇವೆ. ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಸ್ಪೆಷಲ್ ಬೋರ್ಡಿಗೆ ಅಧಿಕಾರ ಇದೆ ಅದರಲ್ಲಿ ಮಾನ್ಯ ಅಧ್ಯಕ್ಷರೂ ಇದ್ದಾರೆ. ಅಧ್ಯಕ್ಷರು ಯಾವ ತೀರ್ಮಾನ ತೆಗೆದು ಕೊಳ್ಳುತ್ತಾರೋ ಅದನ್ನು ಕಾರ್ಯಗತ ಮಾಡುವುದಕ್ಕೆ ಸಿದ್ಧವಾಗಿದ್ದೇವೆ, ಅದರಂತೆ ನಡೆಯುತ್ತೇವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ ಎಸ್. ಕೃಷ್ಣನ್.—ಇನ್ನು ಅಲ್ಟರ್‌ನೇಟೀವ್ ಸೈಟ್ಸ್ ಬಗ್ಗೆ ಏನು ೧೦ ಪರ್ಸೆಂಟ್ ಇಟ್ಟಿ ದ್ದೀರೋ ಇದನ್ನು ೫೦ ಪರ್ಸೆಂಟ್ ಮಾಡಬೇಕು, ಇದರಲ್ಲಿ ಹಣದ ಪ್ರಶ್ನೆ ಬರುವುದಿಲ್ಲ. ಇದರಲ್ಲಿ ಹಣವನ್ನು ಅವರೇ ಕೊಡುತ್ತಾರೆ. ನೀವು ಅವರಿಗೆ ಅಲಾಟ್ ಮಾಡಿದ ಮೇಲೆ ಅಲಾಟ್‌ಮೆಂಟ್ ರೇಟನ್ನು ಅವರು ಪೇ ಮಾಡುತ್ತಾರೆ, ಇನ್ನು ಮೂರನೆಯದಾಗಿ, ಲೆಜಿಸ್ಲೇಚರ್‌ನ ರೀಸರ್ಚ್ ಸೆಕ್ಷನ್ ಮೆಂಟ್ ಈಗ ಮೇಲಕ್ಕೆ ಹೋಗಿದೆ, ಇಂದೆ ಅದು ಕೆಳಗೆ ಇದ್ದಾಗ ನಾವು ಅಲ್ಲಿ ಓದುವುದಕ್ಕೆ ಹೋಗುತ್ತಾ ಇದ್ದೆವು. ಈಗ ಅಲ್ಲಿ ಕುಳಿತುಕೊಳ್ಳುವುದಕ್ಕೇ ಜಾಗ ಇಲ್ಲ, ಹಾಗೂ ಅಲ್ಲಿ ಸರಿಯಾದ ವ್ಯವಸ್ಥೆ ಅಲ್ಲಿಯವರೆಗೇ ಇಲ್ಲ. ಇನ್ನು ನಮಗೆ ಎಲ್ಲಿ ಅಲ್ಲಿ ಓದುವುದಕ್ಕೆ ವ್ಯವಸ್ಥೆಯಾಗುತ್ತದೆ. ಆದ್ದರಿಂದ ಈ ಸ್ಟ್ಯಾಟಿಸ್ಟಿಕ್ಸ್ ಡಿಪಾರ್ಟ್ ಮೆಂಟನ್ನು ಬದಲಾವಣೆ ಮಾಡುವುದು ಬಹಳ ಮುಖ್ಯ, ಇನ್ನು ಅಲ್ಲಿ ಬಹಳ ವರ್ಷಗಳದ್ದು ಪೇಪರ್ ಕಟಿಂಗ್ಸ್ ಅಲ್ಲಿ ಇಲ್ಲ ಲೇಟೆಸ್ಟಂತೂ ಇಲ್ಲವೇ ಇಲ್ಲ. ಅಲ್ಲಿ ಸ್ವಲ್ಪ ಅವ್ಯವಸ್ಥೆ ಇದೆ. ಅದನ್ನು ಈಗ ಸರಿ ಮಾಡಬೇಕು. ಇನ್ನು ಅಲ್ಲಿ ನಮ್ಮಂತಹವರು ಹೋಗಿ ಕುಳಿತು ಓದುವುದಕ್ಕೆ ಸರಿಯಾದ ವ್ಯವಸ್ಥೆ ಮಾಡಿ ಅಲ್ಲಿ ಹೆಚ್ಚು ಸ್ಥಳಾವಕಾಶ ಒದಗಿಸಿಕೊಡಬೇಕು ಹಾಗೂ ನಮಗೆ ಹತ್ತಿರದಲ್ಲೇ ಇರುವ ಜಾಗದಲ್ಲಿ ಇದನ್ನು ಮಾಡಬೇಕು. ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಕೊಡಬೇಕು, ಇನ್ನು ನಾಲ್ಕನೆಯ

ದಾಗಿ ಬಿ. ಡಬ್ಲ್ಯು. ಎಸ್.ಎಸ್.ಬಿ. ಬಗ್ಗೆ ಡೈನಾಮಿಸಂ ರೀತಿಯಲ್ಲಿ ಕೆಲಸ ಮಾಡುವಂತೆ ಸಚಿವರು ಹೇಳಬೇಕು. ಅಲ್ಲಿ ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡುವ ಜನರನ್ನು ಕಂಡುಹಿಡಿಯಬೇಕೆಂದು ಹೇಳಿದ್ದೆ. ಹಾಗೂ ಅವರುಗಳ ಹೆಸರನ್ನೂ ಸಹಾ ಹೇಳಿದ್ದೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಏನೂ ಹೇಳಿಲ್ಲ,

ಶ್ರೀ ಎ, ಲಕ್ಷ್ಮೀಸಾಗರ್.— ಅಧ್ಯಕ್ಷರೇ, ರಿಪೋರ್ಟರ್ಸ್ ಬಗ್ಗೆ ನಾನು ಆಗಲೇ ಉತ್ತರ ಹೇಳಿದ್ದೇನೆ. ಇನ್ನು ಆಲ್ಟರ್ನೇಟೀವ್ ಸ್ಕೈಟ್‌ಗಳನ್ನು ಇನೂ ಜಾಸ್ತಿ ಮಾಡಬೇಕೆಂದು ಹೇಳಿದ್ದಾರೆ. ಇದರ ಬಗ್ಗೆ ನಾನು ಅಧಿಕಾರಿಗಳನ್ನು ಕರೆದು ಮಾತನಾಡಿ ಎಷ್ಟು ಜಾಸ್ತಿ ಮಾಡುವುದಕ್ಕೆ ಸಾಧ್ಯ ಎಂಬುದನ್ನು ನಾವು ಅವರೊಡನೆ ವಿಚಾರ ಮಾಡುತ್ತೇನೆ, ಇದಕ್ಕೆ ಎರಡೂ ಕಡೆಯಿಂದಲೂ ಕಷ್ಟ ಇದೆ. ಇನ್ನು ವಿಧಾನಮಂಡಲದ ರಿಸರ್ಚ್ ಶಾಖೆಯ ಬಗ್ಗೆ ಹೇಳಿದ್ದಾರೆ. ಅಲ್ಲಿ ಓದುವ ವ್ಯವಸ್ಥೆ ಸರಿಯಾಗಿಲ್ಲವೆಂದು ಹೇಳಿದ್ದಾರೆ. ಸನ್ಮಾನ್ಯ ಅಧ್ಯಕ್ಷರೇ, ನೀವೂ ನಾವೂ ಸೇರಿ ಏನಾದರೂ ಪರಿಹಾರವನ್ನು ಕಂಡು ಹಿಡಿಯುವುದಕ್ಕೆ ಪ್ರಯತ್ನ ಮಾಡೋಣ. ಇನ್ನು ಡೈನಾಮಿಸಂ ಬಗ್ಗೆ ಹೇಳಿದ್ದಾರೆ. ನನಗೆ ಜೀವನದಲ್ಲಿ ಯಾವುದೇ ಚಿಂತೆ ಇಲ್ಲ. ಈ ಕೆಲಸವನ್ನು ನಾನು ಈಗ ಮಾಡುತ್ತಿದ್ದೇನೆ. ನಿದ್ರೆ ಒಂದನ್ನು ಬಿಟ್ಟು ಬೇರೆ ಸಮಯದಲ್ಲಿ ನಾನು ಏನು ಕೆಲಸ ಮಾಡುವುದಕ್ಕೆ ಒಪ್ಪಿಕೊಂಡಿದ್ದೇನೆ ಅದನ್ನು ಮಾಡುವ ವ್ಯವಸ್ಥೆ ಮಾಡುತ್ತೇನೆ, ಆದುದರಿಂದ ಹೀಗೀಗೆ ಮಾಡಬೇಕೆಂದು ಏನು ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ ಆರೀತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.— ಅಧ್ಯಕ್ಷರೇ, ನಾನು ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಸಂಖ್ಯೆಯನ್ನು ಹೆಚ್ಚು ಮಾಡಬೇಕು, ಬೇಕಾದಷ್ಟು ಕೇಸ್‌ಗಳು ಪೆಂಡಿಗ್‌ನಲ್ಲಿವೆ ಎಂದು ಹೇಳಿದ್ದೆ. ಹಾಗೂ ಉಚಿತ ನ್ಯಾಯ ವ್ಯವಸ್ಥೆ ಬಗ್ಗೆ ಕಕ್ಷಿದಾರರಿಗೆ ಒಳ್ಳೆಯ ವಕೀಲರು ಸಿಗಬೇಕು. ಇದಕ್ಕೆ ಯಾರೋ ಲಾಯರ್ ಬಂದರೆ ಅದು ಚೆನ್ನಾಗಿ ಆಗುವುದಿಲ್ಲ. ಇನ್ನು ಶಾಸಕಾಂಗವನ್ನು ಇಂಡಿಪೆಂಡೆಂಟ್ ಮಾಡಿದ್ದಿರಿ. ಇವರಿಗೆ ಫೈನಾನ್ಶಿಯಲ್ ಪವರ್ ಕೊಟ್ಟಿಲ್ಲ. ಇದರ ಬಗ್ಗೆ ತಾವು ವಿವರಣೆ ನೀಡಬೇಕು. ಇನ್ನು ಪ್ರೆಸ್ ರೂಮ್ ಡಂಜನ್ ತರಹವಾಗಿದೆ, ಇದನ್ನು ಸರಿ ಮಾಡಿ ಮತ್ತೆ ನಮ್ಮ ಉಪಯೋಗಕ್ಕೆ ಸಿದ್ಧ ಮಾಡಿ ಕೊಡಬೇಕು. ಇನ್ನು "ಭಾಗ್ಯ ಮಂದಿರ" ಸ್ಕೀಂನಲ್ಲಿ ಬಹಳ ಜನರಿಗೆ ಮನೆಗಳನ್ನು ಕೊಟ್ಟಿದ್ದೀರಿ, ಇದನ್ನು ಇನ್ನು ಜಾಸ್ತಿ ಮಾಡಬೇಕೆಂದು ಹೇಳುತ್ತೇನೆ. ಇನ್ನು ಕೊಳಚೆ ಪ್ರದೇಶದವರ ಬಗ್ಗೆ ಏನು ೧೫ ವರ್ಷಗಳ ಮಿತಿ ಹಾಕಿದ್ದೀರೋ ಅದನ್ನು ತೆಗೆದು ಯಾರು ಯಾರನ್ನು ಹೊರಕ್ಕೆ ಹಾಕಿದ್ದೀರಿ ಅವರೆಲ್ಲರಿಗೂ ಗ್ರೀನ್ ಬೆಲ್ಟ್‌ನ ಹೊರಗಾಗಲಿ ಅಥವಾ ಒಳಗಾಗಲೀ ವಸತಿ ಸೌಕರ್ಯ ಒದಗಿಸುವ ವ್ಯವಸ್ಥೆಯಾಗಬೇಕು. ಇನ್ನು ಮುಂಬಾಗಿಲು ಮತ್ತು ಶ್ರೀನಿವಾಸಪುರದಲ್ಲಿ ಕೋರ್ಟ್ ಪ್ರಾರಂಭಿಸಲು ಪರ್ಮಿಷನ್ ಕೊಟ್ಟಿದ್ದು ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಕೊಟ್ಟಿದ್ದರೂ ಫೈನಾನ್ಶಿಯಲ್ ಸ್ಯಾಂಕ್ಷನ್‌ಗೋಸ್ಕರ ಅದು ಹಾಗೇ ನಿಂತಿದೆ. ಇದನ್ನು ಮಾಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎ ಲಕ್ಷ್ಮೀಸಾಗರ್,— ಅಧ್ಯಕ್ಷರೇ, ಕೋರ್ಟ್ ಸ್ಥಾಪನೆ ಬಗ್ಗೆ ಹೈಕೋರ್ಟಿನವರು ತಮ್ಮ ತೀರ್ಮಾನವನ್ನು ಹೇಳಬೇಕು. ಅಲ್ಲಿ ಸಾಕಷ್ಟು ಕೇಸ್ ಇದೆಯೋ ಇಲ್ಲವೋ ಎಂಬುದರ ಬಗ್ಗೆ ನಾರ್ಮ್ಸ್ ಫಿಕ್ಸ್ ಮಾಡಿದ್ದಾರೆ, ಅಲ್ಲಿ ಕೋರ್ಟ್ ಮಾಡುವುದು ಅವಶ್ಯಕ ಇದೆ ಎಂದು ಅವರು ಒಪ್ಪಿಗೆ ಕೊಟ್ಟರೆ ನಾವು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇವತ್ತು ಇನ್ನೂ ೩೨ ತಾಲ್ಲೂಕುಗಳಲ್ಲಿ ಕೋರ್ಟ್ ಆಗಬೇಕಾಗಿದೆ, ಎಲ್ಲ ತಾಲ್ಲೂಕುಗಳಲ್ಲಿ ಒಂದೇ ವರ್ಷ ಮಾಡುವುದಕ್ಕೆ ಕಷ್ಟವಾಗುತ್ತದೆ. ಹಣಕಾಸಿನ ವ್ಯವಸ್ಥೆಯನ್ನು ನೋಡಿಕೊಂಡು ವರ್ಷಕ್ಕೆ ೪–೫ ಮಾಡುವ ವ್ಯವಸ್ಥೆ ಇದೆ. ಈಗ ೪ಕ್ಕೆ ಪರ್ಮಿಷನ್ ಕೊಟ್ಟಿದ್ದೇವೆ. ಇವು ಆದ ಮೇಲೆ ಆದ್ಯತೆ ಮೇರೆಗೆ ಇವುಗಳನ್ನೂ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನು ಹೈಕೋರ್ಟಿನ ನ್ಯಾಯಾಧೀಶರ ಸಂಖ್ಯೆ ಹೆಚ್ಚಿಸುವ ಬಗ್ಗೆ ಹಾಗೂ ಆರಿಯರ್ಸ್ ಕ್ಲಿಯರೆನ್ಸ್ ಮಾಡುವ ಬಗ್ಗೆ ಹೇಳಿದ್ದಾರೆ. ಕ್ಲಿಯರೆನ್ಸ್ ವಿಷಯವಾಗಿ ಸಭೆ ಕರೆದಿದ್ದು ಆಗ ಈ ಬಗ್ಗೆ ನಾನು ಅಲ್ಲಿ ಪ್ರಸ್ತಾಪ ಮಾಡುತ್ತೇನೆ. ಇನ್ನು ಲೀಗಲ್ ಏಡ್‌ನಲ್ಲಿ ಒಳ್ಳೆಯ ವಕೀಲರು ಬೇಕೆಂದು ಹೇಳಿದ್ದಾರೆ. ಕೋಲಾರದಲ್ಲಿ ಯಾವ ಯಾವ ಒಳ್ಳೆಯ ವಕೀಲರು ಇದ್ದಾರೆ ಅಂಥವರ ಬಗ್ಗೆ ಒಂದು ಲಿಸ್ಟನ್ನು ಕಳುಹಿಸಿಕೊಡಲಿ ಅವರನ್ನೇ ನೇಮಿಸುವ ವ್ಯವಸ್ಥೆ ಮಾಡುತ್ತೇನೆ. ಇನ್ನು ಫೈನಾನ್ಸಿನ ಬಗ್ಗೆ ಫೈನಾನ್ಸ್ ಡಿಪಾರ್ಟ್‌ಮೆಂಟ್ ಕನ್‌ಸಲ್ಟ್ ಮಾಡುವ ಬಗ್ಗೆ ಹೇಳಿದ್ದಾರೆ, ಇವತ್ತು ಹೈಕೋರ್ಟಿನಲ್ಲೂ ಸಹ ಒಂದು ಪೋಸ್ಟ್ ಕ್ರಿಯೇಟ್ ಮಾಡಬೇಕಾದರೆ ಅವರು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನ ಕನ್‌ಕರೆನ್ಸ್ ತೆಗೆದು ಕೊಳ್ಳಬೇಕು. ಆ ಒಂದು ಅಧಿಕಾರವನ್ನು ಅವರಿಗೆ ಕೊಟ್ಟಿದ್ದೇವೆ. ಈ ಬಗ್ಗೆ ಏನು ಗೆಜೆಟ್

ನೋಟಿಫಿಕೇಷನ್ ಮೂಲಕ ಆರ್ಡರ್ ಮಾಡಲಾಗಿದೆ ಅದರ ಪ್ರತಿಯನ್ನು ನಾನು ಅವರಿಗೆ ಕೊಡುತ್ತೇನೆ, ಅದನ್ನು ಅವರು ಪರಾಂಭರಿಸಬೇಕೆಂದು ಹೇಳುತ್ತೇನೆ. ಅಧ್ಯಕ್ಷರೇ, ಪ್ರೆಸ್ ರೂಮ್ ಬಗ್ಗೆ ನಾವೂ ನೀವೂ ಏನು ಮಾಡಬೇಕು ಎನ್ನುವ ಬಗ್ಗೆ ವಿಚಾರ ಮಾಡೋಣ. ಇನ್ನು ಭಾಗ್ಯ ಮಂದಿರ ಕಡಿಮೆ ಆಗಿದೆ. ಇದನ್ನು ಜಾಸ್ತಿ ಮಾಡುವುದಕ್ಕೆ ಮುಂದಿನ ವರ್ಷ ಪ್ರಯತ್ನ ಮಾಡುತ್ತೇನೆ. ಇನ್ನು ಕೊಳಚೆ ಪ್ರದೇಶದಲ್ಲಿನ ಜನರಿಗೆ ಅಲ್‌ಟರ್ನೇಟೀವ್ ಸೈಟ್ ಕೊಡುವ ಬಗ್ಗೆ ಹೇಳಿದ್ದಾರೆ. ೧೫-೨೦ ವರ್ಷಗಳಿಂದ ಯಾರು ಇದ್ದಾರೆ ಅವರಿಗೆ ಬೇಗನೆ ಜಾಗವನ್ನು ಕೊಟ್ಟ ನಂತರವೇ ತೆಗೆಯತಕ್ಕ ತೀರ್ಮಾನ ತೆಗೆದು ಕೊಂಡಿದ್ದೇವೆ, ಬೆಂಗಳೂರಿನ ಗ್ರೀನ್ ಬೆಲ್ಟ್‌ನ ಹೊರಗಡೆ ಜನತಾ ಮನೆಗಳ ರೀತಿಯಲ್ಲಿ ಮನೆ ಕಟ್ಟಿಸ ತಕ್ಕ, ೫೦೦ ರೂ. ವೆಚ್ಚದಲ್ಲಿ ಕೊಡತಕ್ಕ ಒಂದು ವ್ಯವಸ್ಥೆಯನ್ನು ಮಾಡುತ್ತೇವೆಂದು ಈ ಮೊದಲೇ ಹೇಳಿದ್ದೇನೆ.

ಶ್ರೀ ವೇದಾಂತ ಹೆಮ್ಮಿಗೆ.— ಅಧ್ಯಕ್ಷರೇ, ಮೈಸೂರು ನಗರದಲ್ಲಿ ಸುಮಾರು ೧೫ ಅನಧಿಕೃತ ಬಡಾವಣೆಗಳು ಇವೆ. ಮಾನ್ಯ ಧರ್ಮಸಿಂಗ್ ಅವರು ಮಂತ್ರಿಗಳಾಗಿದ್ದಾಗ್ಗೇ ಮಾನವೀಯತೆಯ ದೃಷ್ಟಿ ಯಿಂದ ಇವನ್ನು ರೆಗ್ಯುಲರೈಸ್ ಮಾಡಬೇಕೆಂದು ಹೇಳಿ ಸಾಕಷ್ಟು ಕಾರ್ಯಕ್ರಮ ತೆಗೆದುಕೊಂಡಿದ್ದರು. ಆಗ ಟ್ರಸ್ಟ್ ಬೋರ್ಡ್‌ನವರು, ಟೌನ್ ಪ್ಲಾನಿಂಗ್‌ನವರು ಮತ್ತು ಲೋಕಲ್ ಬಾಡಿ ಎಂದು ಏನು ಇತ್ತೋ ಅವರುಗಳು ಇದನ್ನು ರೆಗ್ಯುಲರೈಸ್ ಮಾಡಬೇಕೆಂದು ಪ್ರಯತ್ನ ಮಾಡಿದರು. ಕಳೆದ ವರ್ಷದಲ್ಲಿ ನಾನು ಟೌನ್ ಪ್ಲಾನಿಂಗ್ ಛೇರ್ಮನ್ ಆಗಿದ್ದಾಗ, ಅಲ್ಲಿ ಟ್ರಸ್ಟ್ ಬೋರ್ಡ್ ಇದ್ದಾಗ ಕಾರ್ಪೊರೇಷನ್ ರವರಿಗೆ ಒತ್ತಾಯ ಮಾಡಿ ಈ ಅನಧಿಕೃತ ಕಟ್ಟಡಗಳಿಗೆ ನೀರು, ದೀಪದ ವ್ಯವಸ್ಥೆ ಒದಗಿಸಬೇಕೆಂದು ಹೇಳಿ ತೀರ್ಮಾನ ಮಾಡಿ ವಿದ್ಯುತ್ ಇಲಾಖೆಗೂ ಸಹಾ ಕಾಗದವನ್ನು ಬರೆಯಲಾಗಿತ್ತು. ಆ ನಂತರ ವಿದ್ಯುತ್ ಇಲಾಖೆಯವರು ಹಲವು ಬಡಾವಣೆಗಳಿಗೆ ದೀಪವನ್ನು ಕೊಟ್ಟಿದ್ದಾರೆ, ಆದರೆ ಕಳೆದ ೧೫ ದಿವಸಗಳ ಹಿಂದೆ ಯಾರೋ ಇಲಾಖೆಯ ಅಧಿಕಾರಿಗಳು ಅಲ್ಲಿಗೆ ದೀಪ ಕೊಡಬಾರದು ಎಂದು ವಿದ್ಯುತ್ ಇಲಾಖೆಯವ ರಿಗೆ ಕಾಗದ ಬರೆದಿದ್ದಾರೆ ಎಂದು ಸಮಾಚಾರ ಬಂದಿದೆ. ಹಿಂದೆ ಅಷ್ಟೆಲ್ಲಾ ಕಷ್ಟಪಟ್ಟು ಬಡಾವಣೆ ಮಾಡು ವಾಗ ರಸ್ತೆ ಮಾಡುವಾಗ ಮನೆಗಳು ಅಡ್ಡಬಂದರೆ ಅವನ್ನು ಒಡೆಯುವುದಕ್ಕೂ ಒಪ್ಪಿಕೊಂಡಿದ್ದು, ನಂತರ ಕೆಲವು ಬಡಾವಣೆಗಳಿಗೆ ದೀಪವನ್ನು ಕೊಟ್ಟಿದ್ದು ಈಗ ಇದ್ದಕ್ಕಿದ್ದ ಹಾಗೆ ಮಧ್ಯದಲ್ಲಿ ದೀಪ ಕೊಡಬೇಡಿ ಎಂದು ತೀರ್ಮಾನ ಮಾಡುವುದು ಸರಿಯಲ್ಲ ಇದು ಮಾನವೀಯ ದೃಷ್ಟಿಯ ವಿರುದ್ಧ ತೀರ್ಮಾನವಾ ಗಿದೆ. ಈ ಬಗ್ಗೆ ಸಂಬಂಧಪಟ್ಟ ಮಂತ್ರಿಗಳ ಹಾಗೂ ಮುಖ್ಯಮಂತ್ರಿಯವರ ಜೊತೆ ಮಾತನಾಡಿದ್ದರೂ ಆ ಬಗ್ಗೆ ಮೈಸೂರಿನಲ್ಲಿ ವ್ಯವಸ್ಥೆ ಆಗಿಲ್ಲ. ಆದ್ದರಿಂದ ಈಗ ಏನು ಆದೇಶ ಇದೆ ಅದನ್ನು ವಾಪಸ್ ತೆಗೆದುಕೊಂಡು ಈಗ ಇನ್ನುಳಿದ ಮನೆಗಳಿಗೆ ಏನು ದೀಪದ ವ್ಯವಸ್ಥೆ ಆಗಬೇಕಾಗಿದೆ. ಅದನ್ನು ಬೇಗ ಒದಗಿಸುವ ವ್ಯವಸ್ಥೆ ಆಗಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ ಲಕ್ಷ್ಮೀಸಾಗರ್ — ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ. ಆ ಬಗ್ಗೆ ಪತ್ರ ಬರೆದು ಎಲ್ಲ ವಿವರಣೆಗಳನ್ನು ತರಿಸಿಕೊಳ್ಳುತ್ತೇನೆ. ಅಲ್ಲಿ ಅನಧಿಕೃತವಾಗಿ ಎದ್ದಿರುವ ಬಡಾ ವಣೆಗಳನ್ನು ಅಧಿಕೃತ ಮಾಡಬೇಕೆಂದು ಹೇಳಿದ್ದಾರೆ. ಆ ಬಗ್ಗೆ ವಿವರವನ್ನು ತರಿಸಿಕೊಂಡು ನಾನು ನೋಡುತ್ತೇನೆ. ಹಾಗೂ ಮೈಸೂರಿನ ಶಾಸಕರನ್ನೂ ಸಹಾ ಕರೆದು ಆ ಬಗ್ಗೆ ಸೂಕ್ತವಾದ ಕ್ರಮವನ್ನು ಯಾವ ರೀತಿ ಮಾಡುವುದರಿಂದ ಜನರಿಗೆ ಅನುಕೂಲ ಆಗುತ್ತದೆ ಎಂಬುದನ್ನು ಗಮನದಲ್ಲಿ ಇಟ್ಟು ಕೊಂಡು ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆಂದು ನಾನು ಮೊದಲೇ ಹೇಳಿದ್ದೇನು ಹಾಗೂ ಈಗಲೂ ಹೇಳುತ್ತೇನೆ. ಇವತ್ತು ಅಲ್ಲಿ ದೀಪವನ್ನು ಕೊಡುತ್ತಿಲ್ಲವೆಂದು ಹೇಳಿದರು. ಅವರ ಬಗ್ಗೆ ನಾನು ವಿಚಾರ ಮಾಡುತ್ತೇನೆ ಹೊಸದಾಗಿ ಕೊಡುವುದನ್ನು ನಿಲ್ಲಿಸಿದ್ದಾರೆಂದು ಮಾನ್ಯ ಸದಸ್ಯರು ಹೇಳಿದರು.

ಶ್ರೀ ವೇದಾಂತ ಹೆಮ್ಮಿಗೆ — ಈಗಾಗಲೇ ಹಲವು ಮನೆಗಳಿಗೆ ಕೊಟ್ಟಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.— ನಾನು ಅದನ್ನು ವಿಚಾರಿಸುತ್ತೇನೆ.

ಶ್ರೀ ಎಸ್. ಪುಟ್ಟಸ್ವಾಮಿ — ಅಧ್ಯಕ್ಷರೇ, ಚಾಮರಾಜನಗರದ ರಾಮಸಮುದ್ರಂ ಟೌನ್ ವಾಟರ್ ಸಪ್ಲೈ ಮೊದಲ ಹಂತದಲ್ಲಿ ಹಾಕಿದ ಕ್ಯಾಸ್ಟ್ ಐರನ್ ಪೈಪನ್ನು ತೆಗೆಯದೇ ೨ನೇ ಹಂತದ ನೀರನ್ನು ಆ ಹಳೇ ಪೈಪ್‌ನಲ್ಲೇ ಸರಬರಾಜು ಮಾಡಿದ್ದರಿಂದ ೨ನೇ ಹಂತದ ನೀರು ಸರಬರಾಜಿನಲ್ಲಿ ತೊಂದರೆಯಾದ್ದರಿಂದ ನಮ್ಮ ಟೌನಿಗೆ ನೀರಿನ ಕೊರತೆ ಬಹಳ ಆಗಿದೆ. ಹಾಗೂ ಕಳೆದ ವರ್ಷ ಹಾಗೂ ಆಚೆ ವರ್ಷ ಅಲ್ಲಿ ಕೊಳವೆ ಬಾವಿಗಳನ್ನು ಹಾಕಿಸಬೇಕೆಂದು ಮಾನ್ಯ ಮಂತ್ರಿಗಳಿಗೆ ಪತ್ರ ಬರೆದಿದ್ದೆ.

ಕಳೆದ ಮಾರ್ಚ್ ತಿಂಗಳಲ್ಲಿ ಕಾಲಿಂಗ್ ಅಟೆನ್ಷನ್ ಮೂಲಕ ಈ ವಿಷಯ ಪ್ರಸ್ತಾಪ ಮಾಡಿದ್ದರ ಫಲವಾಗಿ ಮಾನ್ಯ ಮಂತ್ರಿಗಳು ಭರವಸೆಯನ್ನು ಸಹಾ ಕೊಟ್ಟಿದ್ದಾರೆ. ಈ ಭರವಸೆಯನ್ನು ಪೂರೈಸಬೇಕೆಂದು ಹೇಳುತ್ತೇನೆ. ಇವತ್ತು ರಾಮಸಮುದ್ರಂ ಟೌನ್‌ನಲ್ಲಿ ೫೦ ಸಾವಿರ ಜನಸಂಖ್ಯೆ ಇದೆ. ಮೈಸೂರು ಜಿಲ್ಲೆಯಲ್ಲೇ ಮೈಸೂರು ನಗರವನ್ನು ಬಿಟ್ಟರೆ ಚಾಮರಾಜ ನಗರದ ರಾಮಸಮುದ್ರಮ್ ಅತಿ ದೊಡ್ಡ ನಗರವಾಗಿದೆ. ರಾಮಸಮುದ್ರಂನ ಒಳಚರಂಡಿ ವ್ಯವಸ್ಥೆಯ ನೀಲಿ ನಕ್ಷೆ ತಯಾರಾಗಿದೆ. ಈ ಒಂದು ವ್ಯವಸ್ಥೆ ಬಗ್ಗೆ ಸರ್ಕಾರ ಮಂಜೂರಾತಿ ಕೊಡಬೇಕೆಂದು ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಎರಡನೆಯದಾಗಿ ಸಿವಿಲ್ ಜಡ್ಜ್ ಕೋರ್ಟ್‌ನ್ನು ಸ್ಥಾಪಿಸುವುದಕ್ಕೆ ಹೈಕೋರ್ಟಿನಿಂದ ಒಂದು ವರದಿ ಬಂದಿದೆಯಂತೆ. ಈಗ ಅಲ್ಲಿ ಕಟ್ಟಡ ಇದೆ. ಹಿಂದೆ ಮಾನ್ಯ ಮಂತ್ರಿಯವರು ಅಲ್ಲಿ ಮುನ್ಸೀಫ್ ಮ್ಯಾಜಿಸ್ಟ್ರೇಟ್ ಕೋರ್ಟ್‌ನ್ನು ಉದ್ಘಾಟನೆ ಮಾಡತಕ್ಕ ಸಂದರ್ಭದಲ್ಲಿ ಸಿವಿಲ್ ಜಡ್ಜ್ ಕೋರ್ಟ್‌ನ್ನು ಸ್ಥಾಪಿಸುವ ವಿಚಾರವನ್ನು ಪರಿಶೀಲಿಸುತ್ತೇನೆಂದು ಭರವಸೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ಈಗ ಅದನ್ನು ಪರಿಶೀಲಿಸುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರಿಗೆ ಈಗಾಗಲೇ ಗೊತ್ತಿರಬಹುದು. ಇದಕ್ಕೆ ಮುಂಚಿತವಾಗಿ ಈ ಸಿವಿಲ್ ಕೋರ್ಟ್‌ನ ಸ್ಥಾಪನೆಯ ಬಗ್ಗೆ ವಾಸ್ತವಾಂಶ ಏನು ಎಂಬುದನ್ನು ಹೇಳಿದ್ದೇನೆ. ಮೊದಲನೆಯದಾಗಿ ಹೈಕೋರ್ಟ್‌ನವರು ತಮ್ಮ ಪರವಾನಗಿಯನ್ನು ಕೊಡುತ್ತಿಲ್ಲ. ತಮಗೆ ಗೊತ್ತಿರುವಂತೆ ಚಾಮರಾಜ ನಗರ ಮತ್ತು ನಂಜನಗೂಡು ಈ ಎರಡು ಕಡೆಗಳ ಪೈಕಿ ಎಲ್ಲಾದರೂ ಒಂದು ಕಡೆ ಸಿವಿಲ್‌ಕೋರ್ಟ್‌ನ್ನು ಸ್ಥಾಪಿಸಬೇಕೆಂದು ಕೋರಿಕೆ ಇದೆ ಆದರೆ ಹೈಕೋರ್ಟ್‌ನವರು ಇದರ ಬಗ್ಗೆ ಯಾವುದೇ ಒಂದು ಅಂತಿಮ ತೀರ್ಮಾನವನ್ನು ತೆಗೆದುಕೊಂಡಿಲ್ಲ. ಅವರು ತೀರ್ಮಾನ ತೆಗೆದುಕೊಂಡಮೇಲೆ ನಾವು ಇದನ್ನು ಯೋಚನೆ ಮಾಡುತ್ತೇವೆ. ಇನ್ನು ಯು.ಜಿ.ಡಿ. ಕಳುಹಿಸಿ ಎಂದು ಕೇಳಿದ್ದಾರೆ. ಅದನ್ನು ನಾನು ಪರಿಶೀಲನೆ ಮಾಡುತ್ತೇನೆ,

ಇನ್ನು ೧ ಮತ್ತು ೨ನೇ ಹಂತದಲ್ಲಿ ಕ್ಯಾಸ್ಟ್ ಐರನ್ ಪೈಪನ್ನು ಅಳವಡಿಸಿದ್ದಾರೆ ಎನ್ನುವಂಥ ವಿಚಾರವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಸದಸ್ಯರು ಬಂದು ನನ್ನನ್ನು ಭೇಟಿಯಾದರೆ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿಕೊಂಡು ಮಾತನಾಡುತ್ತೇನೆ. ಬೋರ್‌ವೆಲ್‌ಗಳನ್ನು ಸಾಕಷ್ಟು ಕೊಟ್ಟಿದ್ದೇವೆ. ಆದರೂ ಮಾನ್ಯ ಸದಸ್ಯರಿಗೆ ಸಮಾಧಾನ, ಸಂತೃಪ್ತಿ ಇಲ್ಲ. ನನಗೆ ತಿಳಿದಿರುವಂತೆ ಮೈಸೂರು ಜಿಲ್ಲೆಯಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಬೋರ್‌ವೆಲ್‌ಗಳನ್ನು ಹಾಕಿಸಿದ್ದೇವೆ. ಇನ್ನೂ ಹೆಚ್ಚಿಗೆ ಬೇಕೆಂದು ಮಾನ್ಯ ಸದಸ್ಯರು ಕೇಳುವುದಾದರೆ ಅವನ್ನು ಕೊಡಿಸಲು ಪ್ರಯತ್ನ ಮಾಡುತ್ತೇವೆ.

ಶ್ರೀ ಹೆಚ್. ಏಕಾಂತಯ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಡುತ್ತಾ ರಾಜ್ಯದಲ್ಲಿ ೩೨ ತಾಲ್ಲೂಕುಗಳಲ್ಲಿ ಮುನ್ಸಿಫ್ ಕೋರ್ಟ್‌ಗಳು ಇಲ್ಲವೆಂದು ಹೇಳಿದರು. ಆ ಪೈಕಿ ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ ೩ ತಾಲ್ಲೂಕುಗಳಲ್ಲಿ ಒಂದು ಕೋರ್ಟೂ ಕೂಡ ಇಲ್ಲ. ಆದ್ದರಿಂದ ಈ ಮೂರು ತಾಲ್ಲೂಕುಗಳಲ್ಲಿ ಎಲ್ಲಾದರೂ ಒಂದು ಕಡೆ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಕೋರ್ಟ್‌ನ್ನು ಸ್ಥಾಪಿಸುವ ವಿಚಾರವನ್ನು ಪರಿಶೀಲಿಸುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.— ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೊಂದು ಮುನ್ಸೀಫ್ ಕೋರ್ಟ್‌ನ್ನು ಸ್ಥಾಪಿಸಬೇಕೆಂಬುದು ಹಿಂದಿನ ಸರ್ಕಾರದ ಮತ್ತು ಇಂದಿನ ಸರ್ಕಾರದ ನಿಲುವು ಆಗಿದೆ. ಈಗ ೩೨ ತಾಲ್ಲೂಕುಗಳಲ್ಲಿ ಮುನ್ಸೀಫ್ ಕೋರ್ಟ್‌ಗಳು ಇಲ್ಲ ಹೈಕೋರ್ಟ್‌ನವರ ಅನುಮತಿ ಇದಕ್ಕೆ ಬೇಕಾಗಿದೆ. ಅವರಿಂದ ಅನುಮತಿ ಬಂದಮೇಲೆ ನಾವು ಮುಂದಿನ ವಿಚಾರವನ್ನು ಪರಿಶೀಲಿಸುತ್ತೇವೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೆ, ನಾನು ಮುಖ್ಯವಾಗಿ ಎರಡು ವಿಚಾರಗಳ ಬಗ್ಗೆ ಮಾತ್ರ ಮಾನ್ಯ ಮಂತ್ರಿಯವರಿಂದ ಸ್ಪಷ್ಟೀಕರಣ ಕೇಳಬಯಸುತ್ತೇನೆ. ಮೊದಲನೆಯದಾಗಿ ಅನಧಿಕೃತವಾಗಿ ಕಟ್ಟಿರತಕ್ಕ ಕಟ್ಟಡಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡಿ ಎಂದು ನಾನೇನೂ ಕೇಳುತ್ತಿಲ್ಲ. ಆದರೆ ನಗರಸಭೆ ಆದಾಯ ಯಾವರೀತಿ ಹೋಗುತ್ತಿದೆ ಎನ್ನುವ ಬಗ್ಗೆ ಹೇಳುತ್ತಿದ್ದೇನೆ, ಅನೇಕ ನಗರ ಸಭೆಗಳಲ್ಲಿ ಅನಧಿಕೃತ ಬಡಾವಣೆಗಳು ಬಂದಿರುವುದನ್ನು ಅನಧಿಕೃತ ಬಡಾವಣೆಗಳೆಂದು ಮಾಡಿದ್ದಾರೆ, ಸಾಮಾನ್ಯವಾಗಿ ತಮಗೆ ಗೊತ್ತಿರುವಂತೆ ಚುನಾವಣೆ ಸಂದರ್ಭ ಬಂದಾಗಲೆಲ್ಲಾ ಇಂಥ ಅನಧಿಕೃತ ಬಡಾವಣೆಗಳಿಗೆ ನಗರಸಭೆಯ ವತಿಯಿಂದ ನಲ್ಲಿ ಹಾಕಿಸುವುದು, ಲೈಟು ಕೊಡಿಸುವುದು, ಮುಂತಾದ

ಎಲ್ಲಾ ಸೌಲಭ್ಯಗಳನ್ನೂ ಒದಗಿಸಿಕೊಡುತ್ತಿದ್ದಾರೆ. ಆದರೆ ಆ ಪ್ರದೇಶದಲ್ಲಿರುವ ಮನೆಗಳಿಗೆ ಖಾತೆಯನ್ನು ಮಾಡಿಕೊಟ್ಟಿಲ್ಲದಿರುವುದರಿಂದ ನಗರಸಭೆಗೆ ಬರಬೇಕಾದ ಕಂದಾಯ ಬಾರದೆ ಕೋಟ್ಯಾಂತರ ರೂಪಾಯಿ ಪ್ರತಿಯೊಂದು ಕಾರ್ಪೊರೇಷನ್‌ಗೂ, ನಗರಸಭೆಗಳಿಗೂ ಇವತ್ತು ನಷ್ಟವಾಗುತ್ತಿದೆ. ಎಲ್ಲ ರೀತಿಯ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದರೂ ಕಳೆದ ೨೦–೩೦ ವರ್ಷದಿಂದ ಅವರಿಗೆ ಖಾತೆಗಳನ್ನು ಮಾಡಿಕೊಟ್ಟು ಅವರಿಂದ ಕಂದಾಯವನ್ನು ವಸೂಲುಮಾಡುತ್ತಿಲ್ಲ. ಇಂಥ ವ್ಯವಸ್ಥೆ ಬಹಳ ದಿವಸದಿಂದ ಇದೆ. ನಮ್ಮ ಶಿವಮೊಗ್ಗದಲ್ಲಿ ಅನಧಿಕೃತ ಬಡಾವಣೆಗಳಲ್ಲಿರುವವರಿಗೆ ಖಾತೆಗಳನ್ನು ಮಾಡಿಕೊಟ್ಟರೆ ಸುಮಾರು ೧ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಿನ ಆದಾಯ ನಗರಸಭೆಗೆ ಬರುತ್ತದೆ. ಈ ಬಗ್ಗೆ ಮಾನ್ಯ ಸಚಿವರಿಗೂ ಒಂದು ಪತ್ರವನ್ನು ಬರೆದಿದ್ದೇನೆ. ಅಲ್ಲಿ ಏನಾಗಿದೆ ಎಂದರೆ, ಈ ಕೆಲಸವನ್ನು ಕಂದಾಯ ಇಲಾಖೆಯವರು ಮಾಡಬೇಕೆಂದು ನಗರಸಭೆಯವರು ಹೇಳಿದರೆ, ಇದು ನಮಗೆ ಸೇರಿದ್ದಲ್ಲ, ಇದನ್ನು ನಗರಸಭೆಯವರೇ ಮಾಡಬೇಕೆಂದು ಕಂದಾಯ ಇಲಾಖೆಯವರು ಹೇಳುತ್ತಿದ್ದಾರೆ. ಈರೀತಿಯಾಗಿ ಅವರಮೇಲೆ ಇವರು, ಇವರಮೇಲೆ ಅವರು ತೋರಿಸಿಕೊಂಡು ನಗರಸಭೆಗೆ ಬರಬೇಕಾದ ಕೋಟ್ಯಾಂತರ ರೂಪಾಯಿ ಕಂದಾಯ ಬರದೆ ನಷ್ಟವಾಗುತ್ತಿದೆ. ಇದು ಕೇವಲ ಶಿವಮೊಗ್ಗ ಒಂದರಲ್ಲೇ ಅಲ್ಲ. ರಾಜ್ಯದ ಅನೇಕ ನಗರಸಭೆಗಳಲ್ಲಿ ಈರೀತಿ ಆಗುತ್ತಿದೆ, ಆದ್ದರಿಂದ ಇದರ ಬಗ್ಗೆ ಮಾನ್ಯ ಸಚಿವರು ತಮ್ಮ ಸ್ಪಷ್ಟೀಕರಣವನ್ನು ನೀಡಬೇಕು.

ಇನ್ನು ಎರಡನೆಯದಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಬಿಡಿ ನಿವೇಶನಗಳನ್ನು ಹಂಚುತ್ತಿರುವ ನೀತಿಯ ಬಗ್ಗೆ ಹೇಳಬೇಕಾಗಿದೆ. ಅಲ್ಲಿ ತಮಗೆ ಬೇಕಾದವರಿಗೆ ಬಿಡಿ ನಿವೇಶನಗಳನ್ನು ಹಂಚುತ್ತಾರೆ. ಆದರೆ ಯಾರಿಗೆ ನಿಜವಾಗಿಯೂ ವಾಸಕ್ಕೆ ಮನೆಇಲ್ಲದೆ ತೊಂದರೆ ಪಡುತ್ತಿದ್ದಾರೆ ಅಂಥವರಿಗೆ ಈ ನಿವೇಶನವನ್ನು ಕೊಡುತ್ತಿಲ್ಲ.

ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಸ್ಪೇ ಸೈಟ್ಸ್‌ನ್ನು ಹಂಚುವ ವಿಚಾರದಲ್ಲಿ ಯಾವುದೇ ಒಂದು ನಿರ್ದಿಷ್ಟವಾದ ನಿಯಮ ಇಲ್ಲವೆಂದು ತಿಳಿದು ಹಿಂದಿನ ಸರ್ಕಾರ ಮಾಡಿದ್ದು ಸರಿಯಲ್ಲವೆಂದು ತಾವು ಹೊಸದಾಗಿ ಒಂದು ವ್ಯವಸ್ಥೆಯನ್ನು ಜಾರಿಗೆ ತಂದಿರಿ. ಆದರೆ ಅಲ್ಲಿ ಒಳಗಿನಿಂದೊಳಗೇ ಈ ಬಿಡಿ ಸೈಟುಗಳ ವಿಲೇವಾರಿಯಾಗುತ್ತಿದೆಯೆಂದು ನನಗೆ ತಿಳಿದುಬಂದಿದೆ. ಉದಾಹರಣೆಗೆ ಹೇಳುವುದಾದರೆ, ತಮ್ಮ ಹೆಸರಿಗೆ ಒಂದು ನಿವೇಶನ ಅಲಾಟ್ ಮಾಡಿದ್ದಾರೆಂದು ಪತ್ರಿಕೆಯಲ್ಲಿ ವರದಿ ಬಂದಾಗ, ನನಗೆ ಯಾವುದೇ ನಿವೇಶನವೂ ಬೆಂಗಳೂರು ಪ್ರಾಧಿಕಾರದವರಿಂದ ಅಲಾಟ್ ಆಗಿಲ್ಲವೆಂದೂ, ನಿವೇಶನಕ್ಕಾಗಿ ನಾನು ಅರ್ಜಿಯನ್ನೇ ನೀಡಿಲ್ಲವೆಂದೂ ತಾವು ಒಂದು ಹೇಳಿಕೆಯನ್ನು ಕೊಟ್ಟಿರಿ. ಹಾಗಾದರೆ ತಮ್ಮ ಹೆಸರಿನಲ್ಲಿ ೩೦ ಸಾವಿರ ರೂಪಾಯಿಗಳನ್ನು ಠೇವಣಿಇಟ್ಟಂಥ ಮಹಾತ್ಮರು ಯಾರು? ಆ ಠೇವಣಿ ಯಾರಿಂದ ಬಂತು ? ನನಗೆ ಯಾವ ನಿವೇಶನವೂ ಬೇಡವೆಂದು ಸನ್ಯಾಸಿಯ ರೀತಿಯಲ್ಲಿ ತಾವು ಸುಮ್ಮನೆ ಕುಳಿತಿದ್ದರೂ ಕೂಡ, ಯಾರೋ ನಿಮ್ಮ ಹೆಸರಿನಲ್ಲಿ ಹಣವನ್ನು ಠೇವಣಿ ಇಟ್ಟು ನಿಮ್ಮ ಹೆಸರಿಗೆ ಮಸಿ ಬಳಿಯುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಇದನ್ನೆಲ್ಲಾ ನೋಡಿದರೆ ಈ ಬೆಂಗಳೂರು ಪ್ರಾಧಿಕಾರದವರು ಬಿಡಿ ನಿವೇಶನಗಳನ್ನು ಹಂಚುವ ನೀತಿ ಯಾವರೀತಿ ಯದಾಗಿದೆಯೆಂಬುದೇ ಅರ್ಥವಾಗುತ್ತಿಲ್ಲ,

ಶ್ರೀ ಎ. ಲಕ್ಷ್ಮೀಸಾಗರ್ —ರೆವಿನ್ಯೂ ನಿವೇಶಗಳಲ್ಲಿ ಮನೆ ಕಟ್ಟಿಕೊಂಡಿರುವ ವಿಚಾರ ಹೊಸದೇನೂ ಅಲ್ಲ, ಇವರಿಗೆ ಕಂದಾಯ ವಿಧಿಸಿಲ್ಲ, ಇವು ಅನಧಿಕೃತ ಕಟ್ಟಡಗಳು ಎಂದು ಹೇಳುವುದು ಹೊಸದೇನೂ ಅಲ್ಲ. ಇದು ಕೇವಲ ಶಿವಮೊಗ್ಗಕ್ಕೆ ಮಾತ್ರ ಸೀಮಿತವಾದ ವಿಚಾರವಲ್ಲ, ಈ ದಿಸೆಯಲ್ಲಿ ರಾಜ್ಯದ ಎಲ್ಲ ಕಡೆಗಳಿಗೂ ಅನ್ವಯಿಸುವಂತೆ ಆದಷ್ಟುಬೇಗ ನಾವು ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆಂದು ತಮಗೆ ಹೇಳಬಯಸುತ್ತೇನೆ.

ಇದನ್ನು ಬಿಡಿ ನಿವೇಶನಗಳನ್ನು ಹಂಚುವಾಗ ಯಾರನ್ನೂ ಹೇಳದೇ, ಕೇಳದೇ ಹಂಚಿದರೆ ಅವಕ್ಕೆ ನಾನೇನು ಮಾಡಲಿ ? ಬಿ.ಡಿ.ಎ, ಕಾನೂನು ಪ್ರಕಾರ ನಿವೇಶನಕ್ಕೆ ಅರ್ಜಿಯನ್ನು ಹಾಕದ ಹೊರತು ನಿವೇಶನವನ್ನು ಯಾರಿಗೂ ಕೊಡುವುದಕ್ಕೆ ಬರುವುದಿಲ್ಲ. ನನಗೆ ಅಲಾಟ್ ಮಾಡಿದ ಬಗ್ಗೆ ತಾವು ಪ್ರಸ್ತಾಪ ಮಾಡಿದ್ದೀರಿ. ಇದರ ಬಗ್ಗೆ ಹೇಳುವುದಾದರೆ ಯಾರೋ ನನ್ನ ಮುಖಕ್ಕೆ ಮಸಿ ಹಚ್ಚುವುದಕ್ಕೆ ಪ್ರಯತ್ನ ಮಾಡಿದ್ದಾರೆ, ಅಷ್ಟೆ, ಹಿಂದೆಯೇ ಇದರ ಬಗ್ಗೆ ಒಂದು ಸ್ಪಷ್ಟೀಕರಣವನ್ನು ಹೇಳಿದ್ದೇನೆ. ನನ್ನ ಮುಖಕ್ಕೆ ಮಸಿ ಬಳಿಯಬೇಕೆಂದು ಮಾಡಿದ್ದಾರೆ ಒಂದು ವೇಳೆ ಬಳಿದರೂ ಕೂಡ ಯಾವುದೇ ವ್ಯತ್ಯಾಸವೂ ಕಾಣುವುದಿಲ್ಲ. ನಾನು ಮನೆಯನ್ನೇನೂ ಕಟ್ಟಿಲ್ಲ, ನಿವೇಶವೂ ಆಗಿಲ್ಲ. ಅಂದಮೇಲೆ

ಇನ್ನು ಹಣ ಕಟ್ಟಿದ್ದೀರಾ ಎಂಬ ಪ್ರಶ್ನೆ ಏತಕ್ಕೆಬೇಕು ? ಯಾರೋ ನನ್ನ ಹಿತ ಶತ್ರುಗಳು ಹೀಗೆ ಮಾಡಿದ್ದಾರೆ. ಇದನ್ನು ಪತ್ತೆ ಹಚ್ಚುವ ಸಲುವಾಗಿ ಅನೇಕ ನನ್ನ ಹಿತೈಷಿಗಳು ಬೆಂಗಳೂರು ಪ್ರಾಧಿಕಾರಕ್ಕೆ ಹೋಗಿ ಅಲ್ಲಿನ ಎಲ್ಲ ಕಾಗದಪತ್ರಗಳನ್ನೂ ತಪಾಸಣೆ ಮಾಡಿನೋಡಿದ್ದಾರೆ. ಅದು ಏನಾದರೂ ಇರಲಿ. ಆ ದುಡ್ಡನ್ನು ಯಾರು ಕಟ್ಟಿದ್ದರು ಎಂಬುದನ್ನು ಅವರು ತಿಳಿದುಕೊಂಡಿರಬಹುದು, ನನ್ನ ಹತ್ತಿರ ಪೂರ್ಣ ವಿವರ ಇಲ್ಲ. ನಾನು ಅರ್ಜಿಯನ್ನೇ ಹಾಕಿರಲಿಲ್ಲ ; ಎಂದು ಇಷ್ಟುಮಾತ್ರ ಹೇಳ ಬಯಸುತ್ತೇನೆ. ಇನ್ನು ಸ್ಟೇ ಸೈಟ್ಸ್ ವಿಚಾರದಲ್ಲಿ ಸರಿಯಾಗಿ ಹೇಳಲು ನನ್ನ ಹತ್ತಿರ ಪೂರ್ಣ ಮಾಹಿತಿ ಇಲ್ಲ. ಅನಂತರ ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ.

ಶ್ರೀ ಎ.ಜಿ. ಕೊಡ್ಗಿ ಮೇಟಿ.—ಮಾನ್ಯ ಅಧ್ಯಕ್ಷರೆ, ನಗರಸಭೆಯ ಕಡೆಯಲ್ಲಿರತಕ್ಕ ಕಟ್ಟಡಗಳು ಯಾವುದಾದರೂ ಕೀಳು ಸ್ಥಿತಿಗೆ ಮುಟ್ಟಿದರೆ ಅವುಗಳನ್ನು ದುರಸ್ತಿ ಮಾಡಿಸಲು ಸರ್ಕಾರ ಹಣ ಸಹಾಯ ಮಾಡುವುದೆ ?

ಶ್ರೀ ಎ. ಲಕ್ಷ್ಮೀಸಾಗರ್.—ನಗರಸಭೆಯ ಕಕ್ಷೆಯೊಳಗಿರತಕ್ಕ ಕಟ್ಟಡಗಳು ಕೀಳು ಮಟ್ಟದಲ್ಲಿದ್ದರೆ ಅದಕ್ಕೆ ನಗರಸಭೆಯವರೇ ಹಣ ಕೊಡಬೇಕಾಗುತ್ತದೆ. ಅದಕ್ಕೆ ನಾವು ಕೊಡುವುದಿಲ್ಲ. ಇದು ನಗರ ಸಭೆಗೆ ಸಂಬಂಧಪಟ್ಟ ವಿಚಾರ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಸ್ವಾಮಿ, ಸರ್ಕಾರಕ್ಕೆ ಯಾವುದೇ ರೀತಿಯ ಖರ್ಚೂ ಕೂಡ ಬಾರದಂತೆ ಪುರಸಭೆ, ಮತ್ತು ನಗರಸಭೆಯ ಚುನಾವಣೆಗಳು ೩-೪ ಊರುಗಳಲ್ಲಿ ನಡೆದಿದ್ದು ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಆಯ್ಕೆಯಾಗಿದೆ. ಉದಾಹರಣೆಗೆ ಹೇಳುವುದಾದರೆ ಶಿಕಾರಿಪುರ, ಶಿರಾಳಕೊಪ್ಪ ದಲ್ಲಿ ಈರೀತಿ ಚುನಾವಣೆಯಾಗಿದ್ದು ಅಧ್ಯಕ್ಷ, ಉಪಾಧ್ಯಕ್ಷರು ಚುನಾಯಿತರಾಗಿದ್ದಾರೆ. ಇದರಿಂದ ಸರ್ಕಾರಕ್ಕೆ ಯಾವ ಖರ್ಚೂ ಇಲ್ಲ. ಆದ್ದರಿಂದ ಇದಕ್ಕೆ ಸ್ಪೆಷಲ್ ಡೆವಲಪ್ ಗ್ರ್ಯಾಂಟನ್ನು ಕೊಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಈಗಾಗಲೇ ಡೆವಲಪ್‌ಮೆಂಟ್ ಗ್ರಾಂಟನ್ನು ಕೊಡುತ್ತಿದ್ದೇವೆ. ಆದರೆ ಸ್ಪೆಷಲ್ ಗ್ರ್ಯಾಂಟ್‌ನ್ನು ಕೊಡುವುದಕ್ಕೆ ನಮ್ಮ ಕಾನೂನಿನಲ್ಲಿ ಅವಕಾಶ ಇಲ್ಲ.

ಶ್ರೀ ಬಿ ಎಸ್. ಯಡಿಯೂರಪ್ಪ.—ಸ್ವಾಮಿ, ಸರ್ಕಾರಕ್ಕೆ ಒಂದು ಪೈಸೆಯೂ ಖರ್ಚು ಬಾರದ ರೀತಿಯಲ್ಲಿ ಚುನಾವಣೆ ನಡೆಸಿ ನಿಮಗೆ ಹಣವನ್ನುಳಿಸಿದ್ದಾರೆ. ಆದ್ದರಿಂದ ಸ್ಪೆಷಲ್ ಗ್ರ್ಯಾಂಟ್ ಎಂದು ಏತಕ್ಕೆ ಕೊಡಬಾರದು ?

ಶ್ರೀ ಎ. ಲಕ್ಷ್ಮೀಸಾಗರ್.—ಅವಿರೋಧವಾಗಿ ಆಯ್ಕೆಯಾಗಿದೆ. ಆದ್ದರಿಂದ ನಾವು ಇದಕ್ಕೆ ಹಣವನ್ನು ಸ್ಪೆಷಲ್ ಆಗಿ ಕೊಡುವುದಕ್ಕೆ ನಮ್ಮಲ್ಲಿ ಯಾವುದೇ ಕಾನೂನು ಇಲ್ಲ.

ಕುಡಿಯುವ ನೀರಿನ ವ್ಯವಸ್ಥೆಯ ವಿಚಾರವಾಗಿ ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ನೋಡಿ ತ್ತೇನೆ. ತಕ್ಷಣ ಅದರ ವಿಚಾರವಾಗಿ ಹೇಳುವುದಕ್ಕೆ ಬರುವುದಿಲ್ಲ. ಅವರು ಮನವಿ ಸಲ್ಲಿಸಿದ್ದಾರೆ, ಕೆಡಬ್ಲ್ಯು.ಎಸ್‌ನಲ್ಲಿ ವಿಚಾರಿಸಿ ಅದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಎಡಿಯೂರಪ್ಪ.—ಈ ಸದನದಲ್ಲಿ ನನ್ನ ಒಂದು ವಿನಂತಿ ಏನೆಂದರೆ ಈ ಸದನದಲ್ಲಿ ಎಷ್ಟೋ ಸಲಹೆಗಳು ಬರುತ್ತವೆ, ನಿರ್ದಿಷ್ಟವಾಗಿ ಯಾವುದೇ ಸಲಹೆಯನ್ನು ತೆಗೆದುಕೊಳ್ಳುವುದ ಕ್ಕಾಗಲೀ ನನ್ನ ವಿರೋಧವಿಲ್ಲ. ಆದರೆ, ಇಂತಹ ಒಂದು ಚುನಾವಣೆಯನ್ನು ಅಪ್ರಿಷಿಯೇಟ್ ಮಾಡ ಬೇಕಾದ್ದು ಒಪ್ಪತಕ್ಕಂಥ ವಿಚಾರ. ಈ ಬಗ್ಗೆ ಕಾನೂನು ನಿಯಮಾವಳಿ ಇಲ್ಲದೇ ಇದ್ದರೂ ಕೂಡ, ನಿಷ್ಠೆಯಿಂದ ನಡೆದದ್ದಕ್ಕಾಗಿ ಕಾನೂನನ್ನು ಮಾರ್ಪಾಡು ಮಾಡಿ, ಸ್ಪೆಷಲ್ ಗ್ರಾಂಟ್ ಕೊಡುವುದಕ್ಕೆ ಯೋಚನೆ ಮಾಡಿ ಎಂದು ಹೇಳುತ್ತೇನೆ. ಇದು ಕಷ್ಟವಾದಂತಹದ್ದೇನೂ ಅಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಅವರು ಈ ರೀತಿ ಚುನಾವಣೆ ನಡೆಸಿಕೊಂಡದ್ದ ಕ್ಕಾಗಿ ಅವರು ಮಾಡಿದಂತಹ ಕೆಲಸಕ್ಕೆ ನನ್ನ ಮೆಚ್ಚಿಗೆ ಇದೆ. ಬಹಳ ಸಂತೋಷ. ಆದರೆ, ಈ ರೀತಿ ಚುನಾವಣೆ ನಡೆದಾಗ ಸ್ಪೆಷಲ್ ಗ್ರ್ಯಾಂಟ್ ಕೊಡುವುದಕ್ಕೆ ಪ್ರಾವಿಷನ್ ಇಲ್ಲ ಮುಂದೆ ಈ ವಿಚಾರ ಬಂದಾಗ ನೋಡೋಣ.

ಎರಡನೆಯದಾಗಿ, ಸನ್ಮಾನ್ಯ ಶ್ರೀನಿವಾಸರವರು ಸ್ಟ್ರೇ ಸೈಟ್ಸ್ ವಿಚಾರವಾಗಿ ಹೇಳಿದರು. ಅದರ ಬಗ್ಗೆ ಹೇಳುತ್ತೇನೆ. Stray sites will be allotted according to new guidelines of the Government to those who have done out-standing services in the field of science, art on the national and international recognition. So far, the BDA has allotted about 80 sites in such cases.

ಶ್ರೀ ಚಂದ್ರಶೇಖರ್ ಮಾಮಣಿ.—ಮಾನ್ಯ ಅಧ್ಯಕ್ಷರೆ. ಮಾನ್ಯ ಮಂತ್ರಿಗಳಲ್ಲಿ ನನ್ನ ವಿನಂತಿ ಏನೆಂದರೆ, ಸವದತ್ತಿ ನಗರಸಭೆಯವರು ೧೯೫೮ರಲ್ಲಿ ಒಳಚರಂಡಿ ಯೋಜನೆಯನ್ನು ತೆಗೆದುಕೊಂಡಿದ್ದರು. ಈ ಯೋಜನೆಯು ೨ ಲಕ್ಷದ ೯೬ ಸಾವಿರದ್ದಾಗಿರುತ್ತದೆ. ಈ ಬಗ್ಗೆ ಕಂತು ವಸೂಲಾಗಿದ್ದರೂ ಸಹ, ಅಂದಿನಿಂದ ಇಂದಿನವರೆಗೂ ಕೂಡ ಈ ಯೋಜನೆ ಪೂರ್ತಿಯಾಗದೇ, ಹಾಗೆ ಇದೆ. ಇದರ ಬಗ್ಗೆ ಮಾನ್ಯ ಮಂತ್ರಿಯವರು ವಿವರಣೆ ಕೊಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಈಗ ಅದರ ಮಾಹಿತಿ ನನ್ನಲ್ಲಿಲ್ಲ. ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಕೆಂಪೀರೇಗೌಡ.—ಮೈಸೂರು ನಗರದ ನೀರು ಮತ್ತು ಒಳಚರಂಡಿ ಯೋಜನೆಯ ಬಗ್ಗೆ ೨೦ ಕೋಟಿ ರೂಪಾಯಿಯ ಯೋಜನೆ ತಯಾರಾಗಿದೆ. ಇದನ್ನು ಯಾವಾಗ ಕಾರ್ಯಗತ ಮಾಡುತ್ತೀರಿ ? ಈ ಬಗ್ಗೆ ಕೆಲಸ ಮಾಡಿಸಿಕೊಡುವುದಕ್ಕೆ ಪ್ರಯತ್ನ ಪಟ್ಟಿದ್ದೀರಾ ?

ಎರಡನೆಯದಾಗಿ, ಸಿಐಟಿಬಿ ಬಡಾವಣೆಗಳು ಏನಾಗಿವೆ, ಅಲ್ಲಿ ನೀರಿನ ವ್ಯವಸ್ಥೆ ಮತ್ತು ಒಳಚರಂಡಿ ವ್ಯವಸ್ಥೆ ಸರಿಯಾಗಿ ಮಾಡದೆ, ಅಲ್ಲಿನ ಜನಗಳಿಗೆ ತೊಂದರೆಯಾಗಿದೆ. ಅಲ್ಲದೆ, ಇನ್ನೂ ಇತರೇ ಕೆಲಸಗಳು ಅಂದರೆ ರೋಡು ಟಾರು ಮುಂತಾದವು ಸಹ ಆಗಿಲ್ಲ. ನೀರಿನ ವ್ಯವಸ್ಥೆಗಾಗಿ ಸುಮಾರು ೭೦ ಲಕ್ಷ ರೂಪಾಯಿ ಆಗುತ್ತದೆ. ಇದನ್ನು ಸಿಐಟಿಬಿನವರು ಕೆಡಬ್ಲ್ಯುಎಸ್‌ಗೆ ಮತ್ತು ಡ್ರೈನೇಜ್ ಬೋರ್ಡ್‌ಗೆ ಕೊಡಿಸಿಕೊಟ್ಟು ಆ ಕೆಲಸವನ್ನು ಆದಷ್ಟು ಬೇಗ ಮುಗಿಸಿಕೊಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ನೀರು ಸರಬರಾಜು ವ್ಯವಸ್ಥೆ ಮಾಡತಕ್ಕಂಥ ಜವಾಬ್ದಾರಿ ನಗರ ಕಾರ್ಪೊರೇಷನ್‌ಗೆ ಸೇರಿದ್ದು. ಆದರ ಚಿಂತನೆಯನ್ನು ಅವರು ಮಾಡಬೇಕು. ಮಂತ್ರಿಯಾಗಿ ನಾನು ಪ್ರವೇಶ ಮಾಡುವುದೇನಿಲ್ಲ. ನನ್ನ ಸಹಾಯ ಬೇಕೆನ್ನುವುದಾದರೆ, ಅವರ ಮೇಲೆ ನನ್ನ ಪ್ರಭಾವ ಬೀರಿ ನೀರು ಸರಬರಾಜು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಇನ್ನೊಂದು ವಿಚಾರವೆಂದರೆ, ಶ್ರೀಮಾನ್ ಧರ್ಮಸಿಂಗ್‌ರವರು ಯಾವುದನ್ನು ತೆಗೆದುಕೊಳ್ಳುತ್ತೀರಿ ಎಂದು ಕೇಳಿದರು. ಈ ಬಗ್ಗೆ ಹೇಳಬೇಕಾದರೆ, ನಮಗೆ ಬೈಲಾಟ್ರಿಕಲ್ ಅಸಿಸ್ಟೆನ್ಸ್ ಯಾವ ಯಾವ ಪ್ರಾಜೆಕ್ಟ್‌ಗಳಿಗೆ ಸೆಂಟ್ರಲ್ ಕ್ಲಿಯರೆನ್ಸ್ ಬರುತ್ತದೆಯೋ ಆವಾಗ ಆ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳುತ್ತೇವೆ

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ೩ ಸಣ್ಣ ಪ್ರಶ್ನೆಗಳನ್ನು ಕೇಳುತ್ತೇನೆ. ಮೊದಲನೆಯದಾಗಿ, ಮುನಿಸಿಪಾಲಿಟಿಯಲ್ಲಿ ಆಕ್ಟ್ರಾಯ್ ಏನಿತ್ತೋ, ಅದನ್ನು ತೆಗೆದು ಹಾಕಿ ಐದಾರು ವರ್ಷಗಳಾಯಿತು. ಈ ಬಗ್ಗೆ ನನಗೆ ಅನುಭವ ಇದೆ. ಈಗ ಅವರಿಗೆ ಆಕ್ಟ್ರಾಯ್ ಸಂಪಾದನೆ ಇಲ್ಲದೇ ಇರುವುದರಿಂದ, ಯಾವರೀತಿ ಕೆಲಸ ಮಾಡುತ್ತಿವೆ ಎಂಬುದರ ಬಗ್ಗೆ ತಮಗೆ ಅರಿವಾಗಿದೆ. ಮಾನ್ಯ ಧರ್ಮಸಿಂಗ್‌ರವರು ಇದರ ಬಗ್ಗೆ ಮಾತನಾಡಿದ್ದಾರೆ. ಆಕ್ಟ್ರಾಯ್ ಬದಲಾಗಿ ತಾವು ಕೊಡತಕ್ಕಂಥ ಹಣ ಏನಿದೆ ಅದು ಎರಡು, ಮೂರು ತಿಂಗಳಿಗೆ ಮಾತ್ರ ಆಗುತ್ತದೆ. ಇದರಿಂದ ಅಲ್ಲಿ ಸರಿಯಾಗಿ ಕೆಲಸವಾಗುವುದಿಲ್ಲ. ಬೇರೆ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಬಹಳ ಕಷ್ಟವಾಗುತ್ತದೆ. ಇದರ ಬಗ್ಗೆ ತಾವು ಏನು ಮಾಡುತ್ತೀರಿ ಎಂಬುದನ್ನು ಹೇಳಬೇಕು. ಸರ್ಕಾರ ಇದರ ಬಗ್ಗೆ ಪುನಃ ಆಕ್ಟ್ರಾಯ್ ತರಲಿಕ್ಕೆ ಯೋಜನೆ ಮಾಡಿದೆಯೋ ? ಲಕ್ಷ್ಮಣರಾವ್ ಸಮಿತಿ ಏನು ಶಿಫಾರಸ್ಸು ಮಾಡಿದ್ದರೋ, ಅದರ ಪ್ರಕಾರ ಪುನಃ ಆಕ್ಟ್ರಾಯ್‌ನ್ನು ಜಾರಿಗೆ ಕೊಡುವುದಾದರೆ, ಎಷ್ಟು ದಿವಸದೊಳಗೆ ಮಾಡುತ್ತೀರಾ ? ಮುನಿಸಿಪಾಲಿಟಿಯನ್ನು ಉದ್ಧಾರ ಮಾಡುವುದಕ್ಕೋಸ್ಕರ ಈ ಬಗ್ಗೆ ಏನು ಕ್ರಮ ತೆಗೆದು ಕೊಂಡಿದ್ದೀರೆಂಬುದನ್ನು ಹೇಳಬೇಕು.

ಬೆಂಗಳೂರು ಕಾರ್ಪೊರೇಷನ್ ಮತ್ತು ಟ್ರಸ್ಟ್ ಬೋರ್ಡ್ ಬಗ್ಗೆ ನಾನು ಪಿ.ಎ.ಸಿ ಛೇರ್ಮನ್ ಆಗಿದ್ದಾಗ ೨ ವಿಷಯಗಳನ್ನು ನೋಡಿದ್ದೇನೆ. ಬೆಂಗಳೂರು ಸಿಟಿ ಮುನಿಸಿಪಲ್ ಕಾರ್ಪೊರೇಷನ್ ಏನಿದೆ,

ಆದರಲ್ಲಿ ೨೦ ವರ್ಷಗಳಿಂದ ಆಡಿಟ್ ಆಗಿಲ್ಲ. ಅವರು ಬರೇ ದುಡ್ಡು ಖರ್ಚು ಮಾಡುವುದರಲ್ಲಿ ಇದ್ದಾರೆ. ಖರ್ಚು ಹೇಗೆ ಮಾಡಿದ್ದಾರೆ ಎನ್ನುವುದಕ್ಕೆ ಸರಿಯಾಗಿ ಪುಸ್ತಕಗಳು ಇಲ್ಲ, ಸರಿಯಾದ ಅಕೌಂಟ್ಸ್ ಇಲ್ಲ. ಇದರ ಬಗ್ಗೆ ಆಡಿಟ್ ಮಾಡುವುದಕ್ಕೆ ಕಂಟ್ರೋಲರ್ ಅಂಡ್ ಅಕೌಂಟೆಂಟ್ ಜನರಲ್‌ಗವರಿಗೆ ಕಾರ್ಯ ನಿರ್ವಹಿಸುವ ಹಾಗೆ ಮಾಡಿಕೊಡಬೇಕೆಂದು ಹೇಳಿದ್ದೆ. ಇದರಲ್ಲಿ ೪೦–೫೦ ಕೋಟಿ ರೂಪಾಯಿ ವ್ಯವಹಾರ ನಡೆಯುತ್ತಾ ಇವೆ. ಈ ಬಗ್ಗೆ ಅಲ್ಲಿ ಯಾರ ಹತೋಟಿಯೂ ಇಲ್ಲ. ಅವರೇ ಸರ್ವಾಧಿಕಾರಿಗಳಾಗಿದ್ದಾರೆ. ಇದರ ಬಗ್ಗೆ ತನಿಖೆ ಮಾಡಿ ನಾನು ಮೊದಲೇ ಹೇಳಿದಹಾಗೆ ಕಂಟ್ರೋಲ್‌ರ್ ಅಂಡ್ ಅಕೌಂಟೆಂಟ್ ಜನರಲ್ ಅವರಿಂದ ತನಿಖೆ ಮಾಡಿಸಲು ಯೋಚನೆಮಾಡುತ್ತೀರಾ ?

ಇನ್ನು ಜುಡಿಷಿಯರಿ ಬಗ್ಗೆ ಜಡ್ಜ್ ಏನಿದ್ದಾರೆ, ಕೆಳದರ್ಜೆ ಮತ್ತು ಮೇಲ್ದರ್ಜೆ ಎರಡರಲ್ಲೂ ಇದ್ದಾರೆ. ಆ ಜಡ್ಜ್‌ಗಳು ಹೌಸ್ ರೆಂಟ್ ಅಲೋಯೆನ್ಸ್ ಏನು ತೆಗೆದುಕೊಳುತ್ತಾರೆ, ಅದು ಮಂತ್ರಿಗಳು ಎಲ್ಲಾ ಅಧಿಕಾರಿಗಳೂ ತೆಗೆದುಕೊಳ್ಳುವ ಹಾಗೆಯೇ ಅವರೂ ತೆಗೆದುಕೊಳ್ಳುತ್ತಾರೆ. ಈ ಜಡ್ಜ್‌ಗಳು ಹೆಚ್.ಆರ್.ಎ ತೆಗೆದುಕೊಳ್ಳುವುದಕ್ಕೆ ಏನು ಮಾಡಿದ್ದಾರೆಂದರೆ, ಹೆಂಡತಿ ಹೆಸರಿನಲ್ಲೋ ಅಥವಾ ಬೇರೆಯವರ ಹೆಸರಿನಲ್ಲೋ ಒಂದು ಟ್ರಸ್ಟ್ ಕ್ರಿಯೇಟ್ ಮಾಡಿ, ಹೆಚ್.ಆರ್.ಎ ಹಣವನ್ನು ಡ್ರಾ ಮಾಡಿಕೊಳ್ಳುತ್ತಿದ್ದಾರೆಂದು ನನ್ನ ಗಮನಕ್ಕೆ ಬಂದಿದೆ. ಹಾಗೇನಾದರೂ ಇದ್ದರೆ, ತಾವೇನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಈ ಬಗ್ಗೆ ಉತ್ತರ ಕೊಡುವಾಗ ಶ್ರೀಮಾನ್ ಬಸವಲಿಂಗಪ್ಪನವರು ಇರಲಿಲ್ಲ. ಅದು ಈಗಾಗಲೇ ಹಳೆಯ ವಿಚಾರ. ಆಕ್ಷ್ಯನ್ ತೆಗೆಯಲು ಕಾರಣೀಭೂತರು ಶ್ರೀ ಬಸವಲಿಂಗಪ್ಪನವರೇ.

ಶ್ರೀ ಬಿ. ಬಸವಲಿಂಗಪ್ಪ.—ಶ್ರೀ ದೇವರಾಜ ಅರಸ್‌ರವರ ಸರ್ಕಾರ ಇದ್ದಾಗ ತೆಗೆದದ್ದು.

ಶ್ರೀ ಎ. ಲಕ್ಷ್ಮೀಸಾಗರ್.—ಶ್ರೀ ದೇವರಾಜ ಅರಸ್‌ರವರು ಮುಖ್ಯ ಮಂತ್ರಿಗಳಾಗಿದ್ದಾಗ, ತಾವೂ ಮಂತ್ರಿಗಳಾಗಿದ್ದಿರಿ. ಆಗಲೇ ಈ ಕೆಲಸ ಮಾಡಿದ್ದು ಅದಕ್ಕೇ ಹೇಳಿದ್ದು. ಇದನ್ನು ಮತ್ತೆ ತರುವ ವಿಚಾರ ಇಲ್ಲವೆಂದು ನಾನು ತಮಗೆ ವೈಯಕ್ತಿಕವಾಗಿಯೂ ಹೇಳಿದ್ದೇನೆ, ಈ ಸದನದಲ್ಲಿಯೂ ಹೇಳಿದ್ದೇನೆ.

ಆಡಿಟ್ ವ್ಯವಸ್ಥೆ ಎ. ಜಿ. ಯಿಂದ ನಡೆಯಬೇಕು ; ಬಹಳ ವರ್ಷಗಳಿಂದ ಆಡಿಟ್ ನಡೆಯುತ್ತಾ ಇಲ್ಲ ಎಂಬ ಮಾತನ್ನು ಹೇಳಿದ್ದಾರೆ ಈ ಹಿನ್ನೆಲೆಯಲ್ಲಿ ಎ. ಜಿ. ಗೆ ಒಪ್ಪಿಸುವುದಕ್ಕೆ ಅವರೇನು ಚಿಂತನೆ ಮಾಡಿದ್ದಾರೋ, ಅದರ ಬಗ್ಗೆ ನಾವು ಯೋಚನೆ ಮಾಡುತ್ತೇವೆ. ಇದಕ್ಕೆ ತಕ್ಷಣ ಉತ್ತರ ಹೇಳುವುದಕ್ಕೆ ಆಗುವುದಿಲ್ಲ.

ಇನ್ನು ಹೆಚ್ ಆರ್ ಎ ವಿಚಾರವಾಗಿ ಜಡ್ಜ್‌ಗಳ ವಿಚಾರದಲ್ಲಿ ಹೇಳಿದ್ದಾರೆ. ಅವರು ಒಂದು ಟ್ರಸ್ಟ್ ಮಾಡಿಕೊಂಡು ಅವರ ಹೆಸರಿನಲ್ಲಿ ಹೆಚ್ ಆರ್ ಎ ಡ್ರಾ ಮಾಡುತ್ತಾರೆಂಬ ವಿಚಾರವನ್ನು ಹೇಳಿದ್ದಾರೆ. ಅದು ನನ್ನ ಗಮನಕ್ಕೆ ಬಂದಿಲ್ಲ. ಅವರು ಈ ವಿಚಾರದಲ್ಲಿ ಲಿಖಿತ ಮೂಲಕ ಬರೆದುಕಳಿಸಿದರೆ ಉತ್ತರ ತರಿಸಿ ಕೊಡುತ್ತೇನೆ.

ಶ್ರೀ ಎಸ್. ಕೆ. ಕಾಂತ.—ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ವಿಚಾರದ ಬಗ್ಗೆ ಹೇಳುವುದಾದರೆ, ಹೊಸದಾಗಿ ೧೦೦ ಬೋರ್‌ವೆಲ್‌ಗಳನ್ನು ಹಾಕಿಸುತ್ತೇವೆಂದು ಹೇಳಿದ್ದರು. ಈ ಕೆಲಸ ಇನ್ನೂ ಪ್ರಾರಂಭವಾಗಿಲ್ಲ ಎರಡನೆಯದಾಗಿ, ಗುಲ್ಬರ್ಗಾ ನಗರದಲ್ಲಿ ನೀರು ಸರಬರಾಜು ಯೋಜನೆಗೆ ಬೆಣ್ಣೆತೊರೆಯ ೩ನೇ ಹಂತವನ್ನು ಪ್ರಾರಂಭಿಸುತ್ತೇವೆಂದು ದೇವೇಗೌಡರು ಇಲ್ಲಿ ಹೇಳಿದ್ದರು. ಅಲ್ಲಿ ಓವರ್ ಹೆಡ್ ಟ್ಯಾಂಕ್‌ನ್ನು ಕಟ್ಟಿ ನೀರನ್ನು ಅಲ್ಲಿ ರಿಸರ್ವ್ ಆಗಿ ಇಡಬೇಕಾಗುತ್ತದೆ. ಅವರು ೩ ಕೋಟಿ ರೂಪಾಯಿ ಕೊಟ್ಟರೆ, ಈ ಕೆಲಸವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದರು. ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಲಿಲ್ಲ

ಮೂರನೆಯದಾಗಿ ಅಲ್ಲಿ ಪೈಪ್‌ಗಳನ್ನು ಏನು ಅಳವಡಿಸಿದ್ದಾರೆ ಅದು ೫೦ ವರ್ಷಗಳಷ್ಟು ಹಳೆಯದಾಗಿರುತ್ತದೆ. ಆ ಪೈಪ್‌ಗಳ ಮುಖಾಂತರ ಹರಿದು ಬರತಕ್ಕಂಥ ನೀರನ್ನು ಕುಡಿದು ಮೂರುನಾಲ್ಕು ಜನರು ಸತ್ತಿದ್ದಾರೆ. ಹೀಗಾಗಬಾರದು. ಮತ್ತೆ ಇಲ್ಲಿ ನಡೆದಿರತಕ್ಕಂಥ ಅಕ್ರಮಗಳ ಬಗ್ಗೆಯೂ ಕೂಡ

ಯಾವರೀತಿಯಲ್ಲಿ ನಿಲ್ಲಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ಉತ್ತರವನ್ನು ಮಾನ್ಯ ಸಚಿವರು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಕ್ರಮಗಳು ನಡೆದಿದ್ದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳ ತಕ್ಕಂಥದ್ದು ಕಾರ್ಪೊರೇಷನ್‌ಗೆ ಸೇರಿದಂತ ವಿಚಾರ. ಅದು ನನ್ನವರೆಗೆ ಬರಬೇಕಾದಂತ ಅವಶ್ಯಕತೆ ಇಲ್ಲ. ನೀರು ಸರಬರಾಜಿನದ ಬಗ್ಗೆ ಈ ಗಾಗಲೇ ಹೇಳಿದ್ದೇನೆ. ಇನ್ನು ಕೊಳವೇ ಬಾವಿಗಳ ವಿಷಯ ಹೇಳಿದ್ದಾರೆ. ಆದರ ಬಗ್ಗೆ ಮಾಹಿತಿ ಇಲ್ಲ ಮಾಹಿತಿಯನ್ನು ತರಸಿ ಕೊಡುತ್ತೇನೆ. ಇನ್ನು ಗುಲ್ಬರ್ಗಾ ದಲ್ಲಿ ಒಂದು ಕಟ್ಟಡ ಬಿದ್ದುಹೋಯಿತು ಎಂದು ಹೇಳಿದ್ದಾರೆ. ಅದು ಸ್ಲಮ್ ಬೋರ್ಡ್‌ನವರು ಕಟ್ಟಿರ ತಕ್ಕಂಥ ಕಟ್ಟಡ. ಅಫಿಷಿಯಲ್ ತನಿಖೆ ಮಾಡಿಸಿ ರಿಪೋರ್ಟ್ ತರಿಸಿಕೊಂಡು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಕೆ ಕಾಂತ.—ಮೂರು ಕೋಟಿ ರೂಪಾಯಿಗಳನ್ನು ಕೊಟ್ಟರೆ ಬೆಣ್ಣೆತೊರೆ ಯೋಜನೆ ಯನ್ನು ತೀವ್ರಗತಿಯಲ್ಲಿ ಮುಗಿಸುತ್ತೇನೆಂದು ಮಾನ್ಯ ಸಚಿವರಾದ ದೇವೇಗೌಡರು ಹೇಳಿದ್ದಾರೆ. ಈ ಮೂರು ಕೋಟಿ ರೂಪಾಯಿಗಳನ್ನು ಒದಗಿಸುವ ಬಗ್ಗೆ ತಾವು ಏನು ಹೇಳುತ್ತೀರಿ?

ಶ್ರೀ ಎ. ಲಕ್ಷ್ಮೀಸಾಗರ್.—ಆದರ ಬಗ್ಗೆ ನನ್ನ ಹತ್ತಿರ ವಿವರಣೆಗಳು ಇಲ್ಲ. ಎಲ್ಲ ವಿವರಣೆಗಳನು ತರಿಸಿ ಮಾನ್ಯ ಸದಸ್ಯರಿಗೆ ಒದಗಿಸಿಕೊಡುತ್ತೇನೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ ಮಾನ್ಯ ಕಾಂತರವರು ಕೇಳತಕ್ಕಂಥ ಪ್ರಶ್ನೆ ಸ್ಪಷ್ಟವಾಗಿದೆ. ತಾವು ಮೂರು ಕೋಟಿ ರೂಪಾಯಿಗಳನ್ನು ಒದಗಿಸಿಕೊಟ್ಟು ಬೆಣ್ಣೆತೊರೆ ಪ್ರಾಜೆಕ್ಟಿನಿಂದ ವಾಟರ್ ಸಪ್ಲೈ ಸ್ಕೀಮ್ ಇಂಪ್ಲಿಮೆಂಟ್ ಮಾಡುವುದಕ್ಕೆ ಆಗುತ್ತದೆಯೋ ಇಲ್ಲವೇ ಎಂದು ಕೇಳಿರುತ್ತಾರೆ. ವಿವರಗಳನ್ನು ತರಿಸಿ ಕೊಡುತ್ತೇವೆಂದು ಹೇಳತಕ್ಕಂಥ ಪ್ರಶ್ನೆಯಲ್ಲ. ಮೂರು ಕೋಟಿ ರೂಪಾಯಿಗಳ ಬೇಡಿಕೆಯನ್ನು ಸರ್ಕಾರದಮುಂದಿಟ್ಟಿದ್ದಾರೆ, ತಾವು ಸ್ಪಷ್ಟವಾಗಿ ಹೇಳಬೇಕು, ಈ ವರ್ಷವೇ ಕೊಡುತ್ತೀರಾ, ಅಥವಾ ಯಾವ ವರ್ಷ ಕೊಡುತ್ತೀರೆಂಬುದರ ಬಗ್ಗೆ ಹೇಳಬೇಕು.

ಇನ್ನು ಇಂಟಗ್ರೇಟೆಡ್ ಅರ್ಬನ್ ಡೆವಲಪ್‌ಮೆಂಟ್ ಪ್ರೋಗ್ರಾಮ್‌ನಲ್ಲಿ ಎಷ್ಟು ಜನರನ್ನು ಈ ವರ್ಷ ತೆಗೆದುಕೊಂಡಿರುತ್ತೀರಿ. ಯಾವುದಕ್ಕೆ ಎಷ್ಟೆಷ್ಟು ಜನರಿಗೆ ರೆಕಮೆಂಡೇಷನ್ ಮಾಡಿದ್ದೀರಿ? ೧೮ ಪರ್ಸೆಂಟ್ ಬಡ್ಜೆಟ್ ಕೆಳಗೆ ಇಡಿ ಸ್ಟೇಟ್‌ನಲ್ಲಿ ಎಷ್ಟು ಹಣವನ್ನು ಖರ್ಚುಮಾಡಿದ್ದೀರಿ? ಇನ್ನು ಎಷ್ಟು ಮಾಡತಕ್ಕಂಥದ್ದು ಉಳಿದಿರುತ್ತದೆ. ಯಾವ ಯಾವ ಪ್ರೋಗ್ರಾಮ್ ಬಗ್ಗೆ ಆದ್ಯತೆಯನ್ನು ಕೊಟ್ಟು ಮಾಡಿದ್ದೀರಿ ಎಂಬುದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು,

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಸದಸ್ಯರು ಏನೇನು ಪ್ರಶ್ನೆ ಕೇಳಿರುತ್ತಾರೆ, ಅದಕ್ಕೆಲ್ಲ ಉತ್ತರವನ್ನು ಆಗಲೇ ಕೊಟ್ಟಿರುತ್ತೇನೆ.

ಅಧ್ಯಕ್ಷರು.—ಮಾನ್ಯ ಖರ್ಗೆಯವರೇ ತಾವು ಒಂದುಮೂಕಾಲುತಾಸು ಲೇಟಾಗಿ ಬಂದಿರಿ. ಮಾನ್ಯ ಸಚಿವರು ಈಗಾಗಲೇ ಅದಕ್ಕೆಲ್ಲ ಉತ್ತರವನ್ನು ಹೇಳಿರುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮೂರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದರೆ ಬೆಣ್ಣೆತೊರೆ ಪ್ರಾಜೆಕ್ಟನ್ನು ಕಂಪ್ಲೀಟ್ ಮಾಡುವುದಾಗಿ ಮಾನ್ಯ ಸಚಿವರಾದ ದೇವೆಗೌಡರು ಹೇಳಿರುತ್ತಾರೆ. ಅದನ್ನು ಬಿಡುಗಡೆ ಮಾಡುತ್ತೀರೋ ಇಲ್ಲವೋ ಅದನ್ನು ಹೇಳಬೇಕು. ಅದಕ್ಕೆ ಲೆಕ್ಕವನ್ನು ಏತಕ್ಕೆ ನೋಡಬೇಕೆಂದು ಹೇಳುತ್ತೀರಿ.

ಶ್ರೀ ಎ. ಲಕ್ಷ್ಮೀಸಾಗರ್.—ನನ್ನ ಹತ್ತಿರ ವಿವರಗಳು ಇಲ್ಲ. ವಿಚಾರ ಮಾಡುತ್ತೇನೆಂದು ಹೇಳಿದ್ದೇನೆ. ಅದರಲ್ಲೇನು ತಪ್ಪಿದೆ. ೧೮ ಪರ್ಸೆಂಟ್ ಬಗ್ಗೆ ವಿವರಗಳನ್ನು ಕೇಳಿದ್ದಾರೆ. ಅದಕ್ಕೆ ಉತ್ತರವನ್ನು ಕೊಟ್ಟಿರುತ್ತೇನೆ. ಆಯಾ ನಗರಸಭೆಗಳಿಗೆ ೧೮ ಪರ್ಸೆಂಟ್ ಖರ್ಚುಮಾಡುವುದರ ಬಗ್ಗೆಯೂ ಹೇಳಿರುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಗುಲ್ಬರ್ಗಾದ ಬೆಣ್ಣೆತೊರೆ ಯೋಜನೆಗೆ ತಾವು ಈ ವರ್ಷ ಹಣ ವನ್ನು ಬಿಡುಗಡೆ ಮಾಡುತ್ತೀರೋ ಇಲ್ಲವೋ ಅದನ್ನು ಸ್ಪಷ್ಟವಾಗಿ ಹೇಳಬೇಕು. ಏತಕ್ಕೆಂದರೆ ಈಗ ಬಡ್ಜೆಟ್ ಡಿಮ್ಯಾಂಡ್ ಪಾಸ್ ಆಗುವುದಿದೆ ಆದುದರಿಂದ ಗುಲ್ಬರ್ಗಾ ಬೆಣ್ಣೆತೊರೆಯೋಜನೆಗೆ ಮೂರು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರೋ ಇಲ್ಲವೋ ಎಂಬುದನ್ನು ಹೇಳಬೇಕಲ್ಲ. ಇಲ್ಲದಿದ್ದರೆ ಡಿಮ್ಯಾಂಡ್ ಪಾಸ್ ಮಾಡುವುದು ಹೇಗೆ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸಭಾಧ್ಯಕ್ಷರೇ ನನ್ನ ಹತ್ತಿರ ಡೀಟೇಲ್ಸ್ ಇಲ್ಲ, ಅಧಿಕಾರಿಗಳನ್ನು ಕರೆದು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಮಗೆ ಎಲ್ಲ ವಿಚಾರ ಗೊತ್ತಿರುತ್ತದೆ. ಅವರ ಡಿಮ್ಯಾಂಡ್ ಏನೆಂದರೆ ಹಣವನ್ನು ಕೊಡುತ್ತೀರೋ ಇಲ್ಲವೋ ಎನ್ನುವುದು. ಅದಕ್ಕೆ ತಮ್ಮ ಉತ್ತರವನ್ನು ಕೊಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—೧೮ ಪರ್ಸೆಂಟ್ ಬಗ್ಗೆ ಈಗಾಗಲೇ ಉತ್ತರ ಹೇಳಿದ್ದೇನೆ. ತಾವು ನಾನು ಉತ್ತರವನ್ನು ಕೊಡುವಾಗ ಇರಲಿಲ್ಲ. ೧೮ ಪರ್ಸೆಂಟ್‌ನಂತೆ ಎಲ್ಲ ಮುನಿಸಿಪಾಲಿಟಿಗಳಿಗೂ ಕೂಡ ನಿಗದಿತ ಕಾರ್ಯಕ್ರಮದಪ್ರಕಾರ ಹಣವನ್ನು ಕೊಡತಕ್ಕಂಥರೀತಿಯಲ್ಲಿ ಕೆಲಸ ಮಾಡಬೇಕೆಂದು ಈಗಾಗಲೇ ತಿಳಿಸಿದ್ದೇನೆ. ಇದರ ಬಗ್ಗೆ ಸಾಕಷ್ಟು ವಿವರಣೆ ಕೊಡತಕ್ಕಂಥ ರೀತಿಯಲ್ಲಿ ವಿಚಾರ ತಿಳಿಸಿದ್ದೇನೆ. ಮತ್ತೆ ವಿಚಾರ ಮಾಡುತ್ತೇನೆಂದು ಕೂಡ ಹೇಳಿದ್ದೇನೆ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ ನಾನು ಡಿಮ್ಯಾಂಡ್‌ಮೇಲೆ ಮಾತನಾಡುವಾಗ ಮಾನ್ಯ ಹಿರಿಯ ಸದಸ್ಯರು ವಿರೋಧಪಕ್ಷದ ನಾಯಕರು ಮತ್ತು ಮುಖ್ಯ ಸಚೇತಕರಿಗೆ ಆಳುವ ಪಕ್ಷದ ಸಚೇತರಿಗೆ ಕೊಡತಕ್ಕಂಥ ಸೌಲಭ್ಯಗಳನ್ನು ಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳಲಾಯಿತು. ಆದರೆ ಡಿಮ್ಯಾಂಡ್‌ಮೇಲೆ ಉತ್ತರವನ್ನು ಕೊಡುವಾಗ ಮಂತ್ರಿಗಳು ಈ ವಿಚಾರದ ಬಗ್ಗೆ ಹೇಳಲಿಲ್ಲ. ಬಹಳ ಸುಂದರವಾಗಿ ನಕ್ಕೊಂಡು ಸುಮ್ಮನಾಗಿಬಿಟ್ಟರು. ಅದಕ್ಕಾಗಿ ಕೇಳುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ನಾನು ಉತ್ತರ ಹೇಳುವಾಗ ಸನ್ಮಾನ್ಯ ಸದಸ್ಯರು ಹಾಜರಿದ್ದರು. ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಸನ್ಮಾನ್ಯ ಸದಸ್ಯರಾದ ಕೆ. ಎಚ್. ಪಾಟೀಲರಿಂದ ಸಲಹೆ ಬಂದಿತೋ ಅದನ್ನು ಸ್ವೀಕರಿಸಿದ್ದೇನೆ. ಅದರ ಬಗ್ಗೆ ವಿಚಾರ ಮಾಡುತ್ತೇನೆ ಎನ್ನುವ ಮಾತನ್ನೂ ಕೂಡ ಹೇಳಿರುತ್ತೇನೆ. ಈ ಸಮಸ್ಯೆಯನ್ನು ಬಗೆಹರಿಸತಕ್ಕಂಥ ವಿಚಾರ ಮಾಡುತ್ತೇನೆ.

ಶ್ರೀ ಆರ್. ಎನ್. ನಾಯಕ್.—ನಾವು ಈಗಾಗಲೇ ಹೇಳಿದಂತೆ ವಿರೋಧಪಕ್ಷದ ಸದಸ್ಯರಿಗೂ ಸೌಲಭ್ಯಗಳನ್ನೂ ಕೊಡುವುದಕ್ಕೆ ಏನಾದರೂ ಮನಸ್ಸು ಮಾಡಿದರೆ ಅದು ಯಾವಾಗ ಮಾಡುತ್ತೀರಿ. ದಯವಿಟ್ಟು ಹೇಳಬೇಕು?

ಶ್ರೀ ಎ. ಲಕ್ಷ್ಮೀಸಾಗರ್.—ಈಗಾಗಲೇ ಮಾನ್ಯ ಸದಸ್ಯರಿಂದ ಎಲ್ಲ ಸಲಹೆಗಳು ಬಂದಿರುತ್ತದೆ. ಸನ್ಮಾನ್ಯ ಕೆ. ಎಚ್. ಪಾಟೀಲರವರು ಇದರ ಹಿನ್ನೆಲೆಯಲ್ಲಿ ಸಭೆಯನ್ನು ಕರೆದು ಮಾತನಾಡಬೇಕು ಎನ್ನುವ ಮಾತನ್ನೂ ಕೂಡ ಹೇಳಿರುತ್ತಾರೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಮಾನ್ಯ ಅಧ್ಯಕ್ಷರೇ ಹಿರೆಕಳಲೆ ಕೆರೆ ಸ್ಲೂಯಿಸ್ ಒಡೆದು ನೀರು ಲೀಕೇಜ್ ಆಗುತ್ತಿದೆ. ಕೆರೆಗೆ ಬರುತ್ತಿರತಕ್ಕಂಥ ನೀರು ಸಂಪೂರ್ಣವಾಗಿ ನಿಲ್ಲದೆ ಹೋಗುತ್ತಿರುತ್ತದೆ. ಇನ್ನೊಂದೆರಡು ತಿಂಗಳು ಹೀಗೆಯೇ ಬಿಟ್ಟರೆ ಕೆರೆಯಲ್ಲಿ ಇರತಕ್ಕಂಥನೀರು ಕೂಡ ಉಳಿಯುವುದಿಲ್ಲ. ಇದನ್ನು ಬಂದ್‌ಮಾಡುವುದಕ್ಕೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ಮತ್ತ ೩೦ ಬೋರ್‌ವೆಲ್‌ಗಳನ್ನು ನಮ್ಮ ತಾಲ್ಲೂಕಿಗೆ ಕೊಡಬೇಕೆಂದು ಕೇಳಿರುತ್ತೇನೆ, ಇನ್ನು ಒಂದು ತಿಂಗಳಲ್ಲಿ ಮಳೆ ಬಾರದಿದ್ದರೆ ನೀರಿನ ಅಭಾವ ಉಂಟಾಗತಕ್ಕಂಥ ಪರಿಸ್ಥಿತಿ ಇರುತ್ತದೆ. ಆದ್ದರಿಂದ ಈ ಕೂಡಲೇ ೩೦ ಬೋರ್‌ವೆಲ್‌ಬಾವಿಗಳನ್ನು ತೋಡತಕ್ಕಂಥ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಆ ಕೆರೆಯಲ್ಲಿ ನೀರು ಹರಿದುಹೋಗದೆ ಇರತಕ್ಕಂಥ ರೀತಿಯಲ್ಲಿ ಸಂಬಂಧಪಟ್ಟವರು ಈಗಾಗಲೇ ಕ್ರಮ ತೆಗೆದುಕೊಂಡಿರುತ್ತಾರೆ. ನಿನ್ನೆ ಇದರ ಬಗ್ಗೆ ಗಮನ ಸೆಳೆಯುವ ಸೂಚನೆಯ ಮುಖಾಂತರ ಚರ್ಚೆಯಾಗಿ ಮಾನ್ಯ ಪಿ.ಡಬ್ಲ್ಯೂಡಿ. ಮಂತ್ರಿಗಳು ಉತ್ತರವನ್ನು ಕೊಟ್ಟಿರುತ್ತಾರೆ. ಆದ್ದರಿಂದ ಆದರ ಬಗ್ಗೆ ಚಿಂತೆ ಮಾಡಬೇಕಾಗಿಲ್ಲ. ಇನ್ನು ಬೋರ್‌ವೆಲ್‌ಗಳನ್ನು ಏನು ಕೇಳಿರುತ್ತಾರೆ ಅದನ್ನು ಆದ್ಯತೆಯಮೇರೆಗೆ ಅವಶ್ಯಕವಾಗಿ ಕೊಡಬೇಕಾಗಿದ್ದರೆ ಕೊಡುತ್ತೇವೆ. ಈ ವಿಷಯವಾಗಿ ಮಾನ್ಯ ಮುನಿಸಿಪಲ್ ಅಧ್ಯಕ್ಷರಾದ ಸುಬ್ಬರಾಜುರವರಿಗೂ ಕೂಡ ಹೇಳಿದ್ದೇನೆ.

ಶ್ರೀ ಬೆಲ್ಲದ ಚಂದ್ರಕಾಂತ್ ಗುರಪ್ಪ.—ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ ಮತ್ತು ಧಾರವಾಡ ಮಹಾನಗರದ ಮಧ್ಯೆ ಅನೇಕ ಕೈಗಾರಿಕಾ ಉದ್ಯಮಗಳನ್ನು ಸ್ಥಾಪನೆ ಮಾಡುವ ಸಲುವಾಗಿ ನಿವೇಶನಗಳನ್ನು ತೆಗೆದುಕೊಳ್ಳತಕ್ಕಂಥ ವಿಚಾರ ಸರ್ಕಾರದಲ್ಲಿರುತ್ತದೆ. ಅದನ್ನು ತೆಗೆದುಕೊಳ್ಳಬಾರದೆಂದು ತಮ್ಮ ಮೂಲಕ ಕೇಳಿಕೊಂಡಿದ್ದೆ. ಅದರ ಬಗ್ಗೆ ಮಾನ್ಯ ಸಚಿವರಿಂದ ಉತ್ತರ ಬರಲಿಲ್ಲ. ಅದು ಅಲ್ಲದೆ ಗ್ರಾಮಾಂತರ ಪ್ರದೇಶಗಳಲ್ಲಿ ನಿವೇಶನ ಇಲ್ಲದಂಥ ಜನರು ಏನು ಇದ್ದಾರೆ ಅವರಿಗೆ ನಿವೇಶನಗಳನ್ನು ಕಾಯ್ದಿರಿಸಬೇಕು. ಹುಬ್ಬಳ್ಳಿ ಧಾರವಾಡ ಮಧ್ಯದಲ್ಲಿ ಬರತಕ್ಕಂಥ ಗ್ರಾಮೀಣ ಜನರಿಗೆ ನಿವೇಶನರಹಿತ ಜನರಿಗೆ ನಿವೇಶನಗಳನ್ನು ಕೊಡುವ ಬಗ್ಗೆ ಕಾಯ್ದಿರಿಸಬೇಕು. ಇದರ ಬಗ್ಗೆ ಮಾನ್ಯ ಸಚಿವರು ಉತ್ತವನ್ನು ಕೊಡಬೇಕು.

ಮೂರನೆಯದಾಗಿ ಈಗಾಗಲೇ ಆಕ್ಟ್ರಾಯ್‌ನ್ನು ತೆಗೆದಿರುವ ಬಗ್ಗೆ ಚರ್ಚೆಯಾಗಿರುತ್ತದೆ. ಅದನ್ನು ಮತ್ತೆ ಜಾರಿಗೆ ತಂದರೆ ಜನರಮೇಲೆ ಬಾರ ಹೆಚ್ಚಾಗುತ್ತದೆ. ಆದ್ದರಿಂದ ಆಕ್ಟ್ರಾಯ್ ಮತ್ತೆ ಜಾರಿಗೆ ತರುವಂಥ ವಿಚಾರ ಸರ್ಕಾರದಲ್ಲಿ ಇಲ್ಲವೆಂದು ಹೇಳಿರುವ ಬಗ್ಗೆ ಅನುಮೋದಿಸಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರಿ ಎ. ಲಕ್ಷ್ಮೀಸಾಗರ್.—ಇದರ ಬಗ್ಗೆ ಉತ್ತರ ಕೊಟ್ಟಿದ್ದೇನೆ. ನಿವೇಶನ ವಿತರಣೆ ಬಗ್ಗೆ ಅಧ್ಯತೆ ಮೇರೆಗೆ ಯಾರಿಗೆ ಕೊಡಬೇಕೋ ಅವರಿಗೆ ಕೊಡಬೇಕೆಂದು ನಗರ ಯೋಜನಾ ಮಂಡಲಿಯ ಅಧ್ಯಕ್ಷರಿಗೆ ಹೇಳಿದ್ದೇನೆ. ಜಮೀನು ತೆಗೆದುಕೊಂಡು ಅವರಿಗೆ ಹಂಚತಕ್ಕ ಕಾರ್ಯಕ್ರಮವನ್ನು ಈಗಾಗಲೇ ತೆಗೆದುಕೊಂಡಿದ್ದಾರೆ. ಫಲವತ್ತಾದ ಭೂಮಿಯ ಬಗ್ಗೆ ಹೇಳಿದರು. ಇದರ ಬಗ್ಗೆ ನನಗೆ ಅಧಿಕಾರ ಇಲ್ಲ. ಪತ್ರ ಬರೆದರೆ ವಿಚಾರ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳುತ್ತೇನೆ.

ಶ್ರೀ ಮಲ್ಲಾರಿಗೌಡ, ಎಸ್. ಪಾಟೀಲ್.—ಮಾನ್ಯ ಮುಖ್ಯಮಂತ್ರಿಗಳು ಸಂಕೇಶ್ವರಕ್ಕೆ ಹೋದ ತಿಂಗಳು ಬಂದಾಗ ಇಲ್ಲಿ ಕುಡಿಯುವ ನೀರಿನ ವ್ಯವಸ್ಥೆಗಾಗಿ ಒಂದೂವರೆ ಕೋಟಿ ರೂಪಾಯಿ ಮಂಜೂರು ಮಾಡುತ್ತೇನೆ. ಎಂದು ಹೇಳಿದರು. ಹಿಡಕಲ್ ಜಲಾಶಯದಿಂದ ನೀರು ತರುವ ಈ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಸುಮಾರು ಎರಡು ಮೂರು ಸಾರಿ ಈ ಪ್ರಶ್ನೆಗೆ ನಾನು ಉತ್ತರ ಕೊಟ್ಟಿದ್ದೇನೆ. ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಇದನ್ನು ಸೇರಿಸತ್ತೇವೆ ಎಂದು ಮುಖ್ಯಮಂತ್ರಿಯವರೂ ಕೂಡ ಅಶ್ವಾಸನೆ ಕೊಟ್ಟಿದ್ದಾರೆ. ಸೈಕ್ಲೋನ್‌ರಿಗ್ ಬೇಕು ಅಂತ ಅಲ್ಲಿಗೆ ಕಳಿಸಿದ್ದೂ ಆಯಿತು. ಮುನ್ನೂರು ನಾನೂರು ಅಡಿ ಹೋದರೂ ನೀರು ಸಿಗಲಿಲ್ಲ. ಎಲ್ಲಾ ಪ್ರಯತ್ನಗಳನ್ನೂ ಮಾಡಿದ್ದೇವೆ. ಮಾನ್ಯ ಸದಸ್ಯರ ಸಲಹೆಗಳನ್ನು ಗಮನದಲ್ಲಿಟ್ಟುಕೊಳ್ಳತ್ತೇವೆ. ೭ನೇ ಯೋಜನೆಯಲ್ಲಿ ಈ ಕೆಲಸವನ್ನು ಸೇರಿಸಿಕೊಳ್ಳುವುದಕ್ಕೆ ನಾವು ಸಾಕಷ್ಟು ಪ್ರಯತ್ನ ಮಾಡಿ ಸೇರಿಸಿಕೊಳ್ಳುತ್ತೇವೆ.

ಶ್ರೀ ಮಲ್ಲಾರಿಗೌಡ. ಎಸ್. ಪಾಟೀಲ್.—ಪ್ರತಿದಿನವೂ ಒಂದೊಂದು ಹೇಳಿಕೆ ಪತ್ರಿಕೆಯಲ್ಲಿ ಬರುತ್ತದೆ. ಕೆರೆಯಿಂದ ನೀರು ತರುತ್ತೇವೆ ಎಂದು ಕೂಡ ಹೇಳಿದ್ದೀರಿ...

ಶ್ರೀ ಎ. ಲಕ್ಷ್ಮೀಸಾಗರ್.—ಪತ್ರಿಕೆಯಲ್ಲಿ ನಾನು ಎಲ್ಲೂ ಹೇಳಿಕೆ ಕೊಟ್ಟಿಲ್ಲ. ಉತ್ತರ ಕೊಟ್ಟಿದ್ದೇನೆ ಮತ್ತು ಅದರ ಪ್ರಕಾರ ನಡೆದುಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಚ್. ಬಿ. ದಾಮ್ಮರಪ್ಪ.—ಮಾಲೂರು ನಗರದಲ್ಲಿ ಮುನ್ಸಿಫ್ ಕೋರ್ಟ್ ಆಗಿದೆ. ಇಲ್ಲಿ ಡಿಸ್ಟ್ರಿಕ್ಟ್ ಕೋರ್ಟು ಬೇಕೆಂಬ ಬೇಡಿಕೆ ಬಹುದಿನಗಳಿಂದಲೂ ಇದೆ. ಕಟ್ಟಡಕ್ಕೆ ಬೇಕಾದಷ್ಟು ಜಾಗ ಇರುವಾಗ, ಮಾನ್ಯ ಮಂತ್ರಿಗಳು ಖುದ್ದಾಗಿ ಸಾಧ್ಯವಾದಷ್ಟು ಬೇಗ ಫೌಂಡೇಶನ್ ಹಾಕುವ ವ್ಯವಸ್ಥೆ ಮಾಡುತ್ತೀರಾ ? ಎರಡನೆಯದು, ಮಾಲೂರು ಟೌನ್ ಬೋರ್‌ವೆಲ್‌ಗಳು ಇರತಕ್ಕಂಥ ಜಾಗ. ಎರಡು ವರ್ಷಗಳ ಹಿಂದೆ ಹಾಕಿದ ಬೋರ್‌ವೆಲ್‌ಗಳು ಈಗ ಒಣಗಿಹೋಗಿ, ಅಲ್ಲಿ ನೀರು ಇಲ್ಲ. ಆದ್ದರಿಂದ ಹೊಸದಾಗಿ ನಾಲ್ಕು ಬೋರ್‌ವೆಲ್‌ಗಳನ್ನು ಹಾಕಲಿಕ್ಕೆ ಮಂತ್ರಿಗಳು ಭರವಸೆ ಕೊಡಬೇಕು ಇದು ಬಹಳ ಸಣ್ಣ ಊರು. ೨೦ ಸಾವಿರ ಜನಸಂಖ್ಯೆ ಇದೆ. ಹಣಕಾಸಿನ ಅನುಕೂಲ ಬಹಳ ಕಡಿಮೆ ಇದ್ದರೂ ಕೂಡ ಆರು ತಿಂಗಳು ಈಚೆಗೆ ಹೇಗೋ ಹಣ ವಸೂಲು ಮಾಡಿ ಹತ್ತು

ಲಕ್ಷ ರೂಪಾಯಿ ಖರ್ಚು ಮಾಡಿ ರಸ್ತೆ ಮಾಡಿ ಟಾರು ಹಾಕಿದ್ದಾರೆ. ಎಲ್ಲ ದುಡ್ಡೂ ಖರ್ಚಾಗಿದೆ. ಆದ್ದರಿಂದ ಅನುದಾನ ಕೊಡುವಾಗ ಮಾನ್ಯ ಮಂತ್ರಿಗಳು ಹೆಚ್ಚು ಹಣ ಕೊಡಬೇಕೆಂದು ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಕೋರ್ಟು ಈಗಾಗಲೇ ಮಾಡಿದ್ದೇವೆ. ಕಟ್ಟಡ ಕೊಡಬೇಕೆಂದು ಹೇಳಿದ್ದಾರೆ. ಆದ್ಯತೆ ಮೇರೆಗೆ ಹಂತಹಂತವಾಗಿ ಕೆಲಸ ತೆಗೆದುಕೊಳ್ಳುವ ಪ್ರಯತ್ನ ಈವರ್ಷದಿಂದ ಪ್ರಾರಂಭ ಮಾಡಿದ್ದು, ಈ ಕಟ್ಟಡ ಕೆಲಸ ತೆಗೆದುಕೊಳ್ಳುವ ಕಾರ್ಯಕ್ರಮವನ್ನು ಅಳವಡಿಸಿಕೊಂಡಿದ್ದೇವೆ. ಹಂತಹಂತವಾಗಿ ಇದನ್ನು ಒದಗಿಸಿಕೊಡಲಾಗುವುದು ಎಂಬ ಮಾತನ್ನು ಹೇಳಿದ್ದೇನೆ. ಇನ್ನು, ಬೋರ್‌ವೆಲ್ ಬೇಕು ಎಂದು ಕೇಳಿದ್ದಾರೆ. ನೋಡೋಣ, ಎಷ್ಟು ಸಾಧ್ಯವೋ ಅಷ್ಟು ಕೊಡುವುದಕ್ಕೆ ಪ್ರಯತ್ನ ಮಾಡೋಣ. ಆ ಮೇಲೆ ಮುನಿಸಿಪಾಲಿಟಿಗೆ ಅನುದಾನ ಕೊಡುವ ಬಗ್ಗೆ ಎಲ್ಲಾ ಮುನಿಸಿಪಾಲಿಟಿಗಳಿಗೆ ಅನುದಾನ ಕೊಡುವ ಬಗ್ಗೆ ಎಲ್ಲಾ ಮುನಿಸಿಪಾಲಿಟಿಗಳಿಗೆ ಏನು ಕೊಡುತ್ತೇವೋ ದಾಮಾಶಂ ಪ್ರಕಾರ ಅವರಂತೆ ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೆ, ಸಂಡೂರಿನಲ್ಲಿ ಕೋರ್ಟು ಕಟ್ಟಡಗಳನ್ನು ಪ್ರಾರಂಭಿಸಬೇಕೆಂದು ಪ್ರಪೋಸಲ್ ಬಹಳ ದಿವಸಗಳಿಂದ ಇದೆ. ಇದು ಮಾನ್ಯ ಸಚಿವರಿಗೆ ಗೊತ್ತಿದೆಯೆಂದು ಭಾವಿಸುತ್ತೇನೆ. ನಗರ ಪ್ರದೇಶಕ್ಕೆ ಕುಡಿಯುವ ನೀರಿನ ಪ್ರಶ್ನೆ ಬಂದಾಗ ಮಾನ್ಯ ಸಚಿವರನ್ನೇ ಕೇಳಬೇಕಾಗುತ್ತದೆ. ಆದ್ದರಿಂದ ಸಂಡೂರಿಗೆ ಸಾಧ್ಯವಾದಷ್ಟು ಬೋರ್‌ವೆಲ್‌ಗಳನ್ನು ಹಾಕಿಸಲಿಕ್ಕೆ ಸೂಕ್ಷ್ಮವಾದ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಕೋರ್ಟುಬೇಕೆಂದು ಕೇಳಿದ್ದಾರೆ. ಇದಕ್ಕೆ ಹೈಕೋರ್ಟಿನ ಒಪ್ಪಿಗೆ ಬೇಕಾಗುತ್ತದೆ. ಅದಕ್ಕೆ ಕೆಲವು ನಾರ್ಮ್ಸ್ ಇವೆ. ಯಾವ ಪ್ರಮಾಣದಲ್ಲಿ ಕ್ರಿಮಿನಲ್, ಸಿವಿಲ್ ಮತ್ತು ಇತರೆ ಕೇಸುಗಳು ಇರಬೇಕೆಂದು ಇದೆ. ಕನಿಷ್ಟ ಪ್ರಮಾಣದಲ್ಲಿ ಇತ್ಯರ್ಥವಾಗದೇ ಇದ್ದರೆ ಅಲ್ಲಿ ಕೋರ್ಟು ಸ್ಥಾಪನೆ ಮಾಡುವುದಕ್ಕೆ ಹೈಕೋರ್ಟಿನವರು ಪರವಾನಗಿಯನ್ನು ಕೊಡಬೇಕು. ಅವರು ಒಪ್ಪಿಕೊಳ್ಳದ ಹೊರತು ಇದನ್ನು ಮಾಡುವುದಕ್ಕೆ ಆಗುವುದಿಲ್ಲ. ಅವರು ಪರವಾನಗಿ ಕೊಟ್ಟು ಮಾಡಬಹುದು ಎಂದು ಹೇಳಿದರೆ ಮಾಡಲಿಕ್ಕೆ ನಾನು ಸಿದ್ಧನಾಗಿದ್ದೇನೆ ಇದು ಒಂದೇ ಸಲ ಎಲ್ಲಾ ಕಡೆಯೂ ಆಗುವುದಿಲ್ಲ. ಹಂತಹಂತವಾಗಿ ೩೨ ತಾಲ್ಲೂಕುಗಳಲ್ಲಿ ಆಗಬೇಕಾಗಿದೆ. ವರ್ಷಕ್ಕೆ ನಾಲ್ಕೈದು ಕೋರ್ಟುಗಳನ್ನು ಎಲ್ಲಾ ತಾಲ್ಲೂಕುಗಳಲ್ಲಿ ತೆರೆಯುವುದಕ್ಕೆ ಪ್ರಯತ್ನ ಮಾಡುತ್ತೇವೆ ಆ ಮೇಲೆ ಬೋರ್‌ವೆಲ್ಸ್ ಬಗ್ಗೆ ಕೇಳಿದ್ದಾರೆ. ವರದಿ ತರಿಸಿ ನೋಡುತ್ತೇನೆ

ಶ್ರೀ ಬಸವರಾಜ ಹಾವಗಪ್ಪ ಪಾಟೀಲ್.—ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಬೀದಿದೀಪಗಳ ಖರ್ಚನ್ನು ಸರ್ಕಾರವೇ ವಹಿಸಬೇಕೆಂದು ಇದೆ ಹಾಗಾದರೆ ನಗರ ಸಭೆಗಳ ವ್ಯಾಪ್ತಿಯಲ್ಲಿ ಬರುವ ಬೀದಿದೀಪಗಳನ್ನು ಸರ್ಕಾರವೇ ವಹಿಸಿಕೊಳ್ಳಬೇಕೆಂಬ ವಿಚಾರ ಇದೆಯೇ ? ಎರಡನೆಯದಾಗಿ ಬೀದರ್ ಜಿಲ್ಲೆಯಲ್ಲಿ ಜ್ಯೂಡಿಶಿಯಲ್ ಮ್ಯಾಜಿಸ್ಟ್ರೇಟ್ ಕೋರ್ಟು ತೆರೆಯುವ ಬಗ್ಗೆ ಹೈಕೋರ್ಟಿನಲ್ಲಿ ಪೆಂಡಿಂಗ್ ಇದೆ. ಮಾನ್ಯ ಮಂತ್ರಿಗಳ ಹೇಳಿದಂತೆ ಎಲ್ಲಾ ನಾರ್ಮ್ಸ್‌ಗಳೂ ಇಲ್ಲಿವೆ. ಇದು ನ್ಯಾಯವಾಗಿ ಹುಮ್ನಾಬಾದಿನಲ್ಲೇ ಆಗಬೇಕು. ಇಲ್ಲಿ ಎಲ್ಲಾ ವ್ಯವಸ್ಥೆಯೂ ಇದೆ. ಆದ್ದರಿಂದ ಹುಮ್ನಾಬಾದಿನಲ್ಲೇ ಈ ಕೋರ್ಟನ್ನು ತೆರೆಯುವ ವ್ಯವಸ್ಥೆ ಮಾಡುತ್ತೀರಾ ಮತ್ತು......

ಅಧ್ಯಕ್ಷರು.—ಕ್ಲಾರಿಫಿಕೇಶನ್ ಕೇಳಿ ಎಂದರೆ, ಇದೇನು ಭಾಷಣವನ್ನೇ ಶುರುಮಾಡಿದ್ದೀರಲ್ಲ

ಶ್ರೀ ಬಸವರಾಜ ಹಾವಗಪ್ಪ ಪಾಟೀಲ್.—ಕಾರ್ಪೊರೇಷನ್ ಏರಿಯಾದಲ್ಲಿ ಶಾಸಕರಿಗೆ ಮೆಂಬರ್ ಅಂತ ಟ್ರೀಟ್ ಮಾಡುತ್ತಾರೆ. ಆದರೆ ಟೌನ್ ಮುನಿಸಿಪಾಲಿಟಿ ಏರಿಯಾದಲ್ಲಿ ಎಂ. ಎಲ್. ಎ. ಗಳನ್ನು ಕರೆಯುವುದೇ ಇಲ್ಲ. ನಗರ ಪ್ರದೇಶದಲ್ಲಿ ಶಾಸಕರು ಇದ್ದರೂ ಅವರು ಇದಕ್ಕೆ ಸಂಬಂಧಪಡದವರಂತೆ ಇರಬೇಕಾದ ಪರಿಸ್ಥಿತಿ ಇದೆ. ಆದ್ದರಿಂದ ಎಂ. ಎಲ್. ಎ. ಗಳನ್ನು ವಿಶೇಷ ಆಹ್ವಾನಿತರಾಗಿ ಪರಿಗಣಿಸುವುದಕ್ಕೆ ಒಂದು ಕಾನೂನು ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಎಂ. ಎಲ್. ಎ. ಗಳನ್ನು ಸ್ಥಳೀಯ ಸಂಸ್ಥೆಗಳ ಸಭೆಗಳಿಗೆಕರೆಯ ತಕ್ಕಂಥ ವಿಷಯ ಪ್ರಸ್ತಾಪ ಮಾಡಿದ್ದಾರೆ. ಇದಕ್ಕೆ ವಿರೋಧವಾಗಿಯೂ ಮತ್ತು ಪರವಾಗಿಯೂ ಅಭಿಪ್ರಾಯ ಇದೆ. ಇದಕ್ಕೆ ಕಾನೂನು ತಿದ್ದುಪಡಿಯನ್ನು ತರುವ ಯೋಜನೆ ಮಾಡುತ್ತಿದ್ದೇವೆ ಆಮೇಲೆ ಸಿಟಿ ಜ್ಯೂಡಿಶಿಯಲ್ ಕೋರ್ಟ್ ಅನ್ನು ಬೀದರ್ ಜಿಲ್ಲೆಯ ಹುಮ್ನಾಬಾದಿನಲ್ಲಿ ಕೊಡುವ ವಿಚಾರ ಇಲ್ಲಿ ಕೊಡಬೇಕೆಂದೂ ಮತ್ತು ಬೇಡವೆಂದೂ ಅಭಿಪ್ರಾಯ ಇದೆ. ಉಭಯ ಕಡೆಯಲ್ಲೂ ತೀರ್ಮಾನವಾದ ಮೇಲೆ ಇದರ ಬಗ್ಗೆ ತೀರ್ಮಾನ ಮಾಡುತ್ತೇವೆ, ಮುನಿಸಿಪಾಲಿಟಿಗಳಲ್ಲಿ ಬೀದಿ ದೀಪ ಖರ್ಚು ಭರಿಸುವುದಕ್ಕೆ ಸರ್ಕಾರ ಮಧ್ಯೆ ಪ್ರವೇಶ ಮಾಡುವ ಪ್ರಶ್ನೆ ಬರುವುದಿಲ್ಲ.

ಶ್ರೀ ಡಿ. ಎ. ಚಿನ್ನಪ್ಪ.—ಈಗಿರುವ ಹಳೆಯ ಹೈಕೋರ್ಟ್ ಕಟ್ಟಡ ಕೆಡವಿ ಹೊಸ ಕಟ್ಟಡ ಕಟ್ಟುವ ವಿಚಾರ ಎಲ್ಲಿಯವರೆಗೆ ಬಂದಿದೆ ?

ಶ್ರೀ ಎ. ಲಕ್ಷ್ಮೀಸಾಗರ್.—ಈ ವಿಷಯ ಸುಪ್ರೀಂ ಕೋರ್ಟಿಗೆ ಹೋಗಿದ್ದು ತೀರ್ಮಾನ ಏನು ಎಂದು ನೇರವಾಗಿ ಗೊತ್ತಿಲ್ಲ.

ಶ್ರೀ ಸಿ. ಎಂ. ಉದಾಸಿ.—೨೦ ಸಾವಿರ ಕಡಿಮೆ ಇರುವ ಪುರಸಭೆಗೆ ಕುಡಿಯುವ ನೀರಿಗಾಗಿ ಶೇಕಡಾ ಹತ್ತರಷ್ಟು ಕೂಡ ಬೇಕಾದ ಹಣವನ್ನು ಸರ್ಕಾರವೇ ಭರಿಸಬೇಕು ಎನ್ನುವ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಏನು ಕ್ರಮ ಕೈಗೊಳ್ಳುತ್ತಾರೆ ?

ಶ್ರೀ ಎ. ಲಕ್ಷ್ಮೀಸಾಗರ್.- ಮುನಿಸಿಪಾಲಿಟಿಯವರು ಹತ್ತು ಪರ್ಸೆಂಟ್ ಕೊಡಬೇಕಾಗಿಲ್ಲವೆಂದು ನಾನು ಎಲ್ಲೂ ಹೇಳಿಲ್ಲ.

ಶ್ರೀ ಸಿ. ಎಂ. ಉದಾಸಿ.—ಹಿಂದೆ ಶ್ರೀ ಕೃಷ್ಣಯ್ಯರ್ ಅವರು ಸಚಿವರಾಗಿದ್ದಾಗ ಹೇಳಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್ —ನಾನು ಈ ಮಾತನ್ನು ಹೇಳಿಲ್ಲ. ಎಲ್ಲಾ ಹಣವನ್ನೂ ಸರ್ಕಾರದಿಂದ ನಿರೀಕ್ಷೆ ಮಾಡುವುದು ತಪ್ಪಾಗುತ್ತದೆ. ಆದ್ದರಿಂದ ಈ ಹಣ ಕೊಡಬೇಕಾಗುತ್ತದೆ. ಈ ಈ ವಿಚಾರದಲ್ಲಿ ಹೆಚ್ಚಿಗೆ ಹೇಳಬೇಕಾದುದು ಏನೂ ಇಲ್ಲ.

ಶ್ರೀ ಕೆ. ಬಿ. ಶಾಣಪ್ಪ —ನಮ್ಮ ಷಹಬಾದ್‌ನಲ್ಲಿ ಆಗ್‌ಮೆಂಟೇಷನ್ ಆಫ್ ವಾಟರ್ ಸಪ್ಲೈ ಸ್ಕೀಮನ್ನು ೮೭ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಪ್ರಾರಂಭ ಮಾಡಿದ ಮೇಲೆ ಸ್ಟೇ ತರಲಾಗಿದೆ. ಈಗ ಕೆಲಸ ಬಂದ್ ಆಗಿದೆ. ಅಲ್ಲಿನ ಮುನಿಸಿಪಾಲಿಟಿಯವರು ಎಲ್. ಐ. ಸಿ. ನವರಿಗೆ ಪ್ರತಿವರ್ಷವೂ ೪೦ ಸಾವಿರ ರೂಪಾಯಿಗಳಷ್ಟು ಬಡ್ಡಿ ಕಟ್ಟುತ್ತಿದ್ದಾರೆ. ಈ ಕಾರಣದಿಂದ ಕೂಡಲೇ ಈ ಕೆಲಸವನ್ನು ಮುಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ? ಎರಡನೆಯದಾಗಿ ಈಗ ನಮ್ಮ ಷಹಬಾದ್‌ನಲ್ಲಿರುವ ಕೋರ್ಟಿನ ಕಟ್ಟಡ ಬಹಳ ಚಿಕ್ಕದಾಗಿರುವುದರಿಂದ ಹೊಸ ಕಟ್ಟಡವನ್ನು ಕಟ್ಟಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್.—ಷಹಬಾದ್‌ನ ನೀರು ಸರಬರಾಜು ಯೋಜನೆಯ ವಿವರ ಈಗ ನನ್ನ ಹತ್ತಿರ ಇಲ್ಲ. ಈ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳುವಂತೆ ನಾನು ಕೆ. ಯು. ಡಬ್ಲ್ಯು. ಎಸ್ ಅಂಡ್ ಎಸ್. ಬಿ. ಅವರಿಗೆ ಹೇಳುತ್ತೇನೆ. ಇನ್ನು ಕೋರ್ಟಿನ ಕಟ್ಟಡದ ಬಗ್ಗೆ ಹಂತಹಂತವಾಗಿ ಕೆಲಸ ನಡೆಯಬೇಕಾಗುತ್ತದೆ. ಇದಕ್ಕೂ ಪೂರ್ವಭಾವಿಯಾಗಿ ಹೈಕೋರ್ಟಿನವರು ಒಪ್ಪಿಕೊಳ್ಳಬೇಕು. ಸರ್ಕಾರ ಹಣ ಒದಗಿಸುವ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತದೆ. ಅಲ್ಲಿ ಆದಷ್ಟೂ ಬೇಗ ಕಟ್ಟಡ ಕಟ್ಟುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ಶಿವಣ್ಣ.—ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆಗೆ ಒಂದು ಕೋರ್ಟನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ? ಮತ್ತೆ ನಿವೇಶನ ಇಲ್ಲದವರಿಗೆ ನಿವೇಶನ ಕೊಡಲು ಸರ್ಕಾರದವರು ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಸಂದರ್ಭದಲ್ಲಿ ಜಮೀನಿನ ಮಾಲೀಕರು ನಿವೇಶನಗಳಿಗೆ ಜಮೀನನ್ನು ಕೊಡಬಾರದೆಂದು ಕೊಂಡು ಕೋರ್ಟಿನಿಂದ ಸ್ಟೇ ತರುತ್ತಾರೆ. ಇಂತಹ ಪ್ರಕರಣಗಳು ಕೋರ್ಟಿನಲ್ಲಿ ೨-೩ ವರ್ಷಗಳಾದರೂ ಇತ್ಯರ್ಥವಾಗುವುದಿಲ್ಲ. ನನ್ನ ಕ್ಷೇತ್ರದಲ್ಲಿ ನಾಲಾ ಕೆಲಸ ಪ್ರಾರಂಭ ಮಾಡಿದಾಗ ೫ ಗ್ರಾಮಗಳ ಜನರಿಗೆ ಬೇರೆ ಕಡೆ ನಿವೇಶನ ಕೊಡಬೇಕಾದ ಪ್ರಸಂಗ ಬಂತು. ಇಂತಹ ಸಂದರ್ಭದಲ್ಲಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಹೋದಾಗ ಸಂಬಂಧಪಟ್ಟವರು ಕೋರ್ಟಿಗೆ ಹೋಗಿದ್ದಾರೆ. ಆದ್ದರಿಂದ ಇಂತಹ ಪ್ರಕರಣಗಳನ್ನು ಜಾಗ್ರತೆ ಇತ್ಯರ್ಥಪಡಿಸಿ ಸೈಟ್‌ಗಳನ್ನು ಹಂಚಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ನಗರ ಪ್ರದೇಶಗಳಲ್ಲಿರುವಂತಹ ಸ್ಥಳೀಯ

ಸಂಸ್ಥೆಗಳು ತಮ್ಮ ಆದಾಯದಲ್ಲಿ ಶೇಕಡಾ ೧೮ ರಷ್ಟು ಹಣವನ್ನು ಹರಿಜನ ಮತ್ತು ಗಿರಿಜನ ಅಭಿವೃದ್ಧಿಗೆ ಮೀಸಲಿಟ್ಟರೂ ಸಹ ಈ ಜನರ ಬಗ್ಗೆ ಅವರು ಚಿಂತನೆಯನ್ನೇ ಮಾಡುತ್ತಿಲ್ಲ. ಪೌರ ಕಾರ್ಮಿಕರ ಮಕ್ಕಳಿಗೆ ವಿದ್ಯಾಭ್ಯಾಸ ಕಲಿಸಲು ಯಾವ ವ್ಯವಸ್ಥೆಯನ್ನೂ ಮಾಡಿಲ್ಲ. ಈ ಜನರ ಅಭಿವೃದ್ಧಿ ಬಗ್ಗೆ ಯಾವ ರೀತಿಯ ಚಿಂತನೆಯನ್ನೂ ಮಾಡಿದಂತೆ ಕಾಣುತ್ತಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಈ ಬಗ್ಗೆ ಸರಿಯಾದಂಥ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಹೆಗ್ಗಡದೇವನಕೋಟೆಗೆ ಮುನ್ಸೀಫ್ ಮ್ಯಾಜಿಸ್ಟ್ರೇಟ್ ಕೊಡುವ ವಿಚಾರ ಹೈಕೋರ್ಟಿನ ಮುಂದಿದೆ. ಅವರು ಈ ಬಗ್ಗೆ ತೀರ್ಮಾನ ತೆಗೆದುಕೊಂಡ ಕ್ಷಣ ನಾವು ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆಂದು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಸೈಟ್‌ಗಳ ಹಂಚಿಕೆಗಾಗಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಹಂತದಲ್ಲಿ ಭೂಮಾಲೀಕರು ಕೋರ್ಟಿಗೆ ಹೋಗುತ್ತಾರೆಂದು ಹೇಳಿದ್ದಾರೆ. ಈ ಬಗ್ಗೆ ಉತ್ತರ ಕೊಟ್ಟಿದ್ದೇನೆ. ಇದಕ್ಕೆ ಸಂಬಂಧಪಟ್ಟ ಎಲ್ಲ ವಿವರಗಳನ್ನು ಪಟ್ಟಿ ಮಾಡಿ ನಾವು ಹೈಕೋರ್ಟಿಗೆ ಮನವಿ ಸಲ್ಲಿಸಿದ್ದೇವೆ. ಮತ್ತು ಬೇಗ ಈ ಪ್ರಕರಣಗಳನ್ನು ಇತ್ಯರ್ಥ ಮಾಡಬೇಕೆಂದು ಹೇಳಿದ್ದೇವೆ. ಇದು ಈಗ ಹೈಕೋರ್ಟಿನ ಕೈಯಲ್ಲಿದೆ. ಅವರು ಬೇಗ ತೀರ್ಮಾನ ಮಾಡಿದರೆ ನಾವು ಸೈಟ್‌ಗಳನ್ನು ಹಂಚುವ ಕೆಲಸ ಮಾಡುತ್ತೇವೆ. ಮತ್ತೆ ಪೌರಕಾರ್ಮಿಕರಿಗೆ ಅನುಕೂಲ ಕಲ್ಪಿಸಿಕೊಡುವ ಬಗ್ಗೆ ಚಿಂತನೆ ಮಾಡುತ್ತಿಲ್ಲವೆಂದು ಹೇಳಿದ್ದಾರೆ. ಇವರಿಗೆ ಎಲ್ಲ ರೀತಿಯ ಅನುಕೂಲಗಳನ್ನು ಕಲ್ಪಿಸಿಕೊಡುವಂತಹ ಉದ್ದೇಶವನ್ನು ನಾವು ಇಟ್ಟುಕೊಂಡಿದ್ದೇವೆ.

ಶ್ರೀ ಪಂಪಾಪತಿ.—ನಮ್ಮ ದಾವಣಗೆರೆಗೆ ಸಿವಿಲ್ ಜಡ್ಜ್ ಕೋರ್ಟು ಹನ್ನೊಂದು ವರ್ಷಗಳ ಹಿಂದೆ ಬಂತು. ಆಗ ಕೋರ್ಟ್ ಕೆಲಸ ನಡೆಸಲು ನಗರಸಭಾ ಕಟ್ಟಡವನ್ನು ಬಿಟ್ಟುಕೊಡಲಾಯಿತು. ಅಲ್ಲಿಂದ ಇಲ್ಲಿಯವರೆಗೆ ಬೇರೆ ಕಟ್ಟಡವನ್ನು ಕಟ್ಟಿಸಿಲ್ಲ. ಆದಷ್ಟು ಜಾಗ್ರತೆ ಅಲ್ಲಿ ಕೋರ್ಟು ಕಟ್ಟಡವನ್ನು ಕಟ್ಟಿಸಲು ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಮತ್ತೆ ನೀರಿನ ವ್ಯವಸ್ಥೆ ಬಗ್ಗೆ ಹೇಳಿದ್ದಾರೆ. ಬಹಳ ಸಂತೋಷ. ಈ ಬಗ್ಗೆ ಮಾನ್ಯ ಮಂತ್ರಿಗಳು ನೀರಾವರಿ ಮಂತ್ರಿಗಳ ಜೊತೆ ಸಮಾಲೋಚನೆ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಈಗ ಅಲ್ಲಿ ನೀರಿನ ತೊಂದರೆ ಇರುವುದರಿಂದ ೨೦ ಬೋರ್‌ವೆಲ್‌ಗಳನ್ನಾದರೂ ಹಾಕಿಸುವುದಕ್ಕೆ ಮಾನ್ಯ ಮಂತ್ರಿಗಳು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಇನ್ನು ನಗರಸಭೆಗಳಲ್ಲಿ ಬಹಳ ವರ್ಷಗಳಿಂದ ಸಿಬ್ಬಂದಿ ವರ್ಗ ಇದ್ದಷ್ಟೇ ಇದೆ. ಜಾಸ್ತಿ ಮಾಡಿಲ್ಲ. ದಾವಣಗೆರೆಯ ಜನಸಂಖ್ಯೆಯು ಬೆಳೆದಂತೆ ಇಲ್ಲಿಯ ಕೆಲಸಗಳೂ ಸಹ ಜಾಸ್ತಿಯಾಗಿದೆ. ಆದ್ದರಿಂದ ದಿನಗೂಲಿ ಮೇಲೆ ಕೆಲವರು ಕೆಲಸ ಮಾಡುತ್ತಿದ್ದಾರೆ. ಇಂತಹವರನ್ನು ತಾವು ಖಾಯಂಗೊಳಿಸುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಕೋರ್ಟ್ ಕಟ್ಟಡದ ಬಗ್ಗೆ ಹೇಳಿದ್ದಾರೆ. ಕೋರ್ಟ್ ಕಾಂಪ್ಲೆಕ್ಸ್ ಕಟ್ಟಡಗಳನ್ನು ಕಟ್ಟಿಸುವ ಬಗ್ಗೆ ನಾವು ವಿಚಾರ ಮಾಡಿದ್ದೇವೆ. ಆದರೆ ಇದನ್ನು ಹಂತಹಂತವಾಗಿ ಮಾಡಬೇಕಾಗುತ್ತದೆ. ಈ ವರ್ಷ ಹಲವಾರು ಕಟ್ಟಡಗಳನ್ನು ಕಟ್ಟಿಸಬೇಕೆಂದು ತೀರ್ಮಾನವಾಗಿದೆ. ಆದ್ದರಿಂದ ಮಾನ್ಯ ಸದಸ್ಯರ ಸಲಹೆಯನ್ನು ಸಹ ನಾನು ಗಮನದಲ್ಲಿಟ್ಟುಕೊಳ್ಳುತ್ತೇನೆ. ಮತ್ತೆ ಬೋರ್‌ವೆಲ್‌ಗಳನ್ನು ಹಾಕಿಸಬೇಕೆಂದು ಕೇಳಿದ್ದಾರೆ. ಈ ಬಗ್ಗೆ ಎಷ್ಟು ಸಾಧ್ಯವೋ ಅಷ್ಟು ಬೋರ್‌ವೆಲ್‌ಗಳನ್ನು ಹಾಕಿಸಲು ಪ್ರಯತ್ನ ಮಾಡುತ್ತೇವೆ. ಮತ್ತೆ ದಿನಗೂಲಿ ನೌಕರರನ್ನು ಖಾಯಂ ಮಾಡಬೇಕೆಂದು ಕೇಳಿದ್ದಾರೆ. ಈಗಿರುವವರನ್ನೆಲ್ಲಾ ಖಾಯಂ ಮಾಡಬೇಕೆಂದರೆ ಕಷ್ಟವಾಗುತ್ತದೆ. ರೋಸ್ಟರ್ ಆಧಾರದ ಮೇಲೆ ಇವರನ್ನು ಖಾಯಂ ಮಾಡಬೇಕಾಗುತ್ತದೆ. ಆದ್ದರಿಂದ ಕಾನೂನು ಪ್ರಕಾರ ಈ ಬಗ್ಗೆ ಕ್ರಮ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇವೆ,

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ಮಂತ್ರಿಗಳನ್ನು ಮುಖ್ಯ ಮಂತ್ರಿಗಳು ಜೈಲು ಮಂತ್ರಿಗಳನ್ನಾಗಿ ಮಾಡಿ, ಈಗಿರುವ ಜೈಲು ಮಂತ್ರಿಗಳನ್ನು ಇವರ ಜಾಗಕ್ಕೆ ತಂದರೆ ಒಳ್ಳೆಯದಾಗುತ್ತದೆಂದು ನಾನು ಸಲಹೆ ಕೊಡುತ್ತೇನೆ.

ಅಧ್ಯಕ್ಷರು.—ಎಲ್ಲರಿಗೂ ಕ್ಲಾರಿಫಿಕೇಷನ್ ಕೇಳಲು ಅವಕಾಶ ಮಾಡಿಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು. ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ.

"೩೧-೩-೧೯೮೬ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ ೩೨,೩೩, ೩೬ ಮತ್ತು ೩೭ ಇವುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಡಬೇಕು.

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಯನ್ನು ಮಂಜೂರು ಮಾಡಲಾಯಿತು.

(ಮಾನ್ಯ ಸಭಾಧ್ಯಕ್ಷರ ಅಪ್ಪಣೆ ಮೇರೆಗೆ ಬೇಡಿಕೆಗಳನ್ನು ಪುನರ್ ನಮೂದಿಸಲಾಗಿದೆ,

ಬೇಡಿಕೆ ಸಂಖ್ಯೆ : 32 ನಗರಾಭಿವೃದ್ಧಿ ಇತ್ಯಾದಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಗರಾಭಿವೃದ್ಧಿ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೨,೪೪,೬೯,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೯,೫೦,೩೬,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.'

ಬೇಡಿಕೆ ಸಂಖ್ಯೆ : 33 ನಿಗಮ ಮತ್ತು ನಗರ ಪಾಲಿಕೆಗಳಿಗೆ ಅನುದಾನ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಿಗಮ ಮತ್ತು ನಗರ ಪಾಲಿಕೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವಖಾತೆಯಲ್ಲಿ ೫೯,೦೪,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳುತ್ತೇನೆ."

ಬೇಡಿಕೆ ಸಂಖ್ಯೆ : 36 ರಾಜ್ಯ ವಿಧಾನಸಭೆ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯ ವಿಧಾನಸಭೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩,೧೨,೪೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ."

ಬೇಡಿಕೆ ಸಂಖ್ಯೆ : 37 ನ್ಯಾಯ ಪರಿಪಾಲನೆ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನ್ಯಾಯ ಪರಿಪಾಲನೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೫,೯೩,೪೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿ ಕೊಳ್ಳುತ್ತೇನೆ".